ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು.

೬. ಹಕ್ಕುಚ್ಯುತಿ ಸೂಚನೆ :

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೇ ನಿಯಮ ೧೯೨ರ ಅಡಿಯಲ್ಲಿ ನಾನೊಂದು ನೋಟೀಸನ್ನು ಕೊಟ್ಟಿದ್ದೇನೆ. ಅದು ತಮಗೆ ಬಂದಿರಬೇಕೆಂದು ಅಂದುಕೊಂಡಿದ್ದೇನೆ. ನಮ್ಮ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ३೧.३.೨೦೦೭ ರಂದು ಜೈಪುರವೆಂಬ ಹೋಬಳಿ ಹೆಡ್ ಕ್ವಾಟ್ರಸ್ ಇದೆ. ಆ ಊರಿನಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಒಂದು ಸರ್ಕಾರಿ ಸಮಾರಂಭ. ಅಲ್ಲಿ ಪಿ.ಹೆಚ್. ಸಿ. ಆಸ್ಪತ್ರೆ ಇತ್ತು, ಅದನ್ನು ಈಗಿನ Health System ಕಾರ್ಯಕ್ರಮದ ಪ್ರಕಾರ upgrade ಮಾಡಿ ३೦ ಹಾಸಿಗೆಗಳ ಆಸ್ಪತ್ರೆಯನ್ನು ಮಾಡಿದ್ದಾರೆ. ಅದಾದ ಮೇಲೆ ಆರೋಗ್ಯ ಇಲಾಖೆಯವರು ನನ್ನ ಹತ್ತಿರ ಇಲ್ಲಿ ಕಟ್ಟಡ ಕಟ್ಟಬೇಕಾಗುತ್ತದೆ ಆ ಕಟ್ಟಡದ ಶಂಕು ಸ್ಥಾಪನೆ ಕಾರ್ಯಕ್ರಮಗಕ್ಕೆ ನೀವು ಬರಬೇಕೆಂದು ನನ್ನನ್ನು ಕರೆದರು. ಅಲ್ಲಿನ health system ನಲ್ಲಿರುವ ಅಧಿಕಾರಿ ನಮ್ಮ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಅವರಿಬ್ಬರು ಬಂದು ನನ್ನನ್ನು ಕರೆದಿದ್ದರು. ವಿಧಾನಸಭೆ ನಡೆಯುತ್ತಿದೆ, ನಾನು ಶನಿವಾರ ಮೈಸೂರಿಗೆ ಬರುತ್ತೇನೆ. ಆದ್ದರಿಂದ ಶನಿವಾರ ಅಥವಾ ಭಾನುವಾರವಾದರೆ ಬರುತ್ತೇನೆಂದು ಹೇಳಿದ್ದೆ. ಆದ್ದರಿಂದ ಅವರುಗಳು ३೧ನೇ ತಾರೀಖು ಆ ಕಟ್ಟಡಕ್ಕೆ ಅಡಿಗಲ್ಲನ್ನಾಕಿ ಪೂಜೆ ಮಾಡುವ ಕಾರ್ಯಕ್ರಮವನ್ನು ಏರ್ಪಾಟು ಮಾಡಿದ್ದರು. ३೦ ಬೆಡ್‌ಗಳ ಆಸ್ಪತ್ರೆಯಾಗಬೇಕಾದರೆ ದೊಡ್ಡ ಕಟ್ಟಡ ಬೇಕಾಗುತ್ತದೆ. ಈಗ ಇರತಕ್ಕ ಪಿ.ಹೆಚ್. ಸಿ. ಯಲ್ಲಿ ಮಾಡಲು ಆಗುವುದಿಲ್ಲವೆಂದು ಅದಕ್ಕೆ ದುಡ್ಡು ಬಿಡುಗಡೆಯಾಗಿದೆ. ಅದಕ್ಕೆ ನಾನು ಹೋಗಿದ್ದೆ. ಅವರು ಸಂಬಂಧಪಟ್ಟವರನ್ನೆಲ್ಲರನ್ನೂ ಕರೆದಿದ್ದಾರೆ. ಆ ರೀತಿ ಕರೆಯಬೇಕಾದ್ದು ಅವರ ಜವಾಬ್ದಾರಿ, ಕರೆದಿದ್ದಾರೆ. ಅದು ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕ ಕಾರ್ಯಕ್ರಮ. ತಾಲ್ಲೂಕು ಮಟ್ಟದಲ್ಲಿ ಬರತಕ್ಕ ಆಸ್ಪತ್ರೆಗಳೆಲ್ಲವೂ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತವೆ. ಅವರು ಲಿಖಿತವಾಗಿ ಆಹ್ವಾನ ಪತ್ರಿಕೆಯನ್ನು ಮಾಡಿಸಿಲ್ಲ. Oral ಆಗಿ ಎಲ್ಲರನ್ನೂ ಕರೆದಿದ್ದಾರೆ. ವಿಧ್ಯುಕ್ತವಾಗಿ oral ನನಗೂ ಹಾಗೆಯೇ ಕರೆದಿದ್ದಾರೆ. ಬೇರೆಯವರಗೂ, ಸಂಬಂಧಪಟ್ಟವರಿಗೆಲ್ಲರಿಗೂ ಹಾಗೆಯೇ ಕರೆದಿದ್ದಾರೆ.

ಅಧ್ಯಕ್ಷರು : ಜಿಲ್ಲಾಪಂಚಾಯಿತಿಯವರಾಗಲಿ, ಇನ್ನೊಬ್ಬರಾಗಲಿ, ಸರ್ಕಾರದ ಕಾರ್ಯಕ್ರಮವನ್ನು ಮಾಡಿದಾಗ ನಮ್ಮ ಮನೆಯಲ್ಲಿ ಒಂದು ಕಾರ್ಯಕ್ರಮವಿದೆ ಎನ್ನುವ ರೀತಿಯಲ್ಲಿ oral ಆಗಿ ಕರೆದರೆ ಹೇಗೆ ಮಾಡಲು ಆಗುತ್ತದೆ?

ಶ್ರೀ ಸಿದ್ದರಾಮಯ್ಯ : ಅದು technically ಸರಿಯಾಗಿದೆಯೋ ಇಲ್ಲವೋ ಎಂಬ ಬಗ್ಗೆ ಅನಂತರ ನೋಡೋಣ. ಆಹ್ವಾನವನ್ನು ಮಾಡಿದ್ದಾರೆ. Whether it is orally or through written invitation. That is a different issue. The issue is ನನ್ನನ್ನು ಕರೆದಿದ್ದಾರೆ. ಆ ಕಾರ್ಯಕ್ರಮವನ್ನು ಅವರು ಏರ್ಪಾಟು ಮಾಡಿದ್ದಾರೆ. ಅವರು ಹೇಳಿದ್ದ ಪ್ರಕಾರ ಆ ಕಾರ್ಯಕ್ರಮ ಇದ್ದದ್ದು ೩ ಗಂಟೆಗೆ. ನಾನು ೪ ಗಂಟೆಯಷ್ಟೊತ್ತಿಗೆ ಆ ಊರಿನ ಹತ್ತಿರ ಹೋದೆ. ಆ ರೀತಿ ಹೋದಾಗ ೫-೬ ವ್ಯಾನುಗಳು, ನೂರಾರು ಪೊಲೀಸ್ ನವರು, not only constables, civil police ನವರಲ್ಲ, D.A.R. ನವರು. Central Reserve Police ನವರು ಎಲ್ಲರೂ ಅಲ್ಲಿ ಠಿಕಾಣಿ ಹೂಡಿಬಿಟ್ಟಿದ್ದಾರೆ. ನಾನು ಆ ಊರಿನ ಹತ್ತಿರ ಹೋದತಕ್ಷಣವೇ ನಮ್ಮ ಕಾರ್ಯಕರ್ತರೆಲ್ಲರು ಸ್ವಾಗತ ಮಾಡಿದರು. ಆ ಕಾರ್ಯಕ್ರಮ, ಆ ಪೂಜೆ ಮಾಡಬೇಕಾಗಿದ್ದ ಕಟ್ಟಡ ಊರಿನಿಂದ ಕೆಳಗೆ ಸುಮಾರು ೫೦ ಮೀಟರ್ ದೂರದಲ್ಲಿದೆ. Function ಊರಿನಲ್ಲಿದೆ. ಊರಿನಿಂದ ಅಲ್ಲಿಗೆ ಹೋಗುವಾಗ ನನಗೆ ಅಲ್ಲಿರತಕ್ಕ ಪೊಲೀಸ್ ನವರು Dy. S.P ನೀವು ಅಲ್ಲಿಗೆ ಹೋಗಲು ಆಗುವುದಿಲ್ಲವೆಂದು ತಡೆದರು. ನಾನು ಏಕೆಂದು ಕೇಳಿದೆ. ಇಲ್ಲಾ, ಇಲ್ಲಾ ಅಲ್ಲಿ ಜೆ.ಡಿ.ಎಸ್. workers ಪ್ರತಿಭಟನೆ ಮಾಡುತ್ತಿದ್ದಾರೆಂದು ಹೇಳಿದರು. ಏಕೆ ಪ್ರತಿಭಟನೆ ಮಾಡುತ್ತಿದ್ದಾರೆಂದು ನಾನು ಕೇಳಿದೆ. ಅವರು, ಅಲ್ಲಿನ Chairman, ಜಿಲ್ಲಾ ಮಂತ್ರಿಯವರನ್ನು ಕರೆದಿಲ್ಲ. ಸಂಬಂಧಪಟ್ಟ ಮಂತ್ರಿಯವರನ್ನು ಕರೆದಿಲ್ಲವೆಂದು ಪ್ರತಿಭಟನೆ ಮಾಡುತ್ತಿದ್ದಾರೆಂದು ಹೇಳಿದರು. ನೋಡಿ Health Department ನವರು ನಮ್ಮನ್ನು ಕರೆದಿದ್ದಾರೆ. ಜಿಲ್ಲಾ ಪಂಚಾಯಿತಿಯವರೂ ಕರೆದಿದ್ದಾರೆ. Particulary, ಆ ಊರಿನ Chairman ಗೆ ಜಿಲ್ಲಾ ಪಂಚಾಯಿತಿಯ ಉಪಾಧ್ಯಕ್ಷರಾದ ಮರೀಗೌಡ, ಜೈಪುರದ ಮಾಜಿ Chairman ಹಾಗು ಹಾಲಿ ಪಂಚಾಯಿತಿಯ ಸದಸ್ಯರಾದ ಸಿದ್ದೇಗೌಡ ಅವರೆಲ್ಲರೂ Chairman ಮನೆಗೇ ಹೋಗಿ ಕರೆದಿದ್ದಾರೆ. ಅವರೂ ಕಾರ್ಯಕ್ರಮಕ್ಕೆ ಬರಲು ಒಪ್ಪಿಕೊಂಡಿದ್ದಾರೆ. ಇದಾದಮೇಲೆ function ನ ಹಿಂದಿನ ದಿವಸ S.P. ಯವರು ಜಿಲ್ಲಾಪಂಚಾಯಿತಿಯ

ಉಪಾಧ್ಯಕ್ಷರಿಗೆ ಫೋನ್ ಮಾಡಿ ಈ ರೀತಿ ಅವರು ಅಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ, ನಾಳೆ ಪ್ರತಿಭಟನೆಯಾಗಬಹುದೆಂದು ಹೇಳಿದ್ದಾರೆ.

"ಇಲ್ಲಾ ಸಾರ್, ಅಲ್ಲೇನೋ ಗಲಾಟೆಯಾಗಿದೆ, ಮುಂದಕ್ಕೆ ಹಾಕಿ "ಎಂದು ಅವರು ಹೇಳಿದರು. ಅದಕ್ಕೆ ನಾನು, 'ಇಲ್ಲಪ್ಪ ಅದನ್ನು ಮುಂದಕ್ಕೆ ಹಾಕುವುದಕ್ಕಾಗುವುದಿಲ್ಲ, ನನಗೆ ಟೈಮ್ ಸಿಗುವುದಿಲ್ಲ. Health Department ನವರು ಕೂಡ ಆ ಕಾರ್ಯಕ್ರಮವನ್ನು ಬೇಗ ಮಾಡಬೇಕೆಂದು ಹೇಳಿದ್ದಾರೆ, ಹಾಗಾಗಿ ನಾನು ಒಪ್ಪಿಕೊಂಡಿದ್ದೇನೆ. ಅಲ್ಲಿಗೆ ಬರುತ್ತಿದ್ದೇನೆ, whatever ನೀವು ಏನು ಮಾಡಬೇಕೋ, ಪೊಲೀಸ್ ನವರು, ನೀವು ಮಾಡುವ ಕೆಲಸವನ್ನು ನೀವು ಮಾಡಬೇಕು, ಕಾನೂನು ಪ್ರಕಾರ ನೀವು ಏನೇನು ಮಾಡಬೇಕೋ ಅದನ್ನು ಮಾಡಿ' ಎಂದು ನಾನು ಅವರಿಗೆ ಹೇಳಿದೆ. ಆಗ ಅವರು 'ಆಯಿತು ಸಾರ್, ಆಯಿತು ಸಾರ್' ಎಂದು ಹೇಳಿದರು. ಅದಾದ ಮೇಲೆ, ನಾನು ಡಿ.ಸಿ. ಗೂ ಕೇಳಿದೆ. " ಏನೋ ಇಲ್ಲಿ ಹೇಳುತ್ತಿದ್ದಾರೆ, protocol ಎಲ್ಲಾ ಇಲ್ಲಿ observe ಆಗಿದೆಯೇ? ಎಂದು ನಾನು ಅವರನ್ನು ಕೇಳಿದೆ. ಅದಕ್ಕೆ ಅವರು ' ಆಯಿತು ಸಾರ್' ಎಂದು ಹೇಳಿದರು. ಅವರೂ ಕೂಡ ಮುಂದಕ್ಕೆ ಹಾಕಿ ಎಂದು plead ಮಾಡಿದರು. ' ಇಲ್ಲಾ ಸಾರ್, ಇದನ್ನು ಮುಂದಕ್ಕೆ ಹಾಕಲಿಕ್ಕೆ ಬರುವುದಿಲ್ಲ, ನನಗೆ ಬೇರೆ ಕೆಲಸಗಳಿವೆ' ಎಂದು ನಾನು ಅವರಿಗೆ ಹೇಳಿದೆ. So, this is the situation. ನಾನು ಅಲ್ಲಿಗೆ ಹೋದಮೇಲೆ, ನಾನು ಆ ಚೆಲುವರಾಜುಗೆ ಹೇಳಿದೆ, ' ನೋಡಪ್ಪ, ಅವರನ್ನು ತೆರವು ಮಾಡಿಸು, advice ಮಾಡಿ ಕಳುಹಿಸು, ಅವರು ಒಪ್ಪಲಿಲ್ಲವೆಂದರೆ ಕಾನೂನು ಪ್ರಕಾರವಾಗಿ ನೀವು ಏನು ಮಾಡಬೇಕೋ ಅದನ್ನು ಮಾಡಿ' ಎಂದೆ. 'ಸರಿ ಸಾರ್, ನಾನು ಅವರನ್ನು ಒಪ್ಪಿಸುತ್ತೇನೆ' ಎಂದು ಅವರು ಹೋದರು. ೨-೩ ಸಾರಿ ಹೋಗುವುದು, ಬರುವುದು ನಡೆಯಿತು. ನಂತರ ಬಂದು, 'ಇಲ್ಲಾ ಸಾರ್, ಅವರು ಒಪ್ಪುವುದೇ ಇಲ್ಲ' ಎಂದರು. ನಂತರ ಅವರು ಇನ್ನೊಂದು ಸಾರಿ ಬಂದು, ' ಸಾರ್, ಎಸ್ಪಿಯವರು ಬರುತ್ತಿದ್ದಾರೆ, ನೀವು ಸ್ವಲ್ಪ ಹೊತ್ತು ಇಲ್ಲೇ ಇರಬೇಕು ಸಾರ್ ' ಎಂದು ಹೇಳಿದರು. ನಾನು ಏತಕ್ಕಾಗಿ ಅವರು ಹೇಳಿದ್ದನ್ನೆಲ್ಲಾ ತಾಳ್ಮೆಯಿಂದ ಕೇಳಿದೆ ಎಂದರೆ, ಅಲ್ಲಿ ಜೆ.ಡಿ. (ಎಸ್) ಕಾರ್ಯಕರ್ತರು ೨೦-೨೫ ಜನರು ಮಾತ್ರವಿದ್ದರು. ನಾವು ಎಲ್ಲಾ ಸೇರಿ ೧,೫೦೦ ಜನರಿದ್ದೆವು. ಅವತ್ತು ಸಭೆಗೆ ಬಂದಿದ್ದವರು, ಕಾರ್ಯಕರ್ತರು ಎಲ್ಲರೂ ಸೇರಿ ನಾವು ೧,೫೦೦ ಜನರಿದ್ದೆವು.

ಅಲ್ಲಿ ಗಲಾಟೆ ಆಗಬಾರದು, ಹೊಡೆದಾಟಗಳಾಗಬಾರದು, ಅದು ಬೇರೆ ಬೇರೆ ದಾರಿಗೆ ಹೋಗಬಾರದು ಎಂದು ನಾನು ಅಲ್ಲಿನ ರಸ್ತೆಯಲ್ಲೇ ಕುರ್ಚಿ ಹಾಕಿಕೊಂಡು ಕುಳಿತೆ. ಅದು ಧರಣಿಯಲ್ಲ. ಎಸ್ಪಿ ಬರುವವರೆಗೂ ನಾನು ಅಲ್ಲೇ ಕುಳಿತಿರುತ್ತೇನೆ ಎಂದು ಅಲ್ಲೇ ಕುಳಿತೆ. ಎಸ್ಪಿಯವರು ಕಾಲು ಗಂಟೆ ಬಿಟ್ಟುಕೊಂಡು ಅಲ್ಲಿಗೆ ಬಂದರು. ನಾನು ಸುಮಾರು ಒಂದು ಗಂಟೆ ಅಲ್ಲಿಯವರೆಗೂ ಅಲ್ಲೇ ಆದಿದ್ದೆ. ಅದಾದ ಮೇಲೆ, ಎಸ್ಪಿಯವರು ಬಂದು ಹೇಳಿದರು, 'ಸಾರ್, ನಿಮ್ಮ ಜೊತೆಗೆ ಒಂದು ನಿಮಿಷ ಮಾತನಾಡಬೇಕು, ಪೊಲೀಸ್ ಸ್ಟೇಷನ್‌ಗೆ ಬನ್ನಿ' ಎಂದು ಹೇಳಿದರು. ಅಲ್ಲಿರುವ ಔಟ್ ಪೋಸ್ಟ್‌ಗೆ ಬನ್ನಿ ಎಂದು ಅವರು ಹೇಳಿದರು. ಅದು ಔಟ್ ಪೋಸ್ಟ್ ಅಲ್ಲವೆನಿಸುತ್ತದೆ, ಏಕೆಂದರೆ ಅಲ್ಲಿ ಸಬ್ ಇನ್ಸ್ ಪೆಕ್ಟ್ರ ಒಬ್ಬರು ಇದ್ದರು. ಅದು ಪೊಲೀಸ್ ಸ್ಟೇಷನ್ನೇ. ಹೀಗೆ ನನ್ನನ್ನು ಜಯಪುರ ಪೊಲೀಸ್ ಸ್ಟೇಷನ್ ಗೆ ಕರೆದುಕೊಂಡು ಹೋದರು. ನನ್ನನ್ನು convince ಮಾಡುವುದಕ್ಕೆ ಅವರು try ಮಾಡಿದರು. ' ತಾವು ಅಲ್ಲಿ function ಬೇಕಾದರೆ ಮಾಡಕೊಳ್ಳಿ ಸಾರ್, ಆದರೆ ಅಲ್ಲಿ ಪೂಜೆ ಮಾಡುವುದು ಬೇಡ ಸಾರ್' ಎಂದು ಅವರು ಹೇಳಿದರು. ಅದಕ್ಕೆ ನಾನು ಹೇಳಿದೆ, ' ನಾನು ಇಲ್ಲಿಗೆ ಬಂದಿರುವುದೇ ಇಲ್ಲಿ ಪೂಜೆ ಮಾಡುವುದಕ್ಕೆ, ಅದನ್ನು ಬಿಟ್ಟು ನಾನು ಇಲ್ಲಿ function ಮಾಡಿ ಸಾರ್ವಜನಿಕ ಭಾಷಣ ಮಾಡಲೇ? ಈಗ ಇಲ್ಲಿ election ಭಾಷಣ ಮಾಡಲಿಕ್ಕಾಗುತ್ತದೆಯೇ? ಅದೆಲ್ಲಾ ಮುಗಿದು ಹೋಗಿದೆ, ನಾನು ಇಲ್ಲಿಗೆ ಬಂದಿರುವುದೇ ಅಡಿಗಲ್ಲಗೆ ಪೂಜೆ ಮಾಡುವ ಉದ್ದೇಶಕ್ಕಾಗಿ' ಎಂದು ನಾನು ಅವರಿಗೆ ಹೇಳಿದೆ. ನಾನು ಏನು ಹೇಳಿದರೂ ಕೂಡ ಅವರು convince ಆಗಲಿಲ್ಲ. ನಾನು ಅವರಿಗೆ ಕೆಲವೊಂದು ಉದಾಹರಣೆಗಳನ್ನೆಲ್ಲಾ ಕೊಟ್ಟೆ. ಹಿಂದೆ ನನ್ನ ಕ್ಷೇತ್ರದಲ್ಲಿ ನಾನು ರಾಜೀನಾಮೆ ಕೊಟ್ಟ ಮೇಲೆ, ಅವತ್ತು ಇದ್ದಂತಹ District In-charge Minister ಆದ Mr. Jayakumar, ದೇವಲಾಪುರಕ್ಕೆ ಬೈಸಿಕಲ್ ಹಂಚುವ ಕಾರ್ಯಕ್ರಮಕ್ಕೆ ಅಥವಾ ಪುಸ್ತಕಗಳನ್ನು ಹಂಚುವಂತಹ ಕಾರ್ಯಕ್ರಮವೊಂದಕ್ಕೆ ಅಲ್ಲಿಗೆ ಹೋಗಿದ್ದರು. ಆ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರು ಕರೆದಿಲ್ಲ, ಅಲ್ಲಿರತಕ್ಕಂಥ ಜಿಲ್ಲಾ ಪಂಚಾಯಿತಿಯ ಸದಸ್ಯರನ್ನು ಕರೆದಿಲ್ಲವೆಂದು ಅಲ್ಲಿ ಪ್ರತಿಭಟನೆ ಮಾಡಿದಾಗ, ಅವರನ್ನು ಇದೇ ಎಸ್ಪಿ, ಇದೇ ಡಿವೈ.ಎಸ್ಪಿ, ವ್ಯಾನ್ ನಲ್ಲಿ ಕರೆದುಕೊಂಡು ಹೋಗಿ, ಹೊರಗಡೆಗೆ ಹಾಕಿ, ಅರೆಸ್ಟ್ ಮಾಡಿ, ಇವರು function ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆಗ ಇದ್ದ situation ಯಾವುದು? ಈಗ ಇರುವ situation ಯಾವುದು?

ಆಗ ಮಾಡಿದಂತೆ ಈಗಲೂ ಮಾಡಿ ಎಂದು ನಾನು ಅವರಿಗೆ ಹೇಳಿದೆ. ಆಗ ಅವರು 'ಇಲ್ಲಾ ಸಾರ್, ಅದು ಬೇರೆ ತರಹ, ಇದು ಬೇರೆ ತರಹ ' ಎಂದು ಹೇಳಿದರು, ಆಗ ನಾನು ಅವರಿಗೆ, 'ಏಕೆ ಈ ತರಹ ಪಕ್ಷಪಾತದ ಕೆಲಸ ಮಾಡುತ್ತಿದ್ದೀರಿ, ಇದೊಂದೇ ಅಲ್ಲ, ಇನ್ನೂ ಅನೇಕ ಸಾರಿ ಈ ರೀತಿ ಶಿಷ್ಟಾಚಾರದ ಉಲ್ಲಂಘನೆಯಾದಾಗ, ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಸಭೆಗಳೆಲ್ಲಾ ಮಾಡಿದ್ದಾರೆ. ಆದರೂ ಕೂಡ ಆಗ ನಾವ್ಯಾರೂ ಕೂಡ ಪ್ರತಿಭಟನೆ ಮಾಡಲಿಕ್ಕೆ ಹೋಗಲಿಲ್ಲ, ನಮ್ಮನ್ನು ಕರೆಯಲಿಲ್ಲವೆಂದು ಆಗೇನು ನಾವು ಹೇಳಲಿಕ್ಕೆ ಹೋಗಲಿಲ್ಲ' ಎಂದು ಹೇಳಿದೆ. ಜನಪ್ರತಿನಿಧಿಗಳಾದ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಕರೆಯಲಿಲ್ಲವೆಂದು ಕಾಂಗ್ರೆಸ್ ನವರೇನು ಹೇಳಲಿಲ್ಲ. ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಜಿಲ್ಲಾ ಪಂಚಾಯಿತಿಯ ಎಲ್ಲಾ ಸದಸ್ಯರುಗಳು, ಬಹುತೇಕ ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳು ಎಲ್ಲರೂ ಆಗ ಇದ್ದರು ಅವರನ್ನೆಲ್ಲಾ ಕರೆಯದೆ ಆಗ ಅನೇಕ programme ಗಳನ್ನು ಮಾಡಲಾಯಿತು. ಆಗ ಯಾರೂ ಏನೂ ಪ್ರತಿಭಟನೆ ಮಾಡಲಿಲ್ಲ. ಇದನ್ನು ರಾಜಕೀಯವಾಗಿ ಬಳಸತಕ್ಕಂಥದ್ದು ಸರಿಯಲ್ಲ. ನಾನು ಈ ಉಪ ಚುನಾವಣೆಯಲ್ಲಿ ಗೆದ್ದ ಮೇಲೆ ಜೆ.ಡಿ. (ಎಸ್) ನವರು ಈ ಚುನಾವಣೆಯಲ್ಲಿ ಸೋತ ಮೇಲೆ, ಈ ತರಹ ರಾಜಕೀಯವಾಗಿ ಸೇಡು ತೀರಿಸಿಕೊಳ್ಳತಕ್ಕಂಥ ಕ್ರಮ ಇದೆಂದು ಇಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ನಾನು ಅಲ್ಲಿಗೆ ಹೋದಮೇಲೆ ನಾನು ಎಸ್ಪಿಗೆ ಹೇಳಿದೆ, 'ನೋಡಪ್ಪ, ಇದೆಲ್ಲಾ ಆಗುವುದಿಲ್ಲ, ಅವರಿಗೆ convince ಮಾಡಿ, ಅವರನ್ನೆಲ್ಲಾ ತೆಗೆದು ಹಾಕಿ' ಎಂದು ಹೇಳಿದೆ. ಅವರು 'ಆಯಿತು ಸಾರ್, ಅವರನ್ನು convince ಮಾಡಿ ಅವರನ್ನು ತೆರವುಗೊಳಿಸುತ್ತೇನೆ' ಎಂದು ಹೇಳಿ ಹೋದರು. ಆ ರೀತಿ ಹೋದ ಅವರು ಏನು ಮಾಡಿದರು ಎಂದರೆ, ಅವರು ಅಲ್ಲಿಗೆ ಹೋಗಲೇ ಇಲ್ಲ. ಅವರು ಅಲ್ಲಿಗೆ Assistant commissioner ರವರನ್ನು ಕರೆಸಿ ಬಿಟ್ಟರು, Tahasildar ರವರನ್ನೂ ಸಹ ಅಲ್ಲಿಗೆ ಕರೆಸಿ ಬಿಟ್ಟರು. ಅವರನ್ನು ಅಲ್ಲಿಗೆ ಕರೆಸಿಬಿಟ್ಟು, ಅವರಿಗೆ ಅಲ್ಲೇ ಮನವಿಯೊಂದನ್ನು ಕೊಟ್ಟು, ೧೪೪ Section ಅನ್ನು ಅಲ್ಲಿ clamp ಮಾಡಿದರು. ಅಲ್ಲಿ ಮನವೊಲಿಸುತ್ತೇನೆ ಎಂದು ಹೇಳಿ ಹೋದ ಎಸ್ಪಿ ಮುರುಗನ್ ರವರು, ಅಲ್ಲಿಗೆ ಹೋಗುವ ಕೆಲಸವನ್ನು ಮಾಡಲೇ ಇಲ್ಲ, ೧೪೪ ಸೆಕ್ಷನ್ ಅಲ್ಲಿ clamp ಮಾಡಿದರು. ನಾನು ಆ ಬಗ್ಗೆ ಕೇಳಿದಾಗ, ' ಇಲ್ಲಾ ಸಾರ್, ಇಲ್ಲಿ ೧೪೪ ಸೆಕ್ಷನ್ ಅನ್ನು clamp ಮಾಡಿದ್ದೇವೆ' ಎಂದು ಹೇಳಿದರು. ಆಗ ನಾನು ಅವರಿಗೆ, '

ಹೀಗಿದ್ದ ಮೇಲೆ ನನ್ನ ಹಕ್ಕಿಗೆ ನೀವು ಚ್ಯುತಿ ತಂದಿದ್ದೀರಿ. ನೀವೇ prevent ಮಾಡಿದ್ದೀರಿ, you are responsible for all this, there is no situation warranted to clamp Section 144 of Cr.P.C. ಅಂತಹ ಪರಿಸ್ಥಿತಿಯೂ ಇಲ್ಲ. ನಾವು ಶಾಂತವಾಗಿದ್ದೇವೆ, ಯಾವುದೇ ಸಣ್ಣ ಪುಟ್ಟ ಮಾತಿನ ಘರ್ಷಣೆ ಕೂಡ ಆಗಿಲ್ಲ' ಎಂದು ಹೇಳಿದೆ. In this situation, ಅವರು section ೧೪೪ ನ್ನು ಹಾಕಿದರು. ಅವರು ೧೪೪ ಸೆಕ್ಷನ್ ಅನ್ನು ಹಾಕಿದ ಮೇಲೆ, ನಾನು ಧರಣಿ ಮಾಡಿದೆ, ನಮ್ಮ ಕಾರ್ಯಕರ್ತರು ಮತ್ತು ನಾವೆಲ್ಲರೂ ಸೇರಿ ಧರಣಿ ಮಾಡಿದೆವು. ಸ್ವಲ್ಪ ಹೊತ್ತು ಸುಮ್ಮನಿದ್ದರು. ಆಮೇಲೆ, ಪೊಲೀಸ್ ನವರು ಮೈಕ್ ಹಾಕಿಕೊಂಡು ಘೋಷಣೆಗಳನ್ನು ಕೂಗುವುದಕ್ಕೆ ಶುರು ಮಾಡಿದರು. ಅವರು ಏನು ಹೇಳಿದರು ಎಂದರೆ, ' ಇಲ್ಲಿ ೧೪೪ ಸೆಕ್ಷನ್ ಜಾರಿ ಮಾಡಿದ್ದೇವೆ, ಯಾರೂ ಗುಂಪು ಸೇರಬಾರದು, ಎಲ್ಲರೂ ಕದಲಬೇಕು, ಎಲ್ಲಾ ಹೊರಟು ಹೋಗಿ ಬಿಡಬೇಕು' ಎಂದು ಕೂಗಿದರು. ಅವರು ಒಂದು ಸಾರಿ ಕೂಗಿದರು, ನಾನೇನೂ ಮಾತನಾಡಲಿಲ್ಲ, ಸುಮ್ಮನೇ ಇದ್ದೆ. ಶಾಂತಿಯುತವಾಗಿ ಧರಣಿ ಮಾಡುತ್ತಿದೆ. Even ಪೊಲೀಸ್ ನವರ ಜೊತೆಗೆ ನಾನು ಘರ್ಷಣೆಗೂ ಹೋಗಲಿಲ್ಲ. ಅವರ ಜೊತೆಗೆ ಮಾತಿನ ಚಕಮಕಿಯೂ ಆಗಿಲ್ಲ. ಅಷ್ಟೊತ್ತಿಗೆ, ನಾನು ಧರಣಿ ಮಾಡುವುದಕ್ಕೆ ಮುಂಚಿತವಾಗಿ ಆ ರಸ್ತೆಯಲ್ಲಿ ಆ ಜಮೀನಿಗೆ ಹೋಗಬೇಕಾಗಿತ್ತಲ್ಲಾ, ಅಲ್ಲಿ ಎರಡು ವ್ಯಾನ್ ಅನ್ನು ಅಡ್ಡಲಾಗಿ ನಿಲ್ಲಿಸಿ ಬಿಟ್ಟಿದ್ದರು. ನೂರಾರು ಜನ ಪೊಲೀಸ್ ನವರು ಬ್ಯಾರಿಕೇಡ್ ಮಾಡಿದ್ದರು. ಒಂದು ವೇಳೆ ನಾವು ಗಲಾಟೆ ಮಾಡಿದರೆ, ನಾಳೆ ಲಾಠಿಚಾರ್ಜ್ ಆಗುತ್ತದೆ, ಇಲ್ಲವೇ firing ಆಗಬಹುದು, ಅಮಾಯಕರಿಗೆ ತೊಂದರೆಯಾಗಬಹುದು ಎಂದು ನಾನು I kept quite. ಅತ್ಯಂತ ಸಂಯಮದಿಂದ ಅಂದು ನಾನು ವರ್ತಿಸಿದೆ. ಇದೆಲ್ಲಾ ಆಯಿತು. ಆಮೇಲೆ, ಸ್ವಲ್ಪ ಹೊತ್ತಾದ ಮೇಲೆ, ಅಲ್ಲಿರತಕ್ಕಂಥ ಮೈಸೂರಿನ Circle Inspector, 'ಸಾರ್ ನಿಮ್ಮನ್ನು ಅರೆಸ್ಟ್ ಮಾಡುತ್ತೇವೆ' ಎಂದು ಹೇಳಿದರು. 'ಯಾವ ಆಧಾರದ ಮೇಲೆ ನೀವು ನನ್ನನ್ನು ಅರೆಸ್ಟ್ ಮಾಡುತ್ತೀರಿ? ನೀವು ನನ್ನನ್ನು ಅರೆಸ್ಟ್ ಮಾಡುವುದಕ್ಕೆ ಬರುವುದಿಲ್ಲ, ಇದಕ್ಕೆ ನಿಮ್ಮ ಎಸ್ಪಿಯವರು ಸ್ಪೀಕರ್ ಹತ್ತಿರ ಪರ್ಮಿಷನ್ ತೆಗೆದುಕೊಂಡಿದ್ದಾರೆಯೇ? ಎಂದು ಕೇಳಿದೆ. ಯಾವಾಗ ಎಂ.ಎಲ್.ಎ. ಒಬ್ಬರನ್ನು ಅರೆಸ್ಟ್ ಮಾಡಬಹುದು ಎಂದರೆ, ನನ್ನ ಮೇಲೆ allegations ಇದ್ದಾಗ, ನಾನು criminal case ನಲ್ಲಿ involve ಆಗಿದ್ದಾಗ, ಅಥವಾ ನನ್ನ ಮೇಲೆ ಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಆಗಿ ನಾನು ಅಪರಾಧಿ

ಎಂದು ತೀರ್ಮಾನವಾದಾಗ, ಅಂತಹ ಸನ್ನಿವೇಶದಲ್ಲಿ ಎಂ.ಎಲ್. ಎ. ಯನ್ನು ಅರೆಸ್ಟ್ ಮಾಡಬೇಕಾಗುತ್ತದೆ. ಅರೆಸ್ಟ್ ಮಾಡಿ ಸ್ಪೀಕರ್ ಗೆ ತಿಳಿಸಬೇಕಾಗುತ್ತದೆ, ಇಲ್ಲಿ ಅಂತಹ ಸನ್ನಿವೇಶ ಯಾವುದೂ ಇಲ್ಲಿ ಇಲ್ಲ, ನನ್ನನ್ನು ಹೇಗೆ ಅರೆಸ್ಟ್ ಮಾಡುತ್ತೀರಿ? ಎಂದು ಕೇಳಿದೆ. ಈಗ session ನಡೆಯುತ್ತಿದೆ, ಇಷ್ಟೆಲ್ಲಾ ಇರುವುದರಿಂದ ನಿಮಗೆ ನನ್ನನ್ನು ಅರೆಸ್ಟ್ ಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳಿದೆ. ಅದು ನನಗೊಬ್ಬನಿಗೆ ಅನ್ವಯಿಸುವುದಿಲ್ಲ. Any MLA, as a matter of fact, these people can't arrest. Unless there are allegations, unless he is involved in a serious crime, unless there is case against him, ಆ ತರಹ ಇದ್ದಾಗ ಮಾತ್ರ ಎಂ.ಎಲ್.ಎ. ಗಳನ್ನು ಅರೆಸ್ಟ್ ಮಾಡಬೇಕೇ ಹೊರತು, otherwise police people have not right to arrest unnecessarily. ಆಗ ಅವರು ನನಗೆ, ' ನೀವು ೧೪೪ ಸೆಕ್ಷನ್ violate ಮಾಡಿದ್ದೀರಿ, ಅದಕ್ಕೋಸ್ಕರ ನಿಮ್ಮನ್ನು ಅರೆಸ್ಟ್ ಮಾಡುತ್ತಿದ್ದೇವೆ' ಎಂದು ಹೇಳಿದರು. ಹಾಗಿದ್ದರೆ ' ನನ್ನನ್ನು ಅರೆಸ್ಟ್ ಮಾಡಿ' ಎಂದು ನಾನು ಹೇಳಿದೆ. 'ನಿಮ್ಮನ್ನು ಅರೆಸ್ಟ್ ಮಾಡುತ್ತೇವೆ' ಎಂದು ಅವರು ಹೇಳುವ ಹೊತ್ತಿಗೆ ಕತ್ತಲಾಯಿತು, ಆರೂವರೆ ಅಥವಾ ಏಳು ಗಂಟೆಯಾಗಿ ಅಲ್ಲಿ ಕತ್ತಲೆಯಾಗುವುದಕ್ಕೆ ಶುರುವಾಯಿತು. ಕತ್ತಲೆಯಾದ ಮೇಲೆ ಲಾಠಿ ಚಾರ್ಜ್ ಮಾಡಿದರು. ನಮ್ಮ ಕಾರ್ಯಕರ್ತರನ್ನೆಲ್ಲಾ ಓಡಿಸಿದರು. ಕೊನೆಗೆ ೧೦೦-೨೦೦ ಕಾರ್ಯಕರ್ತರು ಮಾತ್ರ ಉಳಿದುಕೊಂಡರು. ಪಾಪ, ಅವರನ್ನೆಲ್ಲಾ ಲಾಠಿ ಚಾರ್ಜ್ ಮಾಡಿ ಓಡಿಸಿದರು. 'ಅವರನ್ನೆಲ್ಲಾ ನೀವು ಅರೆಸ್ಟ್ ಮಾಡಬಹುದು, ಅರೆಸ್ಟ್ ಮಾಡುವುದಾದರೆ ಮಾಡಿ' ಎಂದು ನಾನು ಅಲ್ಲೇ ಕುಳಿತುಕೊಂಡೆ. ಅಲ್ಲೆಲ್ಲಾ ಒಬ್ಬೊಬ್ಬರನ್ನೇ ಎಳೆದುಕೊಂಡು ಹೋಗುವುದು, ಹೊಡೆಯುವುದು, ಕರೆದುಕೊಂಡು ಹೋಗಿ ವ್ಯಾನ್ ಹತ್ತಿಸುವುದು ನಡೆಯಿತು. ೪-೫ ವ್ಯಾನ್ ಗೆ ಅವರನ್ನೆಲ್ಲಾ ಹತ್ತಿಸಿ ಬೇರೆ ಬೇರೆ ಕಡೆಗಳಿಗೆ ಕಳುಹಿಸಿ ಬಿಟ್ಟರು. ಕೊನೆಗೆ ನಾನು ಮತ್ತು ನನ್ನ ಜೊತೆಗೆ ಒಂದಿಪ್ಪತ್ತು ಜನರನ್ನು ವ್ಯಾನ್‌ನಲ್ಲೇ ಕುಳ್ಳಿರಿಸಿಕೊಂಡು District Armed Forces Office ಗೆ ಕರೆದುಕೊಂಡು ಹೋದರು. ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದಾಗ ಸುಮಾರು ಏಳೂವರೆ ಅಥವಾ ಎಂಟು ಗಂಟೆ ಇರಬೇಕು. ನಮ್ಮೆಲ್ಲರನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ಬಿಟ್ಟರು. ನಾನು ಆಗ ಎಸ್ಪಿಗೆ ಕೇಳಿದೆ. 'ನನ್ನನ್ನು ಯಾವ ಸೆಕ್ಷನ್ ಅಡಿಯಲ್ಲಿ ಅರೆಸ್ಟ್ ಮಾಡಿದ್ದೀರಿ? ಎಂದು ಕೇಳಿದೆ. ಅದಕ್ಕೆ ಅವರು ಉತ್ತರವನ್ನೇ

ಹೇಳಲಿಲ್ಲ. 'ನಿಮ್ಮನ್ನು ಅರೆಸ್ಟ್ ಮಾಡಿಯೇ ಇಲ್ಲ' ವೆಂದು ಹೇಳಿದರು. ಅದಕ್ಕೆ ನಾನು 'ನನ್ನನ್ನು ಅರೆಸ್ಟ್ ಮಾಡದೆ, ನನ್ನನ್ನು ಇಲ್ಲಿಗೆ ವ್ಯಾನ್ ನಲ್ಲಿ ಹೇಗೆ ಕರೆದುಕೊಂಡು ಬಂದಿರಿ? ಎಂದು ಕೇಳಿದೆ. ನನ್ನನ್ನು ನೀವು ಅರೆಸ್ಟ್ ಮಾಡಿಯೇ ಇಲ್ಲವೆಂದ ಮೇಲೆ, ವ್ಯಾನ್ ನಲ್ಲಿ ನನ್ನನ್ನು ಏತಕ್ಕೆ ಕೂರಿಸಿಕೊಂಡು ಬಂದಿರಿ? ಎಂದು ಕೇಳಿದೆ. ನಾವು ಶಾಂತಿಯುತವಾಗಿ ಚಳವಳಿ ಮಾಡುತ್ತಿದ್ದೆವು, ನೀವು ನಮ್ಮನ್ನು ಅಲ್ಲೇ ಬಿಟ್ಟು ಬಿಡಬಹುದುತ್ತಲ್ಲವೇ? ಎಂದು ನಾನು ಅವರನ್ನು ಕೇಳಿದೆ. Why have you brought me to this DAF office ಎಂದು ಕೇಳಿದೆ. Section 71 of the Karnataka Police Act ನ ಪ್ರಕಾರ ಮಾಡಿದ್ದೇವೆ ಎಂದರು. ಅದನ್ನಾದರೂ ಕೊಡು ಎಂದು ನಾನು ಅವರಿಗೆ ಕೇಳಿದೆ. ನಿಮ್ಮನ್ನು ರಿಲೀಸ್ ಮಾಡಿದ್ದೇವೆ ಎಂದು ಹೇಳಿದರು. ನನ್ನನ್ನು ನೀವು ರಿಲೀಸ್ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ, ಅದನ್ನಾದರೂ ನೀವು ಪುಸ್ತಕವೊಂದರಲ್ಲಿ ಬರೆದುಕೊಳ್ಳಬೇಕಲ್ಲವೇ? ಎಂದು ಕೇಳಿದೆ. ನಾವು ಅನೇಕ ಸಾರಿ ಅರೆಸ್ಟ್ ಆದಾಗ ಪೊಲೀಸ್ ಸ್ಟೇಷನ್ ನಲ್ಲಿ, ನಮ್ಮನ್ನು ಏತಕ್ಕಾಗಿ ಅರೆಸ್ಟ್ ಮಾಡಲಾಯಿತು? ಹೇಗೆ ರಿಲೀಸ್ ಮಾಡಲಾಯಿತು? Self bail ಮೇಲೆ ರಿಲೀಸ್ ಮಾಡಲಾಯಿತೇ? ಹಾಗೆಯೇ ರಿಲೀಸ್ ಮಾಡಲಾಯತೇ? ಎಂಬುದನ್ನೆಲ್ಲಾ ಬರೆದು ನಮ್ಮ ಹತ್ತಿರ ಅದಕ್ಕೆ ರುಜು ತೆಗೆದುಕೊಳ್ಳುತ್ತಾರೆ. ಆ ರೀತಿ ಇಲ್ಲೂ ಮಾಡಬೇಕಲ್ಲವೇ? Is this not the existing law? ಹಾಗಾದರೂ ನೀವು ಮಾಡಬೇಕಲ್ಲವೇ? ಎಂದು ಕೇಳಿದೆ. ಅದಕ್ಕೆ ಅವರು, ಆ ರೀತಿ ಏನೂ ಮಾಡಿಲ್ಲ ಸಾರ್ ಎಂದು ಹೇಳಿದರು. ಆ ರೀತಿ ಹೇಳಿ ಎಸ್ಪಿ ಅಲ್ಲಿಂದ ತಪ್ಪಿಸಿಕೊಂಡು ಬಿಟ್ಟರು. ಆತ ಪುನಃ ಬರಲೇ ಇಲ್ಲ. ಆಮೇಲೆ ಅಲ್ಲಿಗೆ Police Commissioner ರವರು ಬಂದರು.

ಇದು ನನ್ನ ಜುರಿಡಿಕ್ಷನ್‌ಗೆ ಬರುತ್ತದೆ ಸರ್, ಇದು ನನ್ನ ಜಾಗ, ಆದುದ್ದರಿಂದ ಈ ಜಾಗ ನನಗೆ ಸೇರುತ್ತದೆ ಸರ್, ನಿಮ್ಮನ್ನು ರಿಲೀಸ್ ಮಾಡಿದ್ದೇವೆ ಹೋಗಿ ಸರ್ ಎಂದ. ನೋಡ್ರಿ ನನಗೆ ಅರೆಸ್ಟ್ ಮಾಡಿರುವ ಕಾರಣಗಳನ್ನು ಕೊಡದೆ ಹೋದರೆ, under what provision I have been arrested, my friends are arrested ಎಂಬುದು ಗೊತ್ತಾಗದೆ ಹೋದರೆ I will not leave this place, I will start dharana ಎಂದೆ. I was there upto 1.30. ಅಲ್ಲೇ ಶಾಂತಿಯುತವಾಗಿ ಧರಣ ಮಾಡಿದೆ. ಹೊರಗಡೆ ಎರಡು ಸಾವಿರ ಜನ ಗಲಾಟೆ

ಮಾಡುವುದಕ್ಕೆ ಸೇರಿಕೊಂಡಿದ್ದರು. ಏನು ಗಲಾಟೆ ಮಾಡಿಕೊಳ್ಳಬೇಡಿ ಎಂದು ಅವರಿಗೂ ನಾನು ಮನವಿಮಾಡಿಕೊಂಡೆ. ಅಷ್ಟು ಹೊತ್ತಿಗೆ ಬೇರೆ ಬೇರೆ ಕಡೆ ಪ್ರತಿಭಟನೆಗಳು ಪ್ರಾರಂಭವಾಗಿದ್ದವು. That is different thing. ನಾನು ಅದನ್ನು ಹೇಳಿದ ಮೇಲೆ ಮತ್ತೆ ಕಮಿಷನರ್ ಸರ್, ನಿಮ್ಮನ್ನು ಯಾವ ಕಾರಣಕ್ಕೆ ಅರೆಸ್ಟ್ ಮಾಡುತ್ತೇವೆ, ಯಾವ ಪ್ರಾವಿಷನ್ ಕೆಳಗೆ ಮಾಡುತ್ತೇವೆಂಬುದನ್ನು ಕೊಡುತ್ತೇವೆ ಎಂದು ಹೇಳಿದ ಮೇಲೆ ಅದನ್ನು ಕೊಟ್ಟ ಮೇಲೆ ನಾವು ರಿಲೀಸ್ ಆದೆವು. ರಿಲೀಸ್ ಮಾಡಿದ್ದೇವೆಂದು ಹೇಳಿದ ಮೇಲೆ, ನೀವು ಮಾಡಿರುವುದೇ ಇಲ್ಲಿಗಲ್. My detention itself is illegal, ಎಂದು ಹೇಳಿದ್ದೇನೆ. ಪೊಲೀಸ್ ನವರು ಅತಿಯಾಗಿ ನಡೆದುಕೊಂಡಿದ್ದಾರೆ, ಇದೊಂದು. ಅಲ್ಲಿ ನನ್ನ ಅರೆಸ್ಟ್ ಆಯಿತು ಎಂದ ತಕ್ಷಣವೆ ಆ ಮಧ್ಯೆ ಡಿ ಸಾಲೋಹಳ್ಳಿ ಎಂದು ಒಂದು ಊರು ಬರುತ್ತದೆ. ಆ ಡಿ ಸಾಲೋಹಳ್ಳಿನಲ್ಲಿ ನಮ್ಮ ಕಾರ್ಯಕರ್ತರು ಧರಣೆ ಕುಳಿತು ಬಿಟ್ಟರು. ಅಲ್ಲಿಂದ ಅಲ್ಲಿಗೆ ಎರಡು ಕಿ.ಮೀ. ದೂರವಿದೆ. ನನ್ನನ್ನು ಅರೆಸ್ಟ್ ಮಾಡಿದರೆಂಬ ಸುದ್ಧಿ ತಿಳಿದ ತಕ್ಷಣವೇಡಿ ಸಾಲೊಹಳ್ಳಿಯವರು ರಸ್ತೆಯಲ್ಲಿ ಧರಣೆ ಕುಳಿತರು. ಅಮಾನುಷ್ಯವಾಗಿ ಅವರಿಗೆಲ್ಲಾ ಪಾಪ ಓಡಿಸಿ ಲಾಟಿ ಚಾರ್ಜ್ ಮಾಡಿ ಹೊಡೆದರು. ಆ ಮೇಲೆ ಅವರು, ವಾಹನಗಳ ಮೇಲೆ ಕಲ್ಲು ಎಸೆದರೆಂದು, ಆ ಉರಿನಲ್ಲಿ ಮನೆ ಮನೆಗೆ ನುಗ್ಗಿ ಹೆಣ್ಣು ಮಕ್ಕಳೆನ್ನದೇ, ಎಲ್ಲಿ ನಿಮ್ಮ ಯಜಮಾನರು ತೋರಿಸಿ, ಎಂದು ಹೇಳಿ ನುಗ್ಗಿ, ಸುಮಾರು ೨೦೦ ಜನ ಪೊಲೀಸ್ ನವರು ಊರಿನವರಿಗೆಲ್ಲಾ ಹೊಡೆದುಬಿಟ್ಟಿದ್ದಾರೆ. ೨೦ ಜನರನ್ನು ಅರೆಸ್ಟ್ ಮಾಡಿ ತೆಗೆದುಕೊಂಡು ಹೋಗಿದ್ದಾರೆ, ಅವರನ್ನು ಇನ್ನು ಬಿಡುಗಡೆ ಮಾಡಿಲ್ಲ for no offence. ಇಷ್ಟೆಲ್ಲಾ ಕ್ರಿಯೇಟ್ ಆಗಬೇಕಾದರೆ, ಇದೆಲ್ಲಾ ಆಗಬೇಕಾದರೆ the police people are mainly responsible. ಅವರಿಗೆ ಅಷ್ಟು ಧೈರ್ಯ ಬೆಬೇಕಾದರೆ, ಸರ್ಕಾರದ ಕುಮ್ಮಕ್ಕಿಲ್ಲದೆ ಅದು ಬರುವುದಕ್ಕೆ ಸಾಧ್ಯವೇ ಇಲ್ಲ. (ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) : ಸರ್ಕಾರದ ಕುಮ್ಮಕ್ಕೇನು ಇಲ್ಲ, ದೇವಲಾಪುರದಲ್ಲಿ ನಿಮ್ಮ ಕುಮ್ಮಕ್ಕೆಂದು ನಾವು ಹೇಳಿದ್ದೇವೆಯೇ? (ಗೊಂದಲ)

ಶ್ರೀ ಸಿದ್ದರಾಮಯ್ಯ : ಕುಮ್ಮಕ್ಕೆನ್ನುವುದು ಅನ್ ಪಾರ್ಲಿಮೆಂಟರಿ ವರ್ಡೆ? (ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ಇಷ್ಟು ಹೊತ್ತು ಬಾಕಿ ವಿಚಾರಗಳನ್ನು ಹೇಳುತ್ತಿರುವಾಗ ನಾವು ಸುಮ್ಮನೆ ಕೇಳುತ್ತಿರಲಿಲ್ಲವೇ, ಕುಮ್ಮಕ್ಕೆಂದು ಏತಕ್ಕೆ ಹೇಳುತ್ತೀರಿ? (ಗೊಂದಲ)

ಶ್ರೀ ಸಿದ್ಧರಾಮಯ್ಯ : ಇನ್ನೊಂದು ಸಾರಿ ಹೇಳಲಿ, ಅದು ಅನ್ ಪಾರ್ಲಿಮೆಂಟರಿ ವರ್ಡ್ ಆದರೆ I will withdraw. ಲಾ ಮಿನಿಸ್ಟರ್ ಅದು ಅನ್ ಪಾರ್ಲಿಮೆಂಟರಿ ಎಂದು ಹೇಳಲಿ (ಗೊಂದಲ)

ಶ್ರೀ ಎನ್. ಚೆಲುವರಾಯ ಸ್ವಾಮಿ (ಸಾರಿಗೆ ಸಚಿವರು) : ಎಲ್ಲಾರು ಒಟ್ಟಿಗೆ ಎದ್ದೇಳುವ ಪ್ರವೃತ್ತಿಯನ್ನು ಬಿಟ್ಟುಬಿಡಿ, ಈ ಪ್ರವೃತ್ತಿಯಿಂದ ಏನು ಆಗುವುದಿಲ್ಲ. ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ, (ಅಧ್ಯಕ್ಷರು) ಮಧ್ಯೆ ಇದ್ದರೆ, ಅವರು ಕೂರಿಸುತ್ತಾರೆ ಕೂರಿಸಿ ಮಾತನಾಡಿಲಿ (ಗೊಂದಲ).

ಶ್ರೀ ದಿನೇಶ್ ಗುಂಡೂರಾವ್ : ನಿಮ್ಮ ಬುದ್ಧಿವಾದ ನಮಗೇನು ಬೇಕಾಗಿಲ್ಲ, ನಿಮ್ಮಂದ ನಾವೇನು ಕಲಿಯಬೇಕಾಗಿಲ್ಲ (ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ : ಈಗ ಇವರು ಸಿದ್ಧರಾಮಯ್ಯನವರನ್ನು ರಕ್ಷಣೆ ಮಾಡಬೇಕಾದಂತಹ ಪರಿಸ್ಥಿತಿ ಏನಿದೆ ? (ಗೊಂದಲ)

ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು) : ಅಧ್ಯಕ್ಷರೇ, ಸವಿವರವಾಗಿ ಅವರು ಹೇಳಲಿ, ಶಾಂತವಾಗಿ ಕೇಳಲಿ, ಅಲ್ಲಿ ಏನು ನಡೆದಿದೆ ಎಂಬುದನ್ನು ಅವರೇ ಹೇಳುತ್ತಿದ್ದಾರೆ, ಸರ್ಕಾರದ ಪರವಾಗಿ ನಾವೇನು ಮಾಡಿದ್ದೇವೆಂಬುದನ್ನು ಸ್ಪಷ್ಟವಾಗಿ ಹೇಳೋಣ, ಯಾರು ಗಲಾಟೆ ಮಾಡುವುದು ಬೇಡ (ಗೊಂದಲ)

ಶ್ರೀ ಸಿದ್ದರಾಮಯ್ಯ : ಆಮೇಲೆ ಯಾರು ಬೇಕಾದರು ಹೇಳ್ರಿ.

ಶ್ರೀ ಜಿ.ಟಿ. ದೇವೇಗೌಡ : ನಿಮ್ಮದಾದ ಮೇಲೆ ಅಧ್ಯಕ್ಷರಿಗೆ ಹೇಳುತ್ತೇವೆ.

ಶ್ರೀ ಸಿದ್ಧರಾಮಯ್ಯ : ಆಮೇಲೆ ನೀವು ಎಲ್ಲವನ್ನು ಹೇಳಿ, ಏನೇನು ಹೇಳಬೇಕೊ ಅದನ್ನೇಲ್ಲಾ ಹೇಳಿ ನಾನು ಬೇಡವೆಂದು ಹೇಳುವುದಿಲ್ಲ, you have got every right. ಪುನಃ ಇನ್ನೊಂದು ಸಾರಿ ಹೇಳುತ್ತೇನೆ, ಸರ್ಕಾರದ ಕುಮ್ಮಕ್ಕಿನಿಂದ., does it amount to unparliamentary? ಸುಮ್ಮನೆ ಕುಳಿತುಕೊಳ್ಳಿ.

ಅಧ್ಯಕ್ಷರು : ನಿಮಗೆ ಉತ್ತರವನ್ನು ಕೊಡುವುದಕ್ಕೆ ಅವಕಾಶ ಕೊಡುತ್ತೇನೆ, ಅವರೇನು ಹೇಳುತ್ತಾರೊ ಕೇಳಿ, ಆಮೇಲೆ ನೀವು ಏನೇನು ಹೇಳಬೇಕೊ ಹೇಳಿ.

ಶ್ರೀ ಎಂ.ಆರ್. ಸೀತಾರಾಮ್ : ಅವರು ಮಾಹಿತಿ ಲಭ್ಯವಿರುವ ಪ್ರಕಾರ ಮಾತನಾಡುತ್ತಾರೆ, ಬೇಕಾದರೆ ಸರ್ಕಾರದಿಂದ ಅದನ್ನು ನೀವು ಡಿನ್ನೈ ಮಾಡಿ.

ಶ್ರೀ ಸಿದ್ಧರಾಮಯ್ಯ : ನಾವೇನು ನಿಮ್ಮ ಮೇಲೆ ದೊಡ್ಡ ಆರೋಪಗಳನ್ನೇನು ಮಾಡಿಲ್ಲ, ಕುಮ್ಮಕ್ಕೆಂದರೆ ಅನ್ ಪಾರ್ಲಿಮೆಂಟರಿನಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲವೆಂದು ಹೇಳಲಿ, ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಹೋಂ ಮಿನಿಸ್ಟರ್ ಅದನ್ನು ಸ್ಟಡಿ ಮಾಡುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಕುಮ್ಮಕ್ಕು ಎಂದರೆ ಅನ್ ಪಾರ್ಲಿಮೆಂಟರಿ ಅಲ್ಲ. ಏತಕ್ಕೆ ನಾನು ಕುಮ್ಮಕ್ಕೆನ್ನುವ ಪದವನ್ನು ಉಪಯೋಗಿಸಿದೆ ಎಂದರೆ, ನಾನು ಅಲ್ಲಿದ್ದಾಗಲೆ ಅವರು ಆ ಕಡೆ ಇದ್ದರು ಜಯಪುರದ ಚೇರ್ಮನ್ ಅನ್ನು ನಾನಿದ್ದ ಕಡೆಗೆ ಕರೆಯಿಸಿದೆ. ಏಕಪ್ಪ ಹೀಗೆ ಪ್ರತಿಭಟನೆ ಮಾಡುತ್ತಿದ್ದಿಯಾ. ನಿನ್ನನ್ನು ಮನೆಗೆ ಬಂದು ಕರೆದಿದ್ದರಲ್ಲ, ನಿನಗೆ ಹೇಳಿದ್ದರಲ್ಲ, ಏಕೆ ಈ ಪ್ರತಿಭಟನೆ ಮಾಡುತ್ತಿದ್ದಿಯಾ ಬೇಡಕಣಯ್ಯ, ಇದನ್ನು ನಿನ್ನ ಅಧ್ಯಕ್ಷತೆಯಲ್ಲೇ ಮಾಡೋಣ ಎಂದು ಕರೆದು ಹೇಳಿದೆ. ಹಾಗೆ ಹೇಳಿದಾಗ ಆಯಿತು ಸರ್, ಎಂದು ಒಪ್ಪಿಕೊಂಡು ಹೋಗುತ್ತಿದ್ದಾಗ ಅಲ್ಲಿನ ಚೆಲುವರಾಜು, Dy.S.P, ಏ, ನಾನು ನಿನಗೆ ಬೆಂಬಲ ಕೊಡುತ್ತೇನೆ ನೀನು ಒಪ್ಪಿಕೊಳ್ಳಬೇಡವೆಂದು ಹೇಳಿದ. ಆ ಚೆಲುವರಾಜು, Dy. S.P. ಗೆ ಆ ಧೈರ್ಯ ಬರಬೇಕಾದರೆ there must be somebody behind him. ಯಾರದ್ದಾದರೂ

ಕುಮ್ಮಕ್ಕು ಇರಬೇಕಲ್ಲಾ? ಇಂತಹವರದೇ ಕುಮ್ಮಕ್ಕೆಂದು ನನಗೆ ಗೊತ್ತಿಲ್ಲ. otherwise how he can say like this? ಇಲ್ಲವಾದರೆ ಆ ಹುಡುಗನಿಗೆ, ನೀನು ಒಪ್ಪಿಕೊಳ್ಳಬೇಡವೆಂದು ಹೇಳುವುದಕ್ಕೆ ಹೇಗೆ ಸಾಧ್ಯ. ಅದು ಒಂದು, ಹಿಂದೆ ಈ ರೀತಿಯಾದ ಕಾರ್ಯಕ್ರಮದಲ್ಲಿ ಯಾರು, ಸರ್ಕಾರಿ ಕಾರ್ಯಕ್ರಮವನ್ನು ನಡೆಸುವಾಗ ಅಡ್ಡಿಪಡಿಸುತ್ತಾರೆ, ಅಡ್ಡಿಪಡಿಸಿದವರನ್ನು ಅರೆಸ್ಟ್ ಮಾಡಿ ಕಳುಹಿಸಬೇಕು. ಆದರೆ ನಮ್ಮನ್ನೆ ಅರೆಸ್ಟ್ ಮಾಡುವುದಕ್ಕೆ ಮಾಡಿ, ಅಡ್ಡಿಪಡಿಸಿದವರನ್ನು ಅವರು ಬಿಟ್ಟೆಬಿಟ್ಟರು. ಅವರು ಬೆಳಿಗ್ಗೆ ೧೧.೦೦ ಗಂಟೆಯಿಂದ ಮಾಡುತ್ತಿದ್ದಾರೆ, ಕಾರ್ಯಕ್ರಮವಿದ್ದದ್ದು ೩.೦೦ ಗಂಟೆಗೆ ನಾನು ೪.೦೦ ಗಂಟೆಗೆ ಹೋದೆ because it is a pre-planned one. ಇಲ್ಲದಿದ್ದರೆ ೨೦೦–೩೦೦ ಪೊಲೀಸರನ್ನು ಆ ಸರಳ ಸಮಾರಂಭಕ್ಕೆ ಏತಕ್ಕೆ ಕರೆಯಿಸಬೇಕಾಗಿತ್ತು? ಅಲ್ಲಿಯವರೆಗೆ ೧೪೪ ಸೆಕ್ಷನ್ ಇತ್ತಾ There was no Section - 144 clamped. ಏನೂ ಗಲಾಟೆ ಇರಲಿಲ್ಲ. ನಮ್ಮವರ್‍ಯಾರು ಗಲಾಟೆ ಮಾಡಿರಲಿಲ್ಲ ಅಥವಾ ಹಿಂದೆ ಗಲಾಟೆ ಮಾಡಿದಿದ್ದು ನಡೆದಿರಲಿಲ್ಲ. ಅವತ್ತು ಬೆಳಿಗ್ಗೆ ಗಲಾಟೆಯಾಗಿರಲಿಲ್ಲ, ನಾನು ಹೋಗುವರೆವಿಗೂ ಗಲಾಟೆ ನಡೆದಿರಲಿಲ್ಲ, why, ಅಷ್ಟೊಂದು ಪೊಲೀಸ್ ನವರು ಏತಕ್ಕೆ ಇದ್ದರು. It is totally preplanned and deliberate. ಅಲ್ಲದೆ ಇದ್ದರೆ ಪೊಲೀಸ್ ನವರು ಏತಕ್ಕೆ ಅಲ್ಲಿರುತ್ತಿದ್ದರು? ನಾವು ಕೂಡ ಅಧಿಕಾರದಲ್ಲಿದ್ದು ನೋಡಿದ್ದೇವೆ. ನಾನು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ೫–೬ ವರ್ಷ ಕೆಲಸ ಮಾಡಿ ನೋಡಿದ್ದೇನೆ. ನಮ್ಮ ಕಾಲದಲ್ಲು ಕೂಡ ಬೇರೆ ಬೇರೆ ಪಕ್ಷದವರು ಶಾಸಕರಾಗಿದ್ದರು, ನಾವೇ ಅವರ ಕ್ಷೇತ್ರಗಳಿಗೆ ಹೋಗಿ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿಪಡಿಸತಕ್ಕಂತಹ ಕೆಲಸವನ್ನು ಮಾಡಲಿಲ್ಲ ಅಥವಾ ಸರ್ಕಾರ ಇದರಲ್ಲಿ ಮಧ್ಯಪ್ರದೇಶ ಮಾಡುವುದಕ್ಕೆ ಹೋಗಲಿಲ್ಲ. ಜನರು ಅವರಿಗೆ ಓಟು ಕೊಟ್ಟಿದ್ದಾರೆ. ಅವರ ಕ್ಷೇತ್ರದ ಅಭಿವೃದ್ಧಿ ಕೆಲಸಗಳನ್ನು ಅವರು ಮಾಡಲಿ ಎಂದು ಬಿಟ್ಟಿದ್ದೇವು. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷದವರ ಹಕ್ಕನ್ನು ಹತ್ತಿಕ್ಕಬೇಕು, ಪ್ರಜಾಪ್ರಭುತ್ವವನ್ನು ಹತ್ತಿಕ್ಕಬೇಕೆನ್ನುವ ಧೋರಣೆ ಇದೆಯಲ್ಲ that is very bad. ಆದರಿಂದ ಪ್ರಜಾಪ್ರಭುತ್ವದ ಮರಣವಾಗುತ್ತದೆ. ಇವತ್ತು ಅಧಿಕಾರದಲ್ಲಿದ್ದೇವೆಂದು ಮಾಡಬಹುದು, ನಾಳೆ ಎಲ್ಲಾ ಕಾಲದಲ್ಲೂ ಅಧಿಕಾರದಲ್ಲಿರುವುದಕ್ಕಾಗುವುದಿಲ್ಲ. ಆದರೆ ಸತ್ಸಂಪ್ರದಾಯ ಬಹಳ ಮುಖ್ಯವಾಗುತ್ತದೆ, ಅದು ಉಳಿಯಬೇಕಾಗುತ್ತದೆ. ಪ್ರಜಾಪ್ರಭುತ್ವದ ಮೌಲ್ಯಗಳ ಹಾಳಾಗದಂತೆ

ನೋಡಿಕೊಳ್ಳಬೇಕಾದ್ದು ಸರ್ಕಾರ ನಡೆಸುವವರ ಜವಾಬ್ದಾರಿ ಆಗಿದೆ, ವಿರೋಧಪಕ್ಷದವರ ಜವಾಬ್ದಾರಿನು ಕೂಡ ಆಗಿದೆ. ಇವು ಕನಿಷ್ಟ ಜವಾಬ್ದಾರಿಗಳು. ಈ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ೨೦ ಜನರನ್ನು ಅರೆಸ್ಟ್ ಮಾಡದೆ, ನೂರಾರು ಜನರಿರುವವರನ್ನು, ಅಲ್ಲಿಗೆ ಕರೆಯಿಸಿ ವ್ಯವಸ್ಥಿತವಾಗಿ ಅರಸ್ಟ್ ಮಾಡಲಾಗಿದೆ, ಸೆಕ್ಷನ್ ೧೪೪, whether it was necessitated? It was not warranted even to involke Sections 35 and 36 of the Police Act. Section 144 ಹಾಕಿಬಿಟ್ಟಿದ್ದೇವೆಂದು ಪ್ರೊನೌಸ್ ಮಾಡಿದರು. ಇದು ಪ್ರಜಾಪ್ರಭುತ್ವದಲ್ಲಿ ನಡೆದುಕೊಳ್ಳುವ ರೀತಿಯೇ? Can you call this Government is running under the rule of law? Where is the rule of law? ಹಾಗಾದರೆ ನಮಗೇನು ಮಾಡುವುದಕ್ಕಾಗುವುದಿಲ್ಲ. ಚುನಾವಣೆಯಲ್ಲಿ ಸೋತ ಮೇಲೆ ಸರ್ಕಾರಕ್ಕೆ ಉದ್ದೇಶವೇನಿರಬಹುದು? ನಾನು ಅಲ್ಲಿ, ಏನು ಕಾರ್ಯಕ್ರಮಗಳನ್ನು ಮಾಡಬಾರದು, ನನ್ನ ನೇತೃತ್ವದಲ್ಲಿ ಕೆಲಸಗಳಾಗಬಾರದು ಎಂಬ ಏನಾದರು ಉದ್ದೇಶವಿದೆಯಾ? Naturally, these questions arise. ನೀವು (ಅಧ್ಯಕ್ಷರು) ಕೂಡ ವಿರೋಧಪಕ್ಷದಲ್ಲಿದ್ದಾಗ MLA ಆಗಿದ್ದರೋ ಏನೋ ನನಗೆ ಗೊತ್ತಿಲ್ಲ, ನಾನು ವಿರೋಧಪಕ್ಷದಲ್ಲಿ MLA ಆಗಿದ್ದು first time, ನಾನು ಬೇರೆಯವರಿಗೆ ತೊಂದರೆಯಾಗಿದ್ದನ್ನು ನೋಡಿಲ್ಲ. ನಾನು ಬೇರೆಯವರಿಗೂ ಕೂಡ ಈ ತರಹ ತೊಂದರೆ ಆದುದು ನೋಡಿಲ್ಲ. For the first time I am experiencing. ನಾನು ೨೫ ವರ್ಷಗಳಿಂದ ೧೯೮೩ ರಿಂದ MLA ಆಗಿದ್ದೇನೆ. ಐದು ಸಾರಿ ಆ ಕ್ಷೇತ್ರವನ್ನು ಪ್ರತಿನಿಧಿಸಿದ್ದೇನೆ. ಯಾವತ್ತೂ ಕೂಡ ಇಂತಹ ಸನ್ನಿವೇಶ ನಿರ್ಮಾಣವಾಗಿಲ್ಲ. ಇಷ್ಟರ ಮಟ್ಟಿಗೆ ಪೊಲೀಸ್ ನವರು ೧೪೪ ಸೆಕ್ಷನ್ ಹಾಕಿ, ಅರೆಸ್ಟ್ ಮಾಡುವ ಮಟ್ಟಿಗೆ ಯಾವ ಕಾಲದಲ್ಲಿಯೂ ಹೋಗಿಲ್ಲ. This is too much. ಪೊಲೀಸ್ ನವರ ಅವಿವೇಕ ಇದು. ಇದು ಪೊಲೀಸ್ ರಾಯ ಎಂದು ಕರೆಯಬೇಕಾ? ಗೂಂಡಾ ರಾಜ್ಯವೆಂದು ಕರೆಯಬೇಕಾ ಎಂದು ನನಗಂತೂ ಅನ್ನಿಸುವುದಿಲ್ಲ. ಪೊಲೀಸ್ ನವರು ಗೂಂಡಾಗಳ ರೀತಿಯಲ್ಲಿ ವರ್ತಿಸಿಬಿಟ್ಟರು. ನಾನೂ emergency ಕಾಲದಲ್ಲಿ ಕೂಡ arrest ಆಗಿದ್ದೇನೆ. ನನಗೆ ಕರೆದುಕೊಂಡು ಹೋಗಿ ದೇವರಾಜ ಪೊಲೀಸ್ ಸ್ಟೇಷನ್ ನಲ್ಲಿ ಒಂದು ದಿನ ಅರೆಸ್ಟ್ ಮಾಡಿ ಇಟ್ಟುಕೊಂಡು ಬಹಳ ಗೌರವಯುತವಾಗಿ ನಡೆಸಿಕೊಂಡಿದ್ದರು. ನನ್ನನ್ನು ೭.೩೦ ಕ್ಕೆ ಪೊಲೀಸ್ ಸ್ಟೇಷನ್ ಗೆ ತೆಗೆದುಕೊಂಡು ಹೋಗಿದ್ದಾರೆ. ೧.೦೦ ಗಂಟೆಯವರೆಗೆ

ನಿಮಗೆ ಏನು ಮಾಡಿದ್ದೇವೆ ಎಂದು ಕೂಡ ಅವರು ಹೇಳಲಿಲ್ಲ. ಅಷ್ಟರ ಮಟ್ಟಿಗೆ ಪೊಲೀಸ್ ನವರು uncivilized manner ನಲ್ಲಿ ನಡೆಸಿಕೊಂಡರು. ಇದು MLA ಗಳಿಗೆ ಮಾಡತಕ್ಕಂತಹ ಅಗೌರವ ಅಲ್ಲವಾ? ನಾನು ಕಳ್ಳತನ ಮಾಡಿದ್ದೆನಾ? Murder case ನಲ್ಲಿ involve ಆಗಿದ್ದೆನಾ? ಡಕಾಯಿತಿಯಲ್ಲಿ involve ಆಗಿದ್ದೆನಾ? ಅಥವಾ corruption charges ನಲ್ಲಿ ಸಿಕ್ಕಿ ಹಾಕಿಕೊಂಡಿದ್ದೆನಾ? ಕಾನೂನು ಕೈಗೆ ತೆಗೆದುಕೊಂಡದ್ದೆನಾ? Absolutely no. ಪರಿಸ್ಥಿತಿ ಹೀಗಿರುವಾಗ ನನ್ನನ್ನು ಅರೆಸ್ಟ್ ಮಾಡಿ, ನನ್ನೆ ಪ್ರಕಾಶ್‌ರವರು ಅರೆಸ್ಟ್ ಮಾಡಿಲ್ಲವೆಂದು statement ಕೊಟ್ಟಿದ್ದಾರೆ. ಪ್ರಜಾವಾಣಿ ಪತ್ರಿಕೆ ನೋಡಿ ಇದು ಅರೆಸ್ಟ್ ಮಾಡಿ van ನಲ್ಲಿ ಕರೆದುಕೊಂಡು ಹೋಗುತ್ತಿರುವ ಚಿತ್ರ. ಪ್ರಕಾಶ್ ರವರೇ ನೋಡಿ. ಅರೆಸ್ಟ್ ಮಾಡಿಲ್ಲವೆಂದು ಅದೆಲ್ಲೋ ನೀವು ಭಾಷಣ ಮಾಡುವಾಗ ಹೇಳಿದ್ದೀರಿ. ಅರೆಸ್ಟ್ ಮಾಡದೆ ವ್ಯಾನ್ ನಲ್ಲಿ ಕೂರಿಸಿಕೊಂಡು ಹೇಗೆ ಕರೆದುಕೊಂಡು ಹೋಗುತ್ತೀರಿ? ಅರೆಸ್ಟ್ ಎಂದರೆ ಏನು? What do you mean by arrest? Definition of arrest ಏನು? ನನ್ನ movement restrain ಆದರೆ it amounts to arrest. ನನ್ನನ್ನು detention ನಲ್ಲಿ ಇಟ್ಟರೆ, it amounts to arrest. Wrongful detention ಆಗುತ್ತದೆ ಇದು. The leagal word is wrongful confinement. ನನ್ನ freedom ನನಗೆ ಇದೆ. I have got every right to freedom of movement. ನನ್ನ freedom of movement curtail ಆದರೆ, ಅದಕ್ಕೆ ಚ್ಯುತಿ ಬಂದರೆ, ಅದನ್ನು move ಮಾಡುವುದಕ್ಕೆ ತಾವು ಸ್ವಾತಂತ್ರ್ಯವನ್ನು ಕಳೆದುಕೊಂಡರೆ, ಆ ಸ್ವಾತಂತ್ರ್ಯವನ್ನು ಕಿತ್ತುಕೊಂಡರೆ, it amounts to arrest. ನೀವು ಅವರನ್ನು ಕರೆದುಕೊಂಡು ಹೋಗಿ ಎಲ್ಲೋ ಛತ್ರದಲ್ಲಿ ಹಾಕಿದ್ದರು ಎಂದು ಹೇಳಿದಿರಿ. ಯಾವ ಛತ್ರದಲ್ಲಿ ಹಾಕಿದ್ದರು ಸ್ವಾಮಿ? ಇಲ್ಲಿ ಓದಲಾ ಪೊಲೀಸ್ ನವರು ಎಲ್ಲಿಗೆ ಕರೆದುಕೊಂಡು ಹೋಗಿದ್ದರು ಎಂದು. ನೀವು ಅರೆಸ್ಟೇ ಆಗಿಲ್ಲವೆಂದು ಹೇಳಿದ್ದೀರಿ. ಅವರೇ ಕಳುಹಿಸಿದ್ದಾರೆ. ನಿಮಗೆ ಒಂದು ಕಾಪಿ ಕಳುಹಿಸಿರಬಹುದು ನನಗೆ ಗೊತ್ತಿಲ್ಲ. ನಿಮಗೆ ಕಳುಹಿಸಿರುವ ಕಾಪಿ ನನಗೆ ಕಳುಹಿಸಿದ್ದಾರೆ. ನೀವು announce ಮಾಡಬೇಕಾಗಿತ್ತು, ಮಾಡಿಲ್ಲ. ಕಾನೂನು ಪ್ರಕಾರ ನನಗೆ ಅರೆಸ್ಟ್ ಮಾಡಿದ್ದನ್ನು ನೀವು ಇಲ್ಲಿ ಅನೌನ್ಸ್ ಮಾಡಬೇಕಾಗಿತ್ತು. ಈ ಕಾಪಿ ನಿಮಗೆ ಬಂದಿದೆಯಾ? ನೀವು ಹೌಸ್ ನಲ್ಲಿ ಅನೌನ್ಸ್ ಮಾಡಬೇಕಾಗಿತ್ತಲ್ಲವೇ?

ಅಧ್ಯಕ್ಷರು : No.. No ಅದರ ಅಗತ್ಯವಿಲ್ಲ. ನೀವು privilege ಗೆ Notice ಕೊಟ್ಟಿದ್ದೀರಿ. ಇದು discuss ಆಗೇ ಆಗುತ್ತದೆ.

ಶ್ರೀ ಬಸವರಾಜ ರಾಯ ರೆಡ್ಡಿ : Under House Rules, ರೂಲ್ ೨೦೧ ಪ್ರಕಾರ ನೀವು announce ಮಾಡಲೇಬೇಕು.

ಶ್ರೀ ಸಿದ್ದರಾಮಯ್ಯ : 199 of the rules, ಈ ರೂಲ್ಸ್ ನಲ್ಲಿ ನನಗೆ ಅರೆಸ್ಟ್ ಮಾಡಿದರೆ, ನೀವು ಹೇಳಬೇಕಾಗಿತ್ತು.

ಅಧ್ಯಕ್ಷರು : ನೀವು privilege ಗೆ ನೋಟಿಸ್ ಕೊಟ್ಟಿದ್ದೀರಲ್ಲಾ.

ಶ್ರೀ ಸಿದ್ದರಾಮಯ್ಯ : ನೀವು ನಿಮ್ಮ ಕೆಲಸ ಮಾಡಬೇಕಾಗಿತ್ತು, ನಾನು ಕೊಟ್ಟಿರುವುದು ಬೇರೆ. I have all the records with me. ಪ್ರಕಾಶರವರು ಹೇಳಿದ್ದಾರೆಂದರೆ, ಅರೆಸ್ಟೇ ಮಾಡಿಲ್ಲ. ಅವರನ್ನು ಅರೆಸ್ಟೇ, ಮಾಡಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಉತ್ತರ ಕೊಡುವ ಸಮಯದಲ್ಲಿ Karnataka Poice Act, Section ೭೧ ನಲ್ಲಿ ಏನಿದೆ ಎಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಪೊಲೀಸ್‌ನವರಿಗೆ ಏನು ಹೇಳಿದ್ದಾರೆ, ಒಂದೂಕಾಲು ಗಂಟೆಗೆ ಅವರು ಏನು ಹೇಳಿದ್ದಾರೆಂದರೆ, ವಿಚಾರ ತಿಳಿದು ವಿರೋಧ ವ್ಯಕ್ತಪಡಿಸಿದರು, ಆಗ ಮಾನ್ಯ ತಹಶೀಲ್ದಾರ್‌ರವರು, ಮಾನ್ಯ ಉಪ ಆಯುಕ್ತರು JDS ಕಾರ್ಯಕರ್ತರನ್ನು ಸಮಾಧಾನ ಪಡಿಸುತ್ತಿದ್ದರು. ಆ ವೇಳೆಗೆ ಕಾಂಗ್ರೆಸ್ ಕಾರ್ಯಕರ್ತರು ಮಾನ್ಯ ಸಿದ್ದರಾಮಯ್ಯ ಮತ್ತು ಶ್ರೀ ಸೋಮಶೇಖರ್ ಶಾಸಕರು ಇವರ ನೇತೃತ್ವದಲ್ಲಿ ಮೈಸೂರು ' ಹೆಚ್ ಡಿ. ಕೋಟೆ ಮುಖ್ಯ ರಸ್ತೆಯಲ್ಲಿ ಕುಳಿತು", ಎಂದು ಹೇಳಿದ್ದಾರೆ. ನಾವು ಕುಳಿತುಕೊಳ್ಳಲಿಲ್ಲ. Section 144 clamp ಆದ ನಂತರ ಕುಳಿತುಕೊಂಡಿರುವುದು. ಅವರು Section 144 ಇದರಲ್ಲಿ mention ಮಾಡಿಲ್ಲ. ೧೪೪ section clamp ,ಮಾಡಿದ್ದೇನೆ ಎಂದು mention ಮಾಡಿಲ್ಲ. That is number one. ಮುಂಜಾಗ್ರತಾ ಕ್ರಮವಾಗಿ ಕಲಂ ೭೧, Karnataka Police Act ಅದರ ಪ್ರಕಾರ ೭.೩೦ ಗಂಟೆ ಸಮಯದಲ್ಲಿ ದಸ್ತಗಿರಿ ಮಾಡಿ,

ಕನ್ನಡದಲ್ಲಿ ದಸ್ತಗಿರಿಗೆ ಅರೆಸ್ಟ್ ಎಂದು ಹೇಳುತ್ತಾರೆ. D.A.R. ಕಲ್ಯಾಣ ಮಂಟಪಕ್ಕೆ ಕರೆದುಕೊಂಡು ಬಂದು ರಾತ್ರಿ ೧೦.೦೦ ಗಂಟೆಗೆ ಬಿಡುಗಡೆ ಮಾಡಲಾಗಿರುತ್ತದೆ. ಆದರೆ ದಸ್ತಗಿರಿ ಮಾಡಿರುವುದನ್ನು ವಿರೋಧಿಸಿ ರಾತ್ರಿ ೧.೦೦ ಗಂಟೆಯವರೆಗೆ ಧರಣಿ ಮಾಡಿ ನಂತರ ವಾಪಸ್ ಹೋಗಿರುತ್ತಾರೆ. ನಮ್ಮನ್ನು ಅರೆಸ್ಟ್ ಮಾಡಿಲ್ಲವೆಂದು ಎಸ್.ಪಿ. ಯವರು ಒಂದು ಸಾರಿ ಹೇಳಿದರು, ಆ ನಂತರ ಕಮಿಷನರ್ ರವರು ಬಂದು ಇಲ್ಲ, ಇಲ್ಲ, ರೂಲ್ ೭೧ ಕೆಳಗಡೆ ನಿಮಗೆ ಅರೆಸ್ಟ್ ಮಾಡಿದ್ದೇವೆ ಎಂದು ಹೇಳಿದರು. ಹಾಗಿದ್ದರೆ ನಮ್ಮನ್ನು ಕೋರ್ಟ್‌ಗೆ produce ಮಾಡಿ ಎಂದು ಹೇಳಿದೆ. ನಾನು ಅಲ್ಲಿ ಜಾಮೀನು ತೆಗೆದುಕೊಳ್ಳಬೇಕೋ ಬೇಡವೋ ಎನ್ನುವುದನ್ನು ನಾನು Magistrate Court ನಲ್ಲಿ ನಿರ್ಧಾರ ಮಾಡುತ್ತೇನೆ. You produce me before the court ಎಂದು ಹೇಳಿದೆ. ಇಲ್ಲ ಸಾರ್ ಹಾಗೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದರು. ನಿಮ್ಮನ್ನು ರಿಲೀಸ್ ಮಾಡಿ ಬಿಡುತ್ತೇವೆ ಎಂದು ಹೇಳಿದರು. ಆಯಿತು ರಿಲೀಸ್ ಮಾಡಿದ್ದೇವೆಂದು ಬರೆದು ಕೊಟ್ಟು ನನ್ನ ಸಹಿ ತೆಗೆದುಕೊಳ್ಳಿ ಎಂದು ಹೇಳಿದೆ, ನನಗೂ ಅವರಿಗೂ ಸುಮಾರು ಮಾತುಕತೆ ನಡೆದು, ಮಧ್ಯಾಹ್ನ ೧.೩೦ರ ಮೇಲೆ ನಾನ್ಯಾಕೆ ಅವತ್ತು ಧರಣಿ ವಾಪಸ್ ತೆಗೆದುಕೊಳ್ಳಬೇಕಾಗಿ ಬಂದಿತು ಎಂದರೆ, ೨,೦೦೦ ಜನ ನಮ್ಮ ಕಾರ್ಯಕರ್ತರು ಹೊರಗಡೆ ನಿಂತಿದ್ದರು. ಅವರ ಮೇಲೆ ಲಾಠಿ ಛಾರ್ಜ್ ಮಾಡುವುದಕ್ಕೆ ಪ್ರಾರಂಭ ಮಾಡಿದ್ದರಿಂದ ಅದು ಆಗಬಾರದು, ಮತ್ತೆ ಅದು further action ಗೆ lead ಮಾಡಬಾರದು ಎಂದು ಹೇಳಿ, because workers were agitating. they were in agitating mood, ಈ ರೀತಿ ಆಗಬಾರದು ಎಂದು ಹೇಳಿ ನಾನು DIG ಕಛೇರಿಯಿಂದ ಹೊರಬಂದೆ. ಆದರೆ ಅದು ಮಂಟಪ ಎಂದು ಹೇಳಿದರು, ಅದು ಮಂಟಪವೂ ಇಲ್ಲ ಏನೂ ಇಲ್ಲ. DAR ಕಛೇರಿ. ಅದು ಪೊಲೀಸ್ ನವರ ಕಂಟ್ರೋಲ್ ನಲ್ಲಿದೆ. ಪೊಲೀಸ್ ಸ್ಟೇಷನ್ ಪಕ್ಕದಲ್ಲಿ ಕಲ್ಯಾಣ ಮಂಟಪ ಇದೆ. ಅಲ್ಲಿ ಯಾರೂ ಮದುವೆ ಮಾಡುವುದಿಲ್ಲ. ಸುಮ್ಮನೆ ಒಂದು ಹಾಲ್ ಇದೆ. ಇಂತಹ ಚಳುವಳಿ ಮಾಡಿದವರೆಲ್ಲರನ್ನೂ ಅರೆಸ್ಟ್ ಮಾಡಿ ಹಿಡಿದುಕೊಂಡು ಹೋಗಿ ಇಡುವುದಕ್ಕೆ ಮಾಡಿರುವ ಹಾಲ್ ಅದು. ನಾನು ಅರೆಸ್ಟ್ ಆಗಿ ಅಲ್ಲಿಗೆ ಹೋಗಿರುವುದು this is not for the first time. ಬಹಳ ಜನರಿಗೆ ಅನುಭವ ಇದೆ. DAR ಕಛೇರಿ ಏನೆಂದು ಗೊತ್ತಿದೆ. ಅದನ್ನು ಪೊಲೀಸ್ ನವರು ಬೇಕೆಂದು ಕಲ್ಯಾಣ ಮಂಟಪ ಎಂದು ಮಾಡಿದ್ದಾರೆ. ೩೦ ರಿಮದ ೪೦ ಅಡಿಯ ದೊಡ್ಡ ಹಾಲ್. ಅಲ್ಲಿ

ಕಲ್ಯಾಣ ಮಂಟಪದ ಯಾವುದೇ ಲಕ್ಷಣಗಳಿಲ್ಲ. ಆ ಹಾಲಿಗೆ ನಮ್ಮನ್ನು ಕರೆದುಕೊಂಡು ಹೋಗಿ ಹಾಕಿದರು. ನಾನು ಹಾಲ್ ನಲ್ಲಿರಲಿಲ್ಲ. ಹೊರಗಡೆ ಧರಣಿ ಮಾಡುತ್ತಾ ಕುಳಿತುಕೊಂಡೆ. ಅಲ್ಲಿಯೇ ಕುಳಿತು ನಾನು ನನ್ನ ಧರಣಿಯನ್ನು ೧.೩೦ ಕ್ಕೆ DC ಕಛೇರಿಗೆ ಶಿಫ್ಟ್ ಮಾಡಿದೆ. ನಿನ್ನೆ ಎರಡು ಗಂಟೆಯವರೆಗೆ ಧರಣಿ ಮಾಡಿದೆ. ನಮ್ಮ ಹತ್ತಿರ ಯಾರೂ ಪೊಲೀಸ್ ನವರಾಗಲಿ, ಬೇರೆ ಅಧಿಕಾರಿಗಳು ಯಾರೂ ಬರಲಿಲ್ಲ. ಹೋಗಲಿ ಬಿಡಿ. ಅವರು ಸೌಜನ್ಯಕ್ಕಾದರೂ ಬರಲಿಲ್ಲ, ನಂತರ ನಮ್ಮ ವಿರೋಧ ಪಕ್ಷ ನಾಯಕರು ಮತ್ತು ಮಾನ್ಯ ಖರ್ಗೆಯವರು ಅಲ್ಲಿಗೆ ಬಂದ ಮೇಲೆ ನಾನು ಧರಣಿ ಮಾಡುವುದು ಬೇಡ Assembly is the proper forum to rise ನಮಗೆ ಆಗಿರತಕ್ಕಂತಹ ಅನ್ಯಾಯ, ಹಕ್ಕು ಚ್ಯುತಿ ಇವೆಲ್ಲಾ ರೈಸ್ ಮಾಡುವುದಕ್ಕೆ this is the proper forum, ಎಂದು ಅವರು convince ಮಾಡಿದ ಮೇಲೆ, ನಾನು ಧರಣಿಯನ್ನು ಬಿಟ್ಟು ಬಂದಿದ್ದೇನೆ. ತಾವು ಈಗ ಒಬ್ಬ ಪೊಲೀಸ್ Dy. S.P. ಕಾನೂನು ಅರಿವು ಇರಬೇಕಲ್ಲಾ ಅವನಿಗೆ, ಇದು ಉದ್ದೇಶ ಪೂರ್ವಕವಾಗಿ pre-planned, ಪೂರ್ವಯೋಜಿತವಾಗಿ ಇದನ್ನು ಮಾಡಿಕೊಂಡು ನನಗೆ ಅರೆಸ್ಟ್ ಮಾಡಿ, ಕಾರ್ಯಕರ್ತರಿಗೆ ಅರೆಸ್ಟ್ ಮಾಡಿ, ನಮ್ಮ ಕಾರ್ಯಕರ್ತರ ಮನೆಗಳಿಗೆಲ್ಲಾ ನುಗ್ಗಿ ಹೊಡೆದು, ಅವರಿಗೆ ಹಿಂಸೆ ಮಾಡಿರತಕ್ಕಂಥದ್ದು, ಅದಕ್ಕೆ ಕಾನೂನಿನಲಿ ಅವಕಾಶ ಇದೆಯಾ? ಆದ್ದರಿಂದ ಅತ್ಯಂತ ಉದ್ಧಟತನದಿಂದ ಅತಿರೇಕದಿಂದ ಆ Dy. S.P. ಮತ್ತು SP ಇಬ್ಬರೂ ನಡೆದುಕೊಂಡಿದ್ದಾರೆ. ಇದು ಒಂದು. ನನ್ನ ಎಲೆಕ್ಷನ್ ಆದ ಮೇಲೆ, ಪ್ರಕಾಶ್ ನಿಮಗೆ ಇದರ ದಾಖಲಾತಿಗಳನ್ನೆಲ್ಲಾ ಕಳುಹಿಸಿಕೊಡುತ್ತೇನೆ. ನಮ್ಮ ಹುಡುಗರಿಗೆ Dy.S.P. ಕರೆದು ನೀನು ಹೋದ ಎಲೆಕ್ಷನ್‌ನಲ್ಲಿ ಸಿದ್ದರಾಮಯ್ಯನವರಿಗೆ Canvas ಮಾಡಿದ್ದೆಯಾ? ನಿನಗೆ ರೌಡಿ ಲಿಸ್ಟ್‌ನಲ್ಲಿ ಸೇರಿಸುತ್ತೇನೆ. ಪೊಲೀಸ್ ಸ್ಟೇಷನ್‌ನಲ್ಲಿ ಫೋಟೋಗಳನ್ನು ಹಾಕಿ ರೌಡಿ ಲಿಸ್ಟ್‌ಗಳನ್ನು ಅನೌನ್ಸ್ ಮಾಡುತ್ತಾರೆ. ಅಲ್ಲಿಗೆ ಹಾಕುತ್ತೇನೆ ನಿನಗೆ ಎಂದು ಹೇಳಿ, ಬೆಳಮಾಡಿಯವರು ಗೂಟಗಳ್ಳಿಯವರು ಇವರಿಗೆಲ್ಲಾ ಕರೆದುಕೊಂಡು ಹೋಗಿ ಹಾಕಿದ್ದಾರೆ. ನಾನು ಕಮಿಷನರ್‌ಗೆ ಫೋನ್ ಮಾಡಿದರೆ, ಇಲ್ಲ ಸಾರ್ ಅದು ಹಳೆಯ ರೌಡಿಗಳನ್ನೆಲ್ಲಾ ನಾವು ವಿಚಾರಣೆ ಮಾಡುತ್ತಿದ್ದೇವೆ, ಅವರ ಮೇಲೆ ಯಾವುದೇ ಹಿನ್ನೆಲೆಗಳಿಲ್ಲ ಆ ತರಹದ ಸಾಕಷ್ಟು ಜನ ಇದ್ದಾರೆ. ರೌಡಿ activities ಮತ್ತು criminal activities ಮಾಡಿಕೊಂಡಿರುವವರು ಅವರನ್ನು ಬಿಟ್ಟು ನನಗೋಸ್ಕರ ಎಲೆಕ್ಷನ್‌ನಲ್ಲಿ ಕೆಲಸ ಮಾಡಿದಂತಹ ಹುಡುಗರನ್ನು ಕರೆದುಕೊಂಡು

ಹೋಗಿ, ರೌಡಿ ಲಿಸ್ಟ್ ನಲ್ಲಿ ಫೋಟೋ ತೆಗೆಸುವುದು. ನೀನೇನಾದರೂ ಮಾತು ಎತ್ತಿದರೆ ಒಳಗಡೆ ಹಾಕುತ್ತೇನೆಂದು ಹೇಳುತ್ತಾರೆ. ಆಲೂರುಗೂಬೆಯಲ್ಲಿ ಒಬ್ಬ ಹುಡುಗ ರಾಮೇಗೌಡ ಎಂದು ಇದ್ದಾನೆ, ಅವರ ಮನೆಗೆ ಹೋಗಿ ಅವರ ಪತ್ನಿ ಮೇಲೆ ಕೇಸ್ ಹಾಕಿದ್ದಾರೆ. ಈ ತರಹ ಒಂದು ರೀತಿ vengeance ನಿಂದ ಪೊಲೀಸ್ ನವರು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. This is not good, ಇವತ್ತು ನಾವು ಅಧಿಕಾರದಲ್ಲಿರಬಹುದು, ನೀವು ಅಧಿಕಾರದಲ್ಲಿರಬಹುದು, ಬದಲಾವಣೆ ಆಗಬಹುದು, ಅಥವಾ ಬದಲಾವಣೆ ಆಗದೇ ಇರಬಹುದು. ಆದರೆ ಎಲ್ಲರನ್ನೂ ರಕ್ಷಣೆ ಮಾಡಬೇಕಾದ ಜವಾಬ್ದಾರಿ ನಿಮ್ಮ ಮೇಲಿದೆ. ಸರ್ಕಾರ ನಡೆಸುವವರ ಮೇಲೆ ಜವಾಬ್ದಾರಿ ಇದೆಯಲ್ಲಾ. ವಿರೋಧ ಪಕ್ಷದವರಿಗೆ ರಕ್ಷಣೆ ಕೊಡಬೇಕಾದುದು ನಿಮ್ಮ ಜವಾಬ್ದಾರಿ ಆ responsibility ಯನ್ನು discharge ಮಾಡಬೇಕೋ ಬೇಡವೋ? ಅವರು ವಿರೋಧ ಪಕ್ಷದಲ್ಲಿದ್ದಾರೆ, ನಮಗೆ ಚುನಾವಣೆಯಲ್ಲಿ ಕೆಲಸ ಮಾಡಲಿಲ್ಲ, ಎಂದು ಹೇಳಿ ಹೆದರಿಸಿ, ಅವರಿಗೆ ನಿಮ್ಮನ್ನು ಜೈಲಿಗೆ ಕಳುಹಿಸುತ್ತೇವೆ. ನಿಮ್ಮನ್ನು ರೌಡಿ ಲಿಸ್ಟ್ ಗೆ ಹಾಕುತ್ತೇವೆ ಎಂದು ಪೊಲೀಸ್ ನವರು ಹೇಳುವುದಕ್ಕೆ what right they have? Does it not amount to infringement of fundamental right? ನನಗೇ ರಕ್ಷಣೆ ಇಲ್ಲದೆ ಇದ್ದ ಮೇಲೆ ಸಾಮಾನ್ಯ ಜನರಿಗೆ ಹೇಗೆ ರಕ್ಷಣೆ ಸಿಗುತ್ತದೆ? ನನಗೇ ರಕ್ಷಣೆ ಇಲ್ಲವೆಂದು ಹೇಳಿದ ಮೇಲೆ, ನನ್ನನ್ನೇ ಕಾನೂನು ಬಾಹಿರವಾಗಿ ಅರೆಸ್ಟ್ ಮಾಡುವುದಾದರೆ, ಬೇರೆಯವರಿಗೆ ಹೇಗೆ ರಕ್ಷಣೆ ಕೊಡುತ್ತೀರಿ? ಕೋಲಾರದಲ್ಲಿ ನಿನ್ನೆ ಕೊಲೆ ಆಗಿದೆ. ಅದರ ಬಗ್ಗೆ ನಾಳೆ ಮಾತನಾಡುತ್ತೇನೆ. ಈಗ ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. I don't want to mix up. ಇಷ್ಟರ ಮಟ್ಟಿಗೆ ಆಗಿದೆ. Protocol ನಲ್ಲಿ District in charge Minister ಗೆ ಕರೆಯಬೇಕೆಂದು ಯಾವ ಕಡ್ಡಾಯವಾದ ನಿಯಮ ಇಲ್ಲ. Concerned minister ನ್ನು ಕರೆಯಲೇಬೇಕೆಂದು ಯಾವ ಕಡ್ಡಾಯವಾದ notification ಇಲ್ಲ. Protocol ನಲ್ಲಿ ಇಲ್ಲ. MP ಕರೆಯಬೇಕು, MLCಗಳಿಗೆ ಕರೆಯಬೇಕು, ಅಲ್ಲಿಯ ಸ್ಥಳೀಯ ಜನಪ್ರತಿನಿಧಿಗಳಿಗೆ ಕರೆಯಬೇಕು ಎನ್ನುವುದು ಇದೆ ಹೊರತು, ಕರೆಯಲೇಬೇಕೆಂದು ಯಾವುದೇ ಕಡ್ಡಾಯ ಇಲ್ಲ. Where is the violation of the protocol ? ಇದು ಎಲ್ಲಾ ಕಡೆ ನಡೆಯುತ್ತಿದೆ. ವಿರೋಧ ಪಕ್ಷದವರಿಗೆ ಒಂದು yardstick, Ruling Party ಯವರಿಗೆ ಒಂದು yardstick ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ನಾನು MLA ಅವರೂ MLA ನೇ. ಜನ ಅವರಿಗೂ ಆಶೀರ್ವಾದ ಮಾಡಿ ಕಳುಹಿಸಿದ್ದಾರೆ, ನನಗೂ ಆಶೀರ್ವಾದ ಮಾಡಿ ಕಳುಹಿಸಿದ್ದಾರೆ. ನಾನು ಕೂಡ ನನ್ನ ಜವಾಬ್ದಾರಿಗಳನ್ನು ನಿರ್ವಹಿಸಲಿಕ್ಕೆ ನನಗೆ ಪೂರ್ಣ ಸ್ವಾತಂತ್ರ್ಯ ಇದೆ, ಅದು ನನ್ನ ಹಕ್ಕು. ಸಂವಿಧಾನ ಕೊಟ್ಟಿರತಕ್ಕಂತಹ ಹಕ್ಕು. ಆ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಯಾರಿಂದಲೂ ಕೂಡ ಸಾಧ್ಯವಾಗುವುದಿಲ್ಲ ಅದನ್ನು ಮೊಟಕುಗೊಳಿಸುವುದಕ್ಕೆ ಕೂಡ ಸಾಧ್ಯವಾಗುವುದಿಲ್ಲ. ಅದನ್ನು ದಮನ ಮಾಡಲಿಕ್ಕೆ ಕೂಡ ಯಾರಿಂದಲೂ ಸಾಧ್ಯವಾಗುವುದಿಲ್ಲ. ಇದು ಇವತ್ತು ನಡೆದಿರತಕ್ಕಂಥದ್ದು. ಆದ್ದರಿಂದ ನಾನು I demand. ಈ ಸರ್ಕಾರ entire issue ವನ್ನು ರಾಜಕೀಯ ದೃಷ್ಟಿಯಕೋನದಿಂದ ನೋಡುವುದಕ್ಕೆ ಹೋಗಬಾರದು. ಇದು MLA ಗೌರವದ ಪ್ರಶ್ನೆ. ಅವರ ಹಕ್ಕಿನ ಪ್ರಶ್ನೆ. ಇಲ್ಲಿ ಸಂಪೂರ್ಣವಾಗಿ ಹಕ್ಕಿನ ಚ್ಯುತಿ ಆಗಿದೆ. ಯಾವಾಗ ಹಕ್ಕು ಚ್ಯುತಿ ಆಗುತ್ತದೆ, ಯಾರೂ ಹಕ್ಕು ಚ್ಯುತಿಗೆ ಕಾರಣಕರ್ತರು ಇದ್ದಾರೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ನನ್ನ ಪ್ರಕಾರ, pending enquiry, immediately that Dy. SP and SP must be kept under suspension. Refer the matter to the privileges Committee. This is a simple demand. ಇದು ಆಗಲೇ ಬೇಕು. ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡಬೇಕಾದ ಜವಾಬ್ದಾರಿ ನಿಮ್ಮ ಮೇಲೆ ಇದೆ. ಮಾನ್ಯ ಅಧ್ಯಕ್ಷರೇ ಈ ಪೀಠದಲ್ಲಿ ಕುಳಿತು ನೀವು ಇಲ್ಲಿ ಇರತಕ್ಕಂತಹ ಎಲ್ಲ ೨೨೫ ಜನ ಶಾಸಕರ ಹಕ್ಕುಗಳನ್ನು ರಕ್ಷಣೆ ಮಾಡತಕ್ಕಂತಹ ಅವರಿಗೆ ಅಗೌರವ ಆಗದೇ ಇರುವ ರೀತಿಯಲ್ಲಿ ಸರ್ಕಾರದ ಅಧಿಕಾರಿಗಳು ಉದ್ಧಟತನದಿಂದ ದುರಹಂಕಾರದಿಂದ ಮಾಡಕೂಡದು, ಮಾಡಬಾರದು. ಅವರನ್ನು ಅಗೌರವವಾಗಿ ನಡೆಸಿಕೊಳ್ಳಬಾರದು ಎನತಕ್ಕಂಥದ್ದನ್ನು ಎಲ್ಲರೂ ತಿಳಿಯಬೇಕು. ನೂರಾರು ಸರ್ಕಾರದ ಆಜ್ಞೆಗಳನ್ನು ಕಳುಹಿಸಿದ್ದೇವೆ. ಸುತ್ತೋಲೆಗಳನ್ನು ಕಳುಹಿಸಿದ್ದೇವೆ. ಎಷ್ಟು ವರ್ಷಗಳಿಂದ ಈ ತರಹದ ಸುತ್ತೋಲೆಗಳು ಹೋಗುತ್ತಿವೆ, ಆ ಸುತ್ತೋಲೆಗಳ ಅರಿವು ಅವರಿಗೆ ಇಲ್ಲ. ಎನ್ನುವುದಾದರೆ, they are unfit to continue as officers, Government servants to occupy that post. very important post. SP, ವರಿಷ್ಠಾಧಿಕಾರಿ ಜಿಲ್ಲೆಗೆ. Ignorance of law is no excuse. ನಾನು ignorance ಎಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ನಾನು ಒತ್ತಾಯ ಮಾಡುತ್ತಿದ್ದೇನೆ. ದಯವಿಟ್ಟು ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಅವರಿಬ್ಬರೂ

ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ ತಕ್ಷಣ ನನಗೆ ಹೋದ ಗೌರವ ಬರುತ್ತದೆ ಎಂದು ತಿಳಿದುಕೊಂಡಿಲ್ಲ. But they have violated the law, violated notification, established principles. ಆದ್ದರಿಂದ, they deserve to be punshed, ಸರ್ಕಾರ ಇದನ್ನು ರಾಜಕೀಯವಾಗಿ ನೋಡಿದೆ. ನಾನು ಬೇರೆ ಪಾರ್ಟಿಯಲ್ಲಿದ್ದೇನೆ, ನಾನು ವಿರೋಧ ಪಕ್ಷದಲ್ಲಿದ್ದೇನೆ, ನಾವು ಅಧಿಕಾರ ನಡೆಸುವವರು, ಎನ್ನುವ ಕಾರಣದಿಂದ ದಯವಿಟ್ಟು ನೋಡುವುದಕ್ಕೆ ಹೋಗಬೇಡಿ. ತಪ್ಪು ಮಾಡಿದ್ದಾರೆ. ನಾನು ಯಾವುದೇ ಸಣ್ಣ ಪುಟ್ಟ ವಿಚಾರಗಳಲ್ಲಿ ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ಹೇಳುವುದಕ್ಕೆ ಹೋಗುವುದಿಲ್ಲ. ಬಹಳ ದೊಡ್ಡ ತಪ್ಪು ಮಾಡಿದ್ದಾರೆ. ಆದ್ದರಿಂದ ಅವರಿಗೆ ಶಿಕ್ಷೆ ಆಗಲೇ ಬೇಕು. ನಮ್ಮ rescue ಗೆ ನೀವು ಬರಬೇಕು. ಈ ಸರ್ಕಾರ ಕೂಡ ನಮ್ಮ rescue ಗೆ ಬರಬೇಕು. ತಮ್ಮ ಗೌರವ ಕಾಪಾಡತಕ್ಕಂತಹ ಕೆಲಸ ಮಾಡಬೇಕು. ನಮಗೂ ರಕ್ಷಣೆ ಕೊಡತಕ್ಕಂತಹ ಕೆಲಸವನ್ನು ನೀವು ಮಾಡಬೇಕು. ಅದು ಮಾಡದೇ ಹೋದರೆ ನೀವು ಜವಾಬ್ದಾರಿ ನಿರ್ವಹಿಸಲಿಲ್ಲ ಎಂದಾಗುತ್ತದೆ. ನೀವು ಉದ್ದೇಶಪೂರ್ವಕವಾಗಿ ಮಾಡಿದಿರಿ ಎಂದಾಗುತ್ತದೆ. ದಯವಿಟ್ಟು ಮುಂದೆ ಅವರು ಉತ್ತರ ಏನು ಕೊಡುತ್ತಾರೆಂದು ನೋಡಿಕೊಂಡು ನಂತರ ಹೇಳುತ್ತೇನೆ. ಇದು ಬಹಳ ಗಂಭೀರವಾದ ವಿಚಾರ. ಇದು ನನ್ನ ಹಕ್ಕಿಗೆ ಸಂಬಂಧಪಟ್ಟ ವಿಚಾರ. ನನ್ನ ಗೌರವಕ್ಕೆ ಸಂಬಂಧಪಟ್ಟ ವಿಚಾರ. ಪೋಲೀಸ್ ನವರು ಬಹಳ ಉದ್ಧಟತನದಿಂದ ನಡೆದುಕೊಂಡಿದ್ದಾರೆ. ಅತಿರೇಕದಿಂದ ನಡೆದುಕೊಂಡಿದ್ದಾರೆ. ಸರ್ಕಾರ ಇದನ್ನು ಸಾಮಾನ್ಯ ವಿಷಯವೆಂದು ಪರಿಗಣಿಸಬಾರದು ಎಂದು ಹೇಳಿ, ನಾನು ನಿಮ್ಮ ಮೂಲಕ ಅವರಿಗೂ ಕೂಡ ಹೇಳುತ್ತಾ, ನಾನು ಇದನ್ನು ತೀವ್ರವಾಗಿ ಒತ್ತಾಯ ಮಾಡುತ್ತಿದ್ದೇನೆ. ಇಲ್ಲದೇ ಹೋದರೆ ನಾವು ಹೊರಗಡೆ ಕೂಡ ಹೋರಾಟ ಮಾಡಬೇಕಾಗುತ್ತದೆ. ಅದು ಬೇರೆ ವಿಚಾರ. This is the proper forum to seek justice. ಅದು ನ್ಯಾಯ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಉತ್ತರ ಕೊಡುತ್ತೇನೆ ನಂತರ ಹೇಳಿ. Privilege ನಲ್ಲಿ ಅವರು ಏನು ಪ್ರಸ್ತಾಪ ಮಾಡಿದ್ದಾರೆ, privilege notice ಅವರು ಕೊಟ್ಟ ಮೇಲೆ ತಾವು ಹೇಳುವಂತಹದ್ದು ಎಲ್ಲ ಅವರು ಹೇಳಿದ್ದಾರೆ. ನಾವು ಏನು ಉತ್ತರ ಕೊಡಬೇಕು ಕೊಟ್ಟ ಏಲೆ ತಾವು ಕೇಳಿ.

ಅಧ್ಯಕ್ಷರು : ಅವರು ಉತ್ತರ ಕೊಟ್ಟ ಮೇಲೆ ನೀವು ಮಾತನಾಡಿ.

ಶ್ರೀ ಜಿ.ಟಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ ನಾನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವನಾಗಿ,...

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೇ, ಗೃಹಸಚಿವರು ಉತ್ತರ ಕೊಡಲಿ ನಂತರ ನೀವು ಮಾತನಾಡಿ.

ಶ್ರೀ ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು) : ನಾನು ಮತ್ತು ಖರ್ಗೆ ಅಲ್ಲಿಗೆ ಹೋಗಿದ್ದೇವೆ. ನಾನು ಎಸ್.ಪಿ. ಜೊತೆಯಲ್ಲಿ ಮಾತನಾಡಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು ಏನು ಪ್ರಸ್ತಾಪ ಮಾಡಿದ್ದಾರೆ, ನನಗೆ ಅಲ್ಲಿಂದ ಫೋನ್ ಕಾಲ್ ಬಂದಿತು. ಸಿದ್ದರಾಮಯ್ಯನವರಿಗೆ ಅರೆಸ್ಟ್ ಮಾಡಿದ್ದಾರೆ, ನಾನು immediate ಆಗಿ ಮೈಸೂರಿನ ಪೊಲೀಸ್ ಕಮಿಷನರ್ ಗೆ ಫೋನ್ ತೆಗೆದುಕೊಂಡು ಮಾತನಾಡಿದೆ, ಇಲ್ಲ ಸಾರ್, ಮುರುಗನ್ ಇದ್ದಾರೆ, he is in charge. Murugan, what happened ಎಂದು ಕೇಳಿದೆ, ಇಲ್ಲ ಸಾರ್ ಅಲ್ಲಿ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಲಿಕ್ಕೆ ಹೋಗಿದ್ದರು, ಸ್ವಲ್ಪ ಘರ್ಷಣೆ ಆಯಿತು, ಘರ್ಷಣೆ ತಪ್ಪಿಸತಕ್ಕಂತಹ ರೀತಿಯಲ್ಲಿ ಇವತ್ತು ನಾವು ಅವರಿಗೆ ಅರೆಸ್ಟ್ ಮಾಡಿದ್ದೇವೆ. ಅವರು ಎಲ್ಲಿದ್ದಾರೆ ಕೊಡಿ ಫೋನ್ ನಲ್ಲಿ ಮಾತನಾಡುತ್ತೇನೆ ಎಂದು ಹೇಳಿದ್ದಕ್ಕೆ ಮುಂದಿನ DAR van ನಲ್ಲಿದ್ದಾರೆ ಎಂದು ಹೇಳಿದರು. Murugan repeatedly ಇಂತಹ mis-take ಮಾಡುತ್ತಿದ್ದಾರೆ. ಮಾನ್ಯ ಜಯಕುಮಾರ್ ರವರಿಗೆ ಗೊತ್ತಿರಬಹುದು, ಅವರು ಉಡುಪಿ ಜಿಲ್ಲೆಯಲ್ಲಿ ಕೂಡ SP ಆಗಿದ್ದರು. ಉಡುಪಿಯಲ್ಲಿ SP ಆಗಿ ಮೂರೇ ಗಂಟೆಗಳಲ್ಲಿ ಅಲ್ಲಿರತಕ್ಕಂತಹ ಅಲ್ಪ ಸಂಖ್ಯಾತರನ್ನು ಥಳಿಸಿ, morning ಅಲ್ಲಿಂದ ಜನಾರ್ಧನ ಪೂಜಾರಿಯವರಿಂದ phone call ಬಂದಿತು. What happened to that SP ಎಂದು ಕೇಳಿದೆ. Exact ೭.೩೫ ಕ್ಕೆ ನಾನು ಫೋನ್ ಮಾಡಿದೆ. ಸಾರ್ ನನಗೆ ಏನೂ ಗೊತ್ತಿಲ್ಲ ಎಂದರು. ನೀನು ಎಂತಹ SP ಆಗಿದ್ದೀಯಾ? ದೊಡ್ಡ ಗಲಾಟೆ ಆಗಿದೆ, ಎರಡೂ ಕೋಮುಗಳ ನಡುವೆ ತೀವ್ರ ಘರ್ಷಣೆ ನಡೆಯುತ್ತಿದೆ, ನನಗೇನೂ ಗೊತ್ತಿಲ್ಲವೆಂದು ಹೇಳುತ್ತಿದ್ದೀಯಾ? ನಾನು ಫೋನ್ ಮಾಡಿ ಅವರನ್ನು DAR van ನಲ್ಲಿ ಏಕೆ ತೆಗೆದುಕೊಂಡು ಹೋಗುತ್ತಿದ್ದಾರೆ?

You are a Police officer, ಇಂತಹ ಒಂದು ಪ್ರಸಂಗ ಬಂದಿದೆ, ಮಾನ್ಯ ಸಿದ್ದರಾಮಯ್ಯನವರು ಈ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿದ್ದವರು, ಆ ಕ್ಷೇತ್ರದ ಪ್ರತಿನಿಧಿ ಆಗಿದ್ದಾರೆ. ಅಲ್ಲಿ ಹೋಗಿದ್ದಾರೆ, ಏನೋ ಗ್ರಾಮ ಪಂಚಾಯಿತಿಗೆ ಕರೆಸಿ ನೋಡಿ ಸೆಟ್ ರೈಟ್ ಮಾಡಬೇಕು. ಇವತ್ತು ಸಿದ್ದರಾಮಯ್ಯನವರನ್ನು DAR van ನಲ್ಲಿ ತೆಗೆದುಕೊಂಡು ಹೋದರೆ, what will be the reaction ? ನಾನು ಅವರಿಗೇ ಮಾತನಾಡಿ ಹೇಳಿದೆ. ತದನಂತರ ಸೆಲ್ವಕುಮಾರ್ ರವರಿಗೆ ಮಾತನಾಡಿದೆ. ನಮ್ಮ ಕಾಲದಲ್ಲಿ he is one of the best officers. ಏನ್ರೀ what happened? ಅಧಿಕಾರಿಗಳು ಎಷ್ಟು ಅಂಜಿ ಬಿಟ್ಟಿದ್ದಾರೆ, ಎಂದು ಕೇಳಿದಾಗ, he is not ready to tell anything. ನಾನು, Leader of the Opposition, I am asking you, that SP has arrested Mr. Siddaramaiah. What is the reason ? District administration ನಿಮ್ಮ ಕೈಯಲ್ಲಿ ಇದೆ ಎಂದು ಕೇಳಿದರೆ, ಇಲ್ಲ ಸಾರ್ ನಾನು ನೋಡಿ ಹೇಳುತ್ತೇನೆದು ಅವರು ಹೇಳುತ್ತಾರೆ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಕೂಡ ಬಂದಿದ್ದಾರೆ, ಎಲ್ಲಾ ಕ್ಷೇತ್ರಗಳಲ್ಲಿ ಇಂತಹ ಘಟನೆಗಳು ನಡೆಯುತ್ತಿವೆ. ನಾವು ವಿಧಾನಸಭೆಯಲ್ಲಿ ಕುಳಿತು ಸಣ್ಣ ಪುಟ್ಟ ಘಟನೆಗಳ ಬಗ್ಗೆ ಮತ್ತು ನಮ್ಮಲ್ಲಿ ಆಗತಕ್ಕಂತಹ ಘಟನೆಗಳನ್ನು ನಾವು ಎದುರಿಸುತ್ತೇವೆ. ಕೆಲವು ಜನ ಎದುರಿಸುತ್ತಾರೆ. ಅವರೂ ಕೂಡ ಎದುರಿಸುತ್ತಾರೆ. ಇವತ್ತು ಈ ತರಹದ ವಾತಾವರಣ ನಿರ್ಮಾಣ ಮಾಡತಕ್ಕಂತಹ ರೀತಿಯಲ್ಲಿ ಅಧಿಕಾರಿಗಳು ಏನು ಮಾಡುತ್ತಾರೆ, ಅಧಿಕಾರಿಗಳ ಬಗ್ಗೆ ನಾನು ಏಕೆ ಇಲ್ಲಿ ಮಾತನಾಡುವುದಕ್ಕಿಂತ ಮುಂಚೆ ಮಾತನಾಡಿದೆ ಎಂದರೆ, ನಾನೂ Home Minister ಆಗಿ ಮಾಡಿದ್ದೇನೆ, Mr. Kharge ಯವರೂ Home Minister ಆಗಿ ಕೆಲಸ ಮಾಡಿದ್ದಾರೆ, ತಾವೂ ಕೂಡ ಕೆಲಸ ಮಾಡಿದ್ದೀರಿ. ನಮಗೆ ಹೆಚ್ಚಿನ ಅನುಭವ ಇದೆ. ಇವತ್ತು ಪ್ರಜಾಪ್ರಭುತ್ವದಲ್ಲಿ ಇಂತಹ ಕೆಲಸಕ್ಕೆ ಒಂದು ತರಹದ ಪ್ರಚೋದನೆ, ಸಹಾಯ ಮಾಡತಕ್ಕಂತಹ ರೀತಿಯಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಾರೆ, ಜನಾಭಿಪ್ರಾಯ ನಡೆದ ಸರ್ಕಾರ, here is the Government. ಇವತ್ತು ಪ್ರಸ್ತಾಪ ಮಾಡಿದಾಗ they have taken a stem action ಎನ್ನತಕ್ಕಂತಹ ರೀತಿಯಲ್ಲಿ you have to create that confidence. ಆ confidence ಇವತ್ತು ಬರುತ್ತಿಲ್ಲ. ಇವತ್ತು ಶ್ರೀನಿವಾಸಪುರದಲ್ಲಿ ಏನಾಗಿದೆ, ಅದರ ಬಗ್ಗೆ ನಾವು ನಾಳೆ ಹೇಳುತ್ತೇವೆ. ಶ್ರೀನಿವಾಸಪುರದಲ್ಲಿ ಹಗಲೇ ಒಬ್ಬ ದಲಿತ ಮುಖಂಡನನ್ನು ಕೊಲೆ ಮಾಡುವಂಥಾದ್ದು.

ಎಲ್ಲಾ ಕಡೆಯಲ್ಲೂ ಈ ರೀತಿಯಾದರೆ, ನಾವು ಇದು ಆದಮೇಲೆ ಎಲ್ಲಾ ಕಡೆಯಲ್ಲೂ ಮಾತನಾಡಿದೆವು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿದರು, ಖಂಡನೆ ಮಾಡಿದೆವು. ನಾವು ಮುಂಜಾನೆ ೧೧ ಗಂಟೆಗೆ ಹೋಗಿದ್ದೆವು. ಅಲ್ಲಿ ಹೋದಾಗ ಧರಣಿ ಸತ್ಯಾಗ್ರಹ ನಡೆಯುತ್ತಿತ್ತು. ನಾವು ಕೂಡ ಕೇಳಿದೆವು. ಅದು ಆಗುವಾಗ ನಾವು, ಮಾನ್ಯ ಸಿದ್ದರಾಮಯ್ಯನವರಿಗೆ ಏನು request ಮಾಡಿದೆವೆಂದರೆ, ಈಗ examination ನಡೆಯುತ್ತಿದೆ, ಎಲ್ಲಕೂ examination centre ಗೆ ಹೋಗಬೇಕು. ಎಲ್ಲಾ ಕಡೆಯಲ್ಲೂ ಬಂದ್ ಕರೆಯನ್ನು ಕೊಟ್ಟಿದ್ದಾರೆ. ಸಾಕಷ್ಟು ಪ್ರತಿಕ್ರಿಯೆ ಅಲ್ಲೆ ಅಲ್ಲ. ಆನೇಕಲ್ ನಲ್ಲಿ ಆಗಿದೆ, ನಿನ್ನೆ ದಿವಸ ಶಿವಮೊಗ್ಗದಲ್ಲಿ ಆಗಿದೆ, ಗುಲ್ಬರ್ಗಾದಲ್ಲಿ ಆಗಿದೆ. ಇದು ಸದನ, ಒಬ್ಬ ಯಾರಾದರೂ ಸದಸ್ಯರು ಸದನ ನಡೆಯುತ್ತಿರುವಾಗ arrest ಆದರೆ, immediately you have to announce. ಅರೆಸ್ಟ್ ಮಾಡಿದ್ದಾರೆ, ಬಿಡುಗಡೆ ಮಾಡಿದರೆ, ನಿಮ್ಮ ಆಶ್ರಯದಿಂದ ಬಿಡುಗಡೆ ಮಾಡಿದ್ದಾರೆಂದು ಹೇಳಬೇಕು. Because, ಸದನ ನಡೆಯುವಂಥ ಕಾಲದಲ್ಲಿ ನಾವೆಲ್ಲರೂ ನಿಮ್ಮ ರಕ್ಷಣೆಗೆ ಒಳಗಾಗಿದ್ದೇವೆ. ಹೊರಗಡೆ ಆಗುವಂಥ ಎಲ್ಲಾ ಅನಾಹುತಗಳ ಬಗ್ಗೆ ನೀವು ನಿಗಾ ವಹಿಸಬೇಕು. ಅದರ ಬಗ್ಗೆ ಕ್ರಮ ಕೂಡ ತೆಗೆದುಕೊಳ್ಳಬೇಕು. ನೀವು ಹೇಳುತ್ತಿರಾ, ನಮಗೆ ಏನು ಗೊತ್ತಾಗಲಿಲ್ಲವೆಂದು, ಗೊತ್ತಾಗಿಲ್ಲ, ಮುಂಜಾನೆ ಅದು ನಿಮಗೆ ಗೊತ್ತಾಗಿರಬೇಕು. ಅದಕ್ಕೆ ಇವತ್ತಿನ ದಿವಸ ಇಂತಹ ಘಟನೆಗಳು ಎಲ್ಲಾ ಕಡೆಗಳಲ್ಲೂ ನಡೆಯುತ್ತಿವೆ. ನಾವು ಒಂದು ವೇಳೆ ನಿನ್ನೆ ದಿವಸ ಹೋಗದೇ ಇದ್ದಿದ್ದರೆ, request ಮಾಡದೇ ಹೋಗಿದ್ದಿದ್ದರೆ, ಮಾನ್ಯ ಸಿದ್ಧರಾಮಯ್ಯನವರು ಧರಣಿಯನ್ನು ವಾಪಸ್ಸು ತೆಗೆದುಕೊಳ್ಳದೇ ಹೋಗಿದ್ದರೆ, ಇನ್ನು ಅನಾಹುತ ಆಗುತ್ತಿತ್ತು. ಇವತ್ತು ನಿಜವಾಗಿ ಏನು ಆಗುತ್ತದೆ? ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಚುನಾವಣೆಯಲ್ಲಿ ಗೆದ ನಂತರ, ಈ ರೀತಿಯಲ್ಲಿ ಎಲ್ಲಾ ಕಡೆಗಳಲ್ಲೂ ಅಧಿಕಾರಿಗಳು ಹೋಗುತ್ತಾರೆ, ದಬ್ಬಾಳಿಕೆ ಮಾಡುತ್ತಾರೆ. ಯಾರ್ಯಾರು ಏನೇನು ಮಾಡಿದ್ದಾರೆನ್ನುವ ರೀತಿಯಲ್ಲಿ ನಡೆಯುತ್ತಿದೆ. ಇವತ್ತು ನಾವು ಎಲ್ಲಾ ಕಡೆಗಳಲ್ಲೂ ನೋಡಿದ್ದೇವೆ. ಈ ರಾಜ್ಯದ ಪ್ರಜಾಪ್ರಭುತ್ವದಲ್ಲಿ ಜನರನ್ನು ಹತ್ತಿಕ್ಕುವಂಥಾದ್ದು ಆಗುವುದಿಲ್ಲ, ಬಹಳಷ್ಟು ಕಡೆ ಆಯಿತ್ತಲ್ಲಾ, ನಮಗೆ ಆಯಿತ್ತಲ್ಲಾ, ಮಾನ್ಯ ನಾರಾಯಣ ಸ್ವಾಮಿ, ಹೆಚ್. ಕೆ. ಪಾಟೀಲ್ ಅವರು ಹೋಗಿದ್ದೆವು. They have not allowed. ಎಲ್ಲಾ ಕಡೆಗಳಲ್ಲೂ ಘೇರಾವ್ ಹಾಕಿದರು, ಕಲ್ಲು ಹೊಡೆಯುವುದಕ್ಕೆ ಪ್ರಾರಂಭ ಮಾಡಿದರು, ಸಾಕಷ್ಟು ಆಯಿತು. ನಾವು ಇದನ್ನು ಯಾರಿಗೆ ಹೇಳಬೇಕು.

ನಾವು ಮತ್ತೆ ಮೈಸೂರಿನಿಂದ ಬೆಂಗಳೂರಿಗೆ ಬಂದೆವು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಏನು ಆಯಿತು ? ಒಂದು ರೀತಿ ಅಂಜಿಕೆ ಹುಟ್ಟಿಸುವ ರೀತಿಯಲ್ಲಿ, ಇವತ್ತು ಭಯದ ವಾತಾವರಣವನ್ನು ಮಾಡಬಾರದು. ನಾನು ಮಾನ್ಯ ಮುಖ್ಯಮಂತ್ರಿಯವರನ್ನು request ಮಾಡುತ್ತೇನೆ. ಇವತ್ತು ಸದನದಲ್ಲಿ ಮಾನ್ಯ ಗೃಹ ಮಂತ್ರಿಯವರು ಇದ್ದಾರೆ. ಒಳ್ಳೆಯ ವಾತಾವರಣ ನಿರ್ಮಾಣ ಮಾಡುವಂಥ ರೀತಿಯಲ್ಲಿ ತಾವು ಮಾಡಬೇಕು. ಇವತ್ತು ರಾಜ್ಯದ ಮಾಜಿ ಉಪ ಮುಖ್ಯಮಂತ್ರಿಯವರಿಗೆ ಈ ರೀತಿಯಲ್ಲಿ ಮಾಡುತ್ತೇವೆಂದರೆ, ಮತ್ತೊಬ್ಬ ಸಾಧಾರಣ ಕಾರ್ಯಕರ್ತನಿಗೆ ಏನಾಗಬಹುದೆಂಬ ಅಭಿಪ್ರಾಯ ಮೂಡುವಂತಹ ರೀತಿಯಲ್ಲಿ ಹೋಗಬಾರದು. ಇವತ್ತು ಎಲ್ಲವನ್ನು ಹೇಳಿದ್ದಾರೆ, ಅದಕ್ಕೆ ಇವತ್ತಿನ ದಿವಸ ಬಹಳಷ್ಟು ಚರ್ಚೆಯನ್ನು ಮಾಡುತ್ತೇವೆ. ಒಬ್ಬ ಶಾಸಕನಿಗೆ ಜನ ಪ್ರತಿನಿಧಿಗಳಿಗೆ ಅವಕಾಶ ಕೊಡಲಾರದಂಥ ರೀತಿಯಲ್ಲಿ, ಒಬ್ಬ ಅಧಿಕಾರಿ ಅಡ್ಡಿ ಅತ್ಯಂತ ಮಾಡುತ್ತಾನೆ. ಪೋಲೀಸ್ ಸ್ಟೇಷನ್ ಗೆ ವಿನಾ ಕಾರಣ ಕರೆದುಕೊಂಡು ಹೋಗುತ್ತಾನೆ. ಇದೆಲ್ಲಾ ಖಂಡನೀಯವಾದ ವಿಚಾರ. ಇಂಥ ವಿಚಾರಗಳು ಮತ್ತೆ ಮರುಕಳಿಸಬಾರದು. ಇವತ್ತು ಮಾನ್ಯ ಪ್ರಕಾಶ್ ರವರು ಉತ್ತರವನ್ನು ಕೊಡುವ ಸಂದರ್ಭದಲ್ಲಿ, ತಮ್ಮ ಅನುಭವದ ಆಧಾರದ ಮೇಲೆ, ಇವತ್ತು bureaucrats ಇದ್ದಾರಲ್ಲಾ, ಒಂದು ರೀತಿಯ instruction you have to give. ಈ ರೀತಿಯಲ್ಲಿ ಮಾಡಿ ಸರ್ಕಾರ ಒಳ್ಳೆಯದನ್ನು ಮಾಡುತ್ತಿದ್ದೇವೆ, ನೀವು ನಮಗೆ ಕೆಟ್ಟ ಹೆಸರನ್ನು ತರುತ್ತಿದ್ದೀರಿ. ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಲೇ ಬೇಕಾಗುತ್ತದೆ. ಈಗಾಗಲೇ, ಮುರುಗನ್, S.P. I know, You know. ಮತ್ತೆ ಚೆಲುವರಾಜು ಎಂದು ಯಾರು ಇದ್ದಾರೆ. ಅವರು ನಮ್ಮ ಕಾಲದಲ್ಲಿ ಬಂದು, ಇವರನ್ನು ಮಾನ್ಯ ರೇವಣ್ಣನವರೇ ಹೇಳಿ ಹಾಕಿಸಿರಬೇಕು. ನಾನು ಹೇಳುವಂಥಾದ್ದು ಏನೆಂದರೆ, you have to be very strict. ನೀವು ಸುಮ್ಮನೆ ಏನು ಹಾಕುವಂಥಾದ್ದು ಅಲ್ಲ. ಕೌಲ್ ಅಂಡ್ ಶೆಕ್ಧರ್ ಪುಸ್ತಕ ನೋಡಿ. ಎಲ್ಲಾ ನಿಯಮಾವಳಿಗಳ ಪ್ರಕಾರವೇ ಉತ್ತರವನ್ನು ಕೊಡುವುದಿಲ್ಲ. You are the Home Minister of the State. Some times, you have to act, ಆದಷ್ಟು ನೀವು frank ಆಗಿ ಮಾಡಬೇಕಾಗುತ್ತದೆ. ಆ ಪುಸ್ತಕದಿಂದಲೇ ಆಗುವುದಿಲ್ಲ, ಮಾನ್ಯ ಸಿದ್ಧರಾಮಯ್ಯನವರು ಪ್ರಸ್ತಾಪ ಮಾಡಿದಂತಹ ಪ್ರಶ್ನೆಗೆ ಜನಾಭಿಪ್ರಾಯ ಏನು ಮೂಡಿದೆ, ಅದಕ್ಕೆ ಸಕಾರ ಸ್ಪಷ್ಟವಾದ ಉತ್ತರವನ್ನು ಕೊಡಬೇಕು, ತಪ್ಪಿತಸ್ಥ ಅಧಿಕಾರಿಗಳಿಗೆ ರಕ್ಷಣೆ ಕೊಡಬಾರದು, ಆ ಅಧಿಕಾರಿಗಳನ್ನು ಕೂಡಲೇ ಅಮಾನತು

ಮಾಡಿದರೆ, ಒಂದು ರೀತಿಯ confidence create ಆಗುತ್ತದೆ. ಆ ರೀತಿಯಲ್ಲಿ ಸರ್ಕಾರ ಉತ್ತರ ಕೊಡಬೇಕೆಂದು ಹೇಳುತ್ತಾ, ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಮಾತನಾಡಲು ಅವಕಾಶವನ್ನು ಕೊಡಿ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ನಾನು ನಿಮ್ಮ ಪರವಾಗೇ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನನ್ನ ಪರವಾಗಿ ಬೇಡ. ನಮ್ಮೆಲ್ಲರ ಪರವಾಗಿ ಹೇಳಿ.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಆಯಿತು, ನಾನು ಇಲ್ಲಿ ಏಕೆ ಮಾತನಾಡಬೇಕೆಂದು ಹೇಳಿದ್ದೇನೆಂದರೆ, ಮಾನ್ಯ ಸಿದ್ಧರಾಮಯ್ಯನವರಿಗೆ ಇವತ್ತು ಏನು ಆಗಿದೆ. ಇದು ನನಗೆ ಒಂದೂವರೆ ವರ್ಷದ ಮುಂಚೆ ಆಗಿತ್ತು. ಆಗ ನನಗೆ ಇಡೀ ಸದನದ ಎಲ್ಲಾ ಹಿರಿಯ ಸದಸ್ಯರು ನನಗೆ ಸಹಕಾರವನ್ನು ಕೊಟ್ಟಿದ್ದರು. ಅವತ್ತಿನ ಘಟನೆಯನ್ನು ನಾವು ಸರಿಯಾದ ರೀತಿಯಲ್ಲಿ handle ಮಾಡಿದಿದ್ದರೆ, ಬಹುಶಃ ಇವತ್ತಿನ ಘಟನೆ ನಡೆಯುತ್ತಿರಲಿಲ್ಲ. ಅವತ್ತು ನಾನು ಆ ಕಡೆ ಕುಳಿತುಕೊಂಡು ಬಹಳ ಕೇಳಿದೆ. ನಾನು ಏನೂ ತಪ್ಪು ಮಾಡಿಲ್ಲ, ನನ್ನನ್ನು ೧೧ ದಿವಸ ಕರೆದುಕೊಂಡು ಹೋಗಿ ಜೈಲಿನಲ್ಲಿ ಇಟ್ಟರು. ನಾನು ೧೧ ದಿವಸಗಳು ಜೈಲಿಗೆ ಹೋಗುವಂಥಾ ಕೆಲಸ ಏನು ಮಾಡಿದ್ದೆ ಎಂದು ಕೇಳಿದರೆ, ನಾನು ಏನು ಗನ್ ಹಿಡಿದುಕೊಂಡಿದ್ದೆನಾ? ಬಾಂಬ್ ಹಿಡಿದುಕೊಂಡಿದ್ದೆನಾ? ನಾನು ಬರೀ ಮೈಕ್ ಹಿಡಿದುಕೊಂಡಿದ್ದೆ, ಎನ್ನುವ ಕಾರಣವನ್ನು ಕೊಟ್ಟರು. ಇದು ಸರಿಯಲ್ಲ, ಇವತ್ತು ಮಾನ್ಯ ಸಿದ್ದರಾಮಯ್ಯನವರು ಹೇಳುತ್ತಿದ್ದಾಗ, ನನಗೆ ಇದೇ ಅನುಭವವಾಗುತ್ತಾ ಇತ್ತು. ನನ್ನನ್ನು ಒಳಗಡೆ ಕೂರಿಸಿಕೊಂಡು ರಾತ್ರಿ ೧೦ ಗಂಟೆಯಲ್ಲಿ, ನೀನು ಎದ್ದು ಮನೆಗೆ ಹೋಗೆಂದು ಹೇಳಿದರು. ನನ್ನನ್ನು ಏಕೆ ಮನೆಗೆ ಕಳುಹಿಸುತ್ತಿದ್ದೀರಿ, ನೀವು ನನ್ನನ್ನು ಏಕೆ ಇಲ್ಲಿಗೆ ಕರೆದುಕೊಂಡು ಬಂದಿದ್ದೀರೆಂದು ಕೇಳಿದರೆ, ಕರೆದುಕೊಂಡು ಬಂದಿದ್ದೇವೆ. ಈಗ ಏನು ಇಲ್ಲ ಮನೆಗೆ ಹೋಗಿ ಎಂದು ಹೇಳಿದರು. ಇದನ್ನೇ ಅವತ್ತು ನನಗೆ ಮಾಡಿದ್ದರು, ಅವತ್ತು ಆ ಡಿವೈ ಎಸ್ ಪಿ ಶಿವಕುಮಾರ್ ರವರನ್ನು ವಜಾ ಮಾಡುವುದೋ, suspend ಮಾಡುವುದೋ, ಈ ಸದನ ಮಾಡಿದಿದ್ದರೆ, ಇವತ್ತು

ಇನ್ನೊಬ್ಬ ಅಧಿಕಾರಿ ಈ ಧೈರ್ಯ ಮಾಡುತ್ತಿರಲಿಲ್ಲ. ಇನ್ನೊಬ್ಬ ಶಾಸಕರ ಮೇಲೆ ಕೈ ಹಾಕಬೇಕಾದರೆ, ಇನ್ನೊಂದು ಮಾಡಬೇಕಾದರೆ, ಅವತ್ತು ನಾನು ಕೈ ಕೈ ಮುಗಿದು ಕೇಳಿದೆ. ಅವತ್ತು ಇದ್ದಂತಹ ಎಲ್ಲಾ ಹಿರಿಯ ಸದಸ್ಯರು, ಮಾನ್ಯ ರಮೇಶ್ ಕುಮಾರ್ ರವರು, ಮಾನ್ಯ ವಾಟಾಳ್ ನಾಗರಾಜುರವರು, ಮಾನ್ಯ ಮಾಧುಸ್ವಾಮಿಯವರಿಂದ ಹಿಡಿದು ಇದನ್ನು ಮಾಡಬೇಕೆಂದು ಹೇಳಿದರು. ಅವತ್ತು ಈ ಸದನ ನಿರ್ಧಾರವನ್ನು ತೆಗೆದುಕೊಳ್ಳದೆ ಇದ್ದದ್ದು ತಪ್ಪಾಗಿದೆ. ಇವತ್ತು ಮಾನ್ಯ ಸಿದ್ದರಾಮಯ್ಯನವರಿಗೆ ಆಗಿದೆ, ಅವತ್ತು ನನಗೆ ಆಗಿತ್ತು. ನಾನು ಇದನ್ನು ಏಕೆ ಹೇಳಿದ್ದನೆಂದರೆ ಅಧಿಕಾರಿಗಳ ವರ್ತನೆ ಅವತ್ತು ನನಗಾಗಿತ್ತು. ಇವತ್ತು ಮಾನ್ಯ ಸಿದ್ಧರಾಮಯ್ಯನವರಿಗೆ ಆಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಚರ್ಚೆಯನ್ನು ಲಂಬಿಸದೇ, ಈಗಾಗಲೇ ಮಾನ್ಯ ಸಿದ್ಧರಾಮಯ್ಯನವರು ಬಹಳ ಸವಿಸ್ತಾರವಾಗಿ, ಆ ಘಟನೆಯ ಬಗ್ಗೆ, ಹೇಗೆ ನಡೆಯಿತು? ಏನು ನಡೆಯಿತು? ಎನ್ನುವ ಬಗ್ಗೆ ವಿವರವಾಗಿ ಹೇಳಿದ್ದಾರೆ. ವಿರೋಧಪಕ್ಷದ ನಾಯಕರು ಕೂಡ ಅದನ್ನು ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ನಡೆದಂಥ ಘಟನೆ ಕೇವಲ ಮಾನ್ಯ ಸಿದ್ದರಾಮಯ್ಯನವರಿಗೆ ಸೀಮಿತವಾದ ಘಟನೆಯಲ್ಲ. ಈಗಾಗಲೇ ಮಾನ್ಯ ಜೀವರಾಜ್ ರವರು ಹೇಳಿದರು. ಈ ಸದನದಲ್ಲಿ ಪದೇ ಪದೇ ಉದ್ಘಾಟನಾ ಸಮಾರಂಭದಲ್ಲಿ ಆಗಲಿ, ಅಥವಾ ಯಾವುದಾದರೂ ಕಾರ್ಯಕ್ರಮವನ್ನು ಪ್ರಾರಂಭ ಮಾಡುವ ಸಮಯದಲ್ಲಿಯಾಗಲಿ, ಇಂಥ ವಿಷಯಗಳು ಈ ಸದನದ ಮುಂದೆ ಬರುತ್ತಾ ಇವೆ. ಆದರೆ ಇಲ್ಲಿ ವಿಶೇಷವಾಗಿ ಯಾರು ಒಂದು ಸಮಾರಂಭಕ್ಕೆ ಹೋಗಿ, ಅಲ್ಲಿ ಉದ್ಘಾಟನೆಯನ್ನು ಮಾಡಬೇಕೆನ್ನುವಂಥಾದ್ದು ಜಿಲ್ಲಾ ಪಂಚಾಯತ್ ನವರ ವಿನಂತಿ ಮೇರೆಗೆ, ಅಲ್ಲಿರುವಂತಹ ಮುಖಂಡರ ಅಭಿಪ್ರಾಯದ ಮೇರೆಗೆ, ಹೋದಾಗ, ಇಲ್ಲಿಗೆ ಹೋದಂಥ ಸಾರ್ವಜನಿಕ ಪ್ರತಿನಿಧಿಗೆ ಅಲ್ಲಿ ಮನ್ನಣೆ ಕೊಡಬೇಕು. ರಕ್ಷಣೆ ಕೊಡಬೇಕು, ಅಥವಾ ಯಾರು protest ಮಾಡುತ್ತಾರೆ, ಅಥವಾ ೧೦, ೨೦ ಜನ, ಇದು ಸಹಜವಾಗಿ ಅನೇಕ ಕಡೆಗಳಲ್ಲಿ ಆಗುತ್ತದೆ. ಮುಖ್ಯಮಂತ್ರಿಗಳು ಹೋದರೂ ಕೂಡ ಅನೇಕ ಕಡೆ protest ಮಾಡುತ್ತಾರೆ, Home Minister ಹೋದರೂ ಮಾಡುತ್ತಾರೆ, ನಾವು ಹೋದರೂ ಮಾಡುತ್ತಾರೆ. ಇನ್ನು ಯಾರು ಹೋದರೂ ಮಾಡುತ್ತಾರೆ. ಆಗ ಏನು ಮಾಡುತ್ತೀರಿ, ಅನೇಕ ಸಾರಿ ಯಾರು

protest ಮಾಡುತ್ತಾರೋ, ಅವರನ್ನು arrest ಮಾಡಿಕೊಂಡು van ನಲ್ಲಿ ಹಾಕಿಕೊಂಡು ದೂರ ಕರೆದುಕೊಂಡು ಹೋಗಿ ಬಿಟ್ಟು, ಪುನಃ function ನಡೆಸಿಕೊಡುವಂಥ ಪ್ರಯತ್ನ ಆಗುತ್ತದೆ. ಆದರೆ ಇಲ್ಲಿ ಆ ರೀತಿ ಏನು ಆಗಲಿಲ್ಲ. ಇಲ್ಲಿ ನೇರವಾಗಿ ಕುಮ್ಮಕ್ಕು ಕೊಟ್ಟಿರುವಂಥಾದ್ದು ಎಂದ ಕೂಡಲೇ ಸಚಿವರಿಗೆ ಬಹಳ ಸಿಟ್ಟು ಬಂತು. ಯಾವ ದೃಷ್ಟಿಯಿಂದ ಕುಮ್ಮಕ್ಕು ಎಂದು ಹೇಳಿದರು? ಒಬ್ಬ ಪೊಲೀಸ್ ಅಧಿಕಾರಿ, ಅವನೇ ಎದುರು ನಿಂತು ನೀವು ಗಲಾಟೆ ಮಾಡಿ, ನೀವು prevent ಮಾಡಿ, ಧರಣಾ ಮಾಡಿ ಎಂದು ಹೇಳಿ, ಪ್ರಚೋದನೆ ಮಾಡಬೇಕಾದರೆ, ಇದಕ್ಕೆ ಯಾರದಾದರೂ ಕುಮ್ಮಕ್ಕು ಇಲ್ಲದೇ, ಅಥವಾ ಅವನಿಗೆ support ಇಲ್ಲದೇ, ಆ ಅಧಿಕಾರಿ ಆ ರೀತಿಯಾಗಿ ಹೇಳುವಂಥಾದ್ದು ಆಗಲಿ, ವರ್ತನೆ ಮಾಡುವಂಥಾದಕ್ಕೆ ಸಾಧ್ಯವಿಲ್ಲ. ಅದು ಯಾರೋ ಹೇಳಿರಬಹುದು. X,Y,Z, ಎಂದು ನಾನು ಹೇಳುವುದಿಲ್ಲ. ಆದರೆ ತಾವು ಯಾವ ಅಧಿಕಾರಿ ಆ ರೀತಿಯಾಗಿ ವರ್ತನೆ ಮಾಡಿದ್ದಾನೊ, ಅವರ ವಿರುದ್ಧ ತಕ್ಷಣ ಕ್ರಮ ಜರುಗಿಸಬೇಕು. ಅವನನ್ನು ತಕ್ಷಣ suspend ಮಾಡಬೇಕು. ಎಸ್. ಪಿ. ಯವರನ್ನು suspend ಮಾಡಬೇಕು, ಏಕೆಂದರೆ ಈ ರೀತಿಯಾಗಿ ಸೆಕ್ಷನ್ ೧೪೪ ಇಲ್ಲವೆಂದು ಒಂದು ಕಡೆ ಹೇಳುತ್ತಾರೆ, ಒಂದು ಕಡೆ ಸೆಕ್ಷನ್ ೧೪೪ impose ಮಾಡಿದ್ದೇವೆಂದು ಇನ್ನೊಂದು ಕಡೆ ಹೇಳುತ್ತಾರೆ. ನಾನು ಈಗಾಗಲೇ ಹೇಳಿದ್ದೇನೆ. ಇದು ಮಾನ್ಯ ಸಿದ್ಧರಾಮಯ್ಯನವರ ಬಂಧನವೆಂದು ಪೇಪರ್‌ಗಳಲ್ಲಿ ಬಂದಿದೆ, ತಾವು ಪ್ರಜಾವಾಣಿಯಲ್ಲಿ ನೋಡಿರಬಹುದು. ಈಗ ಬಂಧನವಿಲ್ಲದೇ, DAR Van ನಲ್ಲಿ ಹಾಕಿಕೊಂಡು ಹೋಗುತ್ತಾರೆ? ಇಲ್ಲ, ಅವರಿಗೆ protection ಬೇಕೆಂದು ಇದ್ದರೆ, ನಿಮ್ಮ ಜೀಪ್ ಇತ್ತು, ಕರೆದುಕೊಂಡು ಹೋಗಬಹುದಾಗಿತ್ತು. SP ಯವರು ಇದ್ದರು, Commissioner ಇದ್ದರು. Commissioner ನವರ jurisdiction ಗೆ ಬರುವುದಿಲ್ಲ. SPಯವರಿಗೆ ಬರುತ್ತಾ ಇತ್ತು. Dy. S.P. ಗೆ ಬರುತ್ತಿತ್ತು. " ಅಲ್ಲಿ ಬಹಳ ತೊಂದರೆಯಿದೆ, ನಿಮ್ಮ ರಕ್ಷಣೆಗಾಗಿ ನಾವು ಬಂದಿದ್ದೇವೆ, ದಯವಿಟ್ಟು ನಮ್ಮ ಜೊತೆಯಲ್ಲಿ ಬನ್ನಿ" ಎಂದು ಅವರು ಸಿದ್ದರಾಮಯ್ಯನವರನ್ನು ಜೀಪ್‌ನಲ್ಲಿ ಕರೆದುಕೊಂಡು ಹೋಗಬಹುದಾಗಿತ್ತು ಅಥವಾ ಕಾರಿನಲ್ಲಿ ಕರೆದುಕೊಂಡು ಹೋಗಬಹುದಾಗಿತ್ತು. ಅದನ್ನು ಬಿಟ್ಟು D.A.R. Van ನಲ್ಲಿ ಕರೆದುಕೊಂಡು ಹೋಗುತ್ತಾರೆ ಎಂದರೆ, ಅದನ್ನು arrest ಎಂದು ಕರೆಯುತ್ತೀರೋ ಅಥವಾ ಬೇರೆ ಏನು ಎನ್ನುವುದನ್ನು ಹೇಳಬೇಕು. ಅದಕ್ಕಾಗಿ ಹೇಳುತ್ತಿದ್ದೇವೆ, ನೀವು ಅದನ್ನು defend ಮಾಡಲು ಹೋಗಬೇಡಿ. ಅವರು ತಪ್ಪು ಮಾಡಿದ್ದರೆ ತಕ್ಷಣ

ಶಿಕ್ಷೆ ಕೊಡತಕ್ಕಂಥಾದ್ದನ್ನು ಮಾಡಬೇಕು, ಅವರ ಮೇಲೆ action ತೆಗೆದು ಕೊಳ್ಳಬೇಕು. ಅದು S.P. ಇರಬಹುದು ಅಥವಾ ಬೇರೆಯವರಿರಬಹುದು. ಆ ರೀತಿಯಾದರೆ, ಇನ್ನು ಮುಂದೆ ಇಂಥ ಘಟನೆಗಳು ನಡೆಯುವುದಿಲ್ಲ. ಇದೇ ರೀತಿಯಾಗಿ ನಾವು ಬಿಡುತ್ತಾ ಹೋದರೆ ಮುಂದೆ ಏನಾಗುತ್ತದೆ ಎಂದರೆ, ಇನ್ನೊಂದು ಕಡೆ ಇನ್ನೊಬ್ಬರು prevent ಮಾಡುತ್ತಾರೆ. Genuine ಆಗಿರುವ ಒಂದು function ನಡೆಯುತ್ತಿದ್ದರೆ, ಅಲ್ಲಿಗೆ ಬೇರೆಯವರು ಬಂದರೂ ಕೂಡ ಅಡ್ಡಿಪಡಿಸಬಹುದು. ಅವರು ಅಡ್ಡಿ ಪಡಿಸುತ್ತಾರೆ ಎಂದು ಹೇಳಿ function ಗಳನ್ನು cancel ಮಾಡುವುದು, ಕುಡಿಯುವ ನೀರಿನ ವ್ಯವಸ್ಥೆಯ ಕಾರ್ಯಕ್ರಮಗಳಿಗೂ ಹೋಗುವ ಹಾಗಿಲ್ಲ, ಒಂದು Community Hall ಉದ್ಘಾಟನೆ ಮಾಡಲು ಹೋಗುವ ಹಾಗಿಲ್ಲ. Primary Health Centre ಉದ್ಘಾಟನೆ ಮಾಡಲು ಹೋಗುವ ಹಾಗಿಲ್ಲ ಎಂದಾದರೆ ಶಾಸಕರು ಏನು ಮಾಡಬೇಕು? ಅವರು ಮನೆಯಲ್ಲಿ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಅಥವಾ ಆ ಕ್ಷೇತ್ರದ ಜನರು ಬಂದು ನಮ್ಮ ಸಮಸ್ಯೆಗಳಿಗೆ ನೀವು ಸ್ಪಂದಿಸಿ ಎಂದು ಕೇಳಿಕೊಂಡರೆ ಅಲ್ಲಿಗೆ ಹೋಗದೇ ಇರುವುದಕ್ಕಾಗುತ್ತದೆಯೇ? ಅದಕ್ಕಾಗಿ, ನಾನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುವುದೇನೆಂದರೆ, ಈಗ ಇಲ್ಲಿ ಮುಖ್ಯಮಂತ್ರಿಗಳಿದ್ದಾರೆ, Home Minister ಇದ್ದಾರೆ, ಅವರು ತಕ್ಷಣ ಆ ಅಧಿಕಾರಿಗಳ ಮೇಲೆ ಕ್ರಮವನ್ನು ಜರುಗಿಸಬೇಕು. ಒಬ್ಬ ಶಾಸಕರನ್ನು arrest ಮಾಡಬೇಕಾದರೆ ತಮಗೆ immediate ಆಗಿ information ಕೊಡಬೇಕು. ಘಟನೆ ನಡೆದಂಥ ಸಂದರ್ಭದಲ್ಲಿ Deputy Commissionerರವರೂ ಅಲ್ಲೇ ಇದ್ದರು. Deputy Commissioner ರವರು Sec. ೧೪೪ ಜಾರಿ ಮಾಡಿ ಎಂದು Order ಕೊಟ್ಟರೇ? Assistant Commissioner ರವರೂ ಕೂಡ ಜಿಲ್ಲಾಧಿಕಾರಿಗಳನ್ನು ಕೇಳದೇ ಅದನ್ನು impose ಮಾಡುವುದಿಲ್ಲ. ಜಿಲ್ಲಾಧಿಕಾರಿಗಳು ಏನು ಹೇಳಿದರು, Assistant Commissioner ಏನು ಮಾಡಿದರು? ಒಂದು ಕಡೆ impose ಮಾಡಿದ್ದೆವು ಎಂದು ಹೇಳುತ್ತೀರಿ. ಇನ್ನೊಂದು ಕಡೆ Section ೧೪೪ ಜಾರಿಯಲ್ಲಿರಲಿಲ್ಲ, ನೀವು ಹೋಗಬಹುದು ಎಂದು ಹೇಳಿದೆವು ಎಂದು ಹೇಳುತ್ತೀರಿ. ಹೋಗಬಹುದು ಎಂದು ಹೇಳಿದ ನಂತರ Van ನಲ್ಲಿ ಕರೆದುಕೊಂಡು ಹೋಗತಕ್ಕಂಥಾದ್ದು ಏಕೆ ಬೇಕಾಗಿತ್ತು ? ಅಥವಾ D.A.R. Officeಗೆ ಕರೆದುಕೊಂಡು ಹೋಗತಕ್ಕಂಥಾದ್ದು ಏಕೆ ಬೇಕಾಗಿತ್ತು ? ಅಥವಾ ಕಲ್ಯಾಣ ಮಂಟಪಕ್ಕೆ ಒಯ್ದು ಬಿಡತಕ್ಕಂಥ ಅವಶ್ಯಕತೆ ಏತಿತ್ತು? ಅದೇನೂ ಇಲ್ಲವೆಂದರೆ,

ನೀವು ಅವರನ್ನು ನೇರವಾಗಿ ಕಾರಿನಲ್ಲಿ ಕರೆದುಕೊಂಡು ಹೋಗಿ, " Sorry Sir, ಈ ರೀತಿಯ ಘಟನೆ ನಡೆದಿದೆ, ಅದಕ್ಕಾಗಿ ನಾವು ವಿಷಾದಿಸುತ್ತೇವೆ, ಇಂಥಾದ್ದು ನಡೆಯಬಾರದಿತ್ತು ಆದರೆ ನಡೆದು ಹೋಗಿದೆ" ಎಂಬ ಮಾತನ್ನಾದರೂ ಹೇಳಬಹುದಾಗಿತ್ತು. ಆದರೆ ಅದ್ಯಾವುದೂ ಆಗಲಿಲ್ಲ. ಅದಕ್ಕಾಗಿ ಹೇಳುತ್ತಿದ್ದೇವೆ, ಇದರ ಹಿಂದೆ ಯಾರದ್ದಾದರೂ ಕುಮ್ಮಕ್ಕು ಇರಬೇಕು ಅಥವಾ ಅವರು ತಮ್ಮ ವಿವೇಚನೆಯಲ್ಲೆ ಈ ಕೆಲಸವನ್ನು ಮಾಡಿದ್ದಾರೆ ಎನ್ನುವುದಾಗಿದ್ದರೆ, ಅವರ ಮೇಲೆ ನೀವು action ತೆಗೆದುಕೊಳ್ಳಬೇಕು. ಇಷ್ಟನ್ನು ಮಾತ್ರ ನಾನು ಹೇಳುತ್ತೇನೆ. ಇದು ಆಗದಿದ್ದರೆ ಮುಂದೆ ಇದು ಎಲ್ಲ ಕಡೆ ಬೆಳೆದುಕೊಂಡು ಹೋಗುತ್ತದೆ. ಪುನಃ ಪುನಃ ನಾವು ಸದನದಲ್ಲಿ ಇಂಥ ವಿಷಯಗಳನ್ನು ಪ್ರಸ್ತಾಪ ಮಾಡುವಂಥಾದ್ದು ಆಗಬಾರದು. ಇದಕ್ಕೆ ಒಂದು ಕೊನೆ ಹಾಕಬೇಕು. ಅದಕ್ಕಾಗಿ, ದಯವಿಟ್ಟು ತಾವು ಅವರಿಗೆ ಹೇಳಿ ಈ ಕೆಲಸವನ್ನು ಮಾಡಿಸಬೇಕು ಎಂದು ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ. ಇದು ಅವರ ಹಕ್ಕು. ಕೇವಲ ಅವರ ಹಕ್ಕು ಮಾತ್ರವಲ್ಲ. ಈ ಸದನದಲ್ಲಿ ಇರತಕ್ಕಂಥ ಎಲ್ಲ ಸದಸ್ಯರ ಹಕ್ಕು. ಇವತ್ತು ಅವರಿಗಾಗಿದೆ, ನಾಳೆ ನನಗಾಗಬಹುದು, ನಾಡಿದ್ದು ಇನ್ನೊಬ್ಬರಿಗೆ ಆಗಬಹುದು. ಇಲ್ಲಿನ ಸದಸ್ಯರ ಹಕ್ಕನ್ನು ರಕ್ಷಣೆ ಮಾಡತಕ್ಕಂಥಾದ್ದು ತಮ್ಮ ಕೈಯ್ಯಲ್ಲಿದೆ. ಎಲ್ಲ ಕಡೆ ನಮ್ಮ ಕಾರ್ಯಕರ್ತರಿಗೆ ನಾವು ಹೇಳಿದ್ದೇವೆ, ಧರಣಿ ಮಾಡತಕ್ಕಂಥಾದ್ದು ಬೇಡ, ಸೋಮವಾರದ ದಿವಸ P.U.C. ವಿದ್ಯಾರ್ಥಿಗಳು examination ಗೆ ಹೋಗುತ್ತಿದ್ದಾರೆ, ಅದಕ್ಕೆ ನಮ್ಮಿಂದ ಅಡ್ಡಿಯಾಯಿತು, ತೊಂದರೆಯಾಯಿತು ಎನ್ನುವ ಮಾತು ಬರಬಾರದು, ಅದಕ್ಕಾಗಿ ದಯವಿಟ್ಟು ಧರಣಿಯನ್ನು ನಿಲ್ಲಿಸಿ ಎಂದು ನಾವು ಅಲ್ಲಿಗೆ ಹೋಗಿ ನಮ್ಮ ಕಾರ್ಯಕರ್ತರಿಗೂ ಕೇಳಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಶಾಂತಿಯ ವಾತಾವರಣವಿರಲು ಸಹಕರಿಸಿ ಎಂದು ಪೋಲೀಸರೂ ಕೂಡ ನಮ್ಮನ್ನು ಕೇಳಿಕೊಂಡಾಗ, ಎಲ್ಲೂ ಕೂಡ ಧರಣಿ ಮಾಡತಕ್ಕಂಥಾದ್ದು ಬೇಡ ಎಂದು ನಾವು ಎಲ್ಲರಿಗೂ ಹೇಳಿ, ಆದಷ್ಟು ಶಾಂತ ರೀತಿಯಿಂದ ನಡೆದುಕೊಳ್ಳತಕ್ಕಂಥಾದ್ದು ಆಗಿದೆ. ಎಲ್ಲೋ ಒಂದೆರಡು ಕಡೆ ಸಣ್ಣಪುಟ್ಟ ಘಟನೆಗಳು ಆಗಿರಬಹುದು. ಸಿದ್ದರಾಮಯ್ಯನವರನ್ನು arrest ಮಾಡಿದ್ದಾರೆ. ಎಂದ ತಕ್ಷಣ ಅಂಥ ಘಟನೆಗಳು ಸಹಜವಾಗಿ ಆಗುತ್ತವೆ, spark ಆಗುತ್ತದೆ, ಕಾರಣವನ್ನು ಯಾರೂ ಕೇಳುವುದಿಲ್ಲ. ಬಂಧನ ಆಗಿದೆ ಎಂದ ತಕ್ಷಣ ಅಂಥವು ಆಗುತ್ತವೆ. ಆದರೆ, ಅದನ್ನು ವಿವೇಚನೆಯಿಲ್ಲದೇ ಮಾಡಿರತಕ್ಕಂಥವರು ಯಾರು ಎನ್ನುವುದನ್ನು

ನೋಡಬೇಕು. ಎಲ್ಲಕ್ಕಿಂತಲೂ ಮುಖ್ಯ ಎಂದರೆ ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡತಕ್ಕಂಥಾದ್ದು, ನಮ್ಮ ಮಾನ ಕಾಪಾಡತಕ್ಕಂಥಾದ್ದು ತಮ್ಮ ಕೈಯ್ಯಲ್ಲಿದೆ. ಇವತ್ತು ಏನೇ ತೊಂದರೆಯಾದರೂ ಕೂಡ ತಾವು ನಮ್ಮ ರಕ್ಷಣೆಗೆ ಬರಬೇಕು. ಸರ್ಕಾರಕ್ಕೆ ಹೇಳಬೇಕು. ಇದನ್ನು ನಾವು ಇಲ್ಲಿ ಕೇಳುವುದಕ್ಕಾಗುವುದಿಲ್ಲ ಎಂದರೆ ಎಲ್ಲಿ ಕೇಳುವುದಕ್ಕಾಗುತ್ತದೆ? ಹೊರಗಡೆ ಹೋಗಿ ಕೇಳುವುದಕ್ಕಾಗುತ್ತದೆಯೇ? This House is supreme. ಅದಕ್ಕಾಗಿಯೇ ಇಂಥವುಗಳನ್ನು ಮೊದಲಿಗೆ ನಿಮಗೆ inform ಮಾಡುವುದು. ಅವರು ಯಾವುದೋ ಕೆಟ್ಟ ಕೆಲಸ ಮಾಡಿದ್ದಾರೆ ಅಥವಾ ಡಕಾಯಿತಿಯಲ್ಲಿ ಅಥವಾ ಮರ್ಡರ್ ನಲ್ಲಿ involve ಆಗಿದ್ದಾರೆ, ಅದಕ್ಕಾಗಿ arrest ಮಾಡಿದ್ದೇವೆ ಎಂದು ತಮಗೇನೂ information ಕೊಟ್ಟಿಲ್ಲ. ಅದಕ್ಕಾಗಿ ದಯವಿಟ್ಟು, ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು, ತಾವೂ ಕೂಡ ಸ್ವಲ್ಪ recollect ಮಾಡಿ. ಮಾನವೀಯತೆಯಿಂದ ಯಾವರೀತಿಯಾಗಿ ನಡೆದುಕೊಳ್ಳಬೇಕು, ಅಧಿಕಾರಿಗಳು ಹೇಗೆ minimum courtesy ಇಟ್ಟುಕೊಳ್ಳಬೇಕು ಎಂದು ಹೇಳಬೇಕು. ಸರ್ಕಾರಗಳು ಬರುತ್ತವೆ, ಹೋಗುತ್ತವೆ, ಅದು ಮಹತ್ವವಲ್ಲ. ನಾವು ಎಂದೂ ಕೂಡ ಯಾರ ಜೊತೆಯಲ್ಲೂ ಈ ರೀತಿಯಾಗಿ ನಡೆದುಕೊಂಡಿಲ್ಲ. ನಾವೂ ಕೂಡ ೨೦-೨೨ ವರ್ಷ ಮಂತ್ರಿಗಳಾಗಿ ಕೆಲಸ ಮಾಡಿದ್ದೇವೆ, ೧೦-೧೫ ವರ್ಷ ವಿರೋಧ ಪಕ್ಷದಲ್ಲಿ ಕೂಡ ಕುಳಿತಿದ್ದೇವೆ. Personally, with vengeance ನಾವು ಎಂದೂ act ಮಾಡಿಲ್ಲ. ನನ್ನ ಒಂದೇ ಮತಕ್ಷೇತ್ರದಲ್ಲಿ ನಾವು ಇಬ್ಬಿಬ್ಬರು M.L.A ಗಳು, ಇಬ್ಬಿಬ್ಬರು ಮಂತ್ರಿಗಳು ಇದ್ದೆವು. ತಮಗೆ ಗೊತ್ತಿದೆ, ವಿಶ್ವನಾಥ ರೆಡ್ಡಿಯಂಥವರೂ ನಮ್ಮ ಕ್ಷೇತ್ರದ ಅರ್ಧ ಭಾಗಕ್ಕೆ M.L.A ಆಗಿದ್ದರೆ, ನಾನು ಅರ್ಧ ಭಾಗಕ್ಕೆ M.L.A. ಈಗಲೂ ಕೂಡ ಡಾ॥ ಮಲಕರೆಡ್ಡಿ ಯವರು ಅರ್ಧ ಭಾಗಕ್ಕೆ M.L.A., ನಾನು ಅರ್ಧ ಭಾಗಕ್ಕೆ M.L.A. ಆದರೆ ಸರ್ಕಾರಿ ಕಾರ್ಯಕ್ರಮಗಳಲ್ಲಿ ನಾವು ಹೊಂದಾಣಿಕೆಯಿಂದ ಹೋಗಬೇಕಾಗುತ್ತದೆ ಮತ್ತು give and take policy ಇರಬೇಕಾಗುತ್ತದೆ. ಅದನ್ನು ಬಿಟ್ಟು, with vengeance, ಚುನಾವಣೆಯನ್ನು ತಲೆಯಲ್ಲಿಟ್ಟುಕೊಂಡು, ಕಾರ್ಯಕರ್ತರನ್ನು ಒಯ್ದು ಪೊಲೀಸರ ವ್ಯಾನಿನಲ್ಲಿ ಹಾಕುವುದು, ಗೂಂಡಾ ಕಾಯಿದೆಯಡಿಯಲ್ಲಿ arrest ಮಾಡುತ್ತೇವೆ ಎಂದು ಹೇಳುವುದು ಅಥವಾ Police Station ನಲ್ಲಿರತಕ್ಕಂಥ ರೌಡಿ ಲಿಸ್ಟ್ ನಲ್ಲಿ ಸೇರಿಸಿ ನಿಮ್ಮ ಫೋಟೋಗಳನ್ನು ಇರುತ್ತೇವೆ ಎಂದರೆ ಏನಾಗುತ್ತದೆ? ಕಾರ್ಯಕರ್ತರನ್ನು ಹೆದರಿಸಿ ಅವರ ಮನೋಬಲವನ್ನು ಕುಗ್ಗಿಸತಕ್ಕಂಥಾದ್ದು, ಅವರ ಧೈರ್ಯವನ್ನು

ಕುಗ್ಗಿಸತಕ್ಕಂಥ ಕೆಲಸವನ್ನು ಮಾಡಿದರೆ ಅದು ಅನ್ಯಾಯದ ಪರಮಾವಧಿಯಾಗುತ್ತದೆ.

ಶ್ರೀ ಡಿ.ಎನ್. ಜೀವರಾಜ್ : ಖರ್ಗೆ ಸಾಹೇಬರೇ ನನ್ನ ಕೇಸಿನಲ್ಲಿ ಏಕೆ ಹೀಗಾಗಲಿಲ್ಲ? ಆಗ ನೀವು ಧರಂಸಿಂಗ್ ಸಾಹೇಬರೇ ಈ ಕಡೆ ಕುಳಿತಿದ್ದುದ್ದು. ನಾನು ಅದನ್ನೇ ಹೇಳಿದ್ದು. ಅವತ್ತೇ ಕ್ರಮ ತೆಗೆದುಕೊಂಡಿದ್ದರೆ, ಇವತ್ತು ಈ ರೀತಿಯಾಗುತ್ತಿರಲಿಲ್ಲವೆಂದು ಹೇಳಿದ್ದು. ಅವತ್ತು ಧರಂಸಿಂಗ್ ಸಾಹೇಬರೇ ಮುಖ್ಯಮಂತ್ರಿಗಳಾಗಿದ್ದರಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಬೇರೆ ಕಾರಣಕ್ಕೆ, ನೀವು ೧೧ ದಿವಸ ಹೋಗಿದ್ದಿರಿ. ಇದು ಬೇರೆ ಕಾರಣ. ಅದು ಇರಲಿ ಬಿಡಿ. ಅದನ್ನು ಕೇಳುವಾಗ ನೀವು ಕೇಳಿದ್ದರೆ ಅದು ಆಗಿ ಹೋಗುತ್ತಿತ್ತು, ಕಾರ್ಯಕರ್ತರ ಮನೋಬಲವನ್ನು ಕುಗ್ಗಿಸತಕ್ಕಂಥ, ಅವರ ಹಿಂಬಾಲಕರ, supporter ಗಳ ಧೈರ್ಯವನ್ನು ಕುಗ್ಗಿಸತಕ್ಕಂಥಾದ್ದು ಆಗಬಾರದು. ಇದು ಒಂದು Privilege ಆಗುತ್ತದೆ. ಇದು ಎಲ್ಲಿ Privilege ಗೆ ಬರುತ್ತದೆ ಎಂದು ನೀವು ಕಾನೂನು ಪ್ರಕಾರ ಹೇಳಬಹುದು. ಅದರ ಬಗ್ಗೆ ಈಗಾಗಲೇ ಧರಂಸಿಂಗ್ ರವರು ಚೆನ್ನಾಗಿ ಹೇಳಿದರು. ಕೌಲ್ ಅಂಡ್ ಶಕ್ದರ್, ರೂಲ್ಸ್ ಬುಕ್ ಗಳನ್ನು ಸ್ವಲ್ಪ ಪಕ್ಕದಲ್ಲಿಡಿ. ಮಾನವೀಯತೆಯ ದೃಷ್ಟಿಯಿಂದ ಮತ್ತು ನಮ್ಮೆಲ್ಲರ ಹಕ್ಕನ್ನು ರಕ್ಷಣೆ ಮಾಡಬೇಕು ಎನ್ನುವ ದೃಷ್ಟಿಯಿಂದ ತಾವು act ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಗರಾಜ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಬಂದಿರತಕ್ಕಂಥ ವಿಚಾರವೆಂದರೆ, ಮುಂಜಾಗ್ರತಾ ಕ್ರಮವಾಗಿ ಯಾರನ್ನು ಬಂಧನ ಮಾಡಬೇಕಾಗಿತ್ತು ಎನ್ನುವುದು. ಆ ಕ್ಷೇತ್ರದ ಶಾಸಕರು ಸಮಾರಂಭಕ್ಕೆ ಹೋದಾಗ, ಯಾರು ಅದಕ್ಕೆ ಅಡ್ಡಿಪಡಿಸಲಿಕ್ಕೆ ಬಂದರೋ ಅವರನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಬೇಕೇ ಹೊರತು, ಯಾರು ಕಾನೂನುಬದ್ಧವಾಗಿ, ಸಂವಿಧಾನಬದ್ಧವಾಗಿ ಸಮಾರಂಭಕ್ಕೆ ಹೋದರೋ ಅವರನ್ನು ಬಂಧಿಸಿರತಕ್ಕಂಥಾದ್ದು ಸರಿಯಾದ ಕ್ರಮವಲ್ಲ. ಅನೇಕ ಸಾರಿ ನಮ್ಮನ್ನೂ ಬಂಧಿಸಿದ್ದಾರೆ. ಜೀವರಾಜ್‌ರವರ ಪ್ರಕರಣದ ಬಗ್ಗೆ ನಿಜವಾಗಿಯೂ ನೋವಾಗುತ್ತದೆ. ಅವತ್ತು ನಾವೆಲ್ಲ ಬೆಂಬಲ ಕೊಟ್ಟೆವು. ಈ ಪೊಲೀಸ್ ಅಧಿಕಾರಿಗಳು ಸರ್ಕಾರವನ್ನು ಮೆಚ್ಚಿಸುವುದಕ್ಕೋ ಅಥವಾ ಯಾರನ್ನು ಮೆಚ್ಚಿಸುವುದಕ್ಕೋ ಹೀಗೆ ನಡೆದುಕೊಳ್ಳುತ್ತಾರೆ. ನಿನ್ನೆ ನಡೆದಿರತಕ್ಕಂಥ ಘಟನೆಯಲ್ಲಿ Dy. S.P. ಮತ್ತು S.P.

ಅಕ್ಷಮ್ಯ ಅಪರಾಧವನ್ನು ಮಾಡಿದ್ದಾರೆ. ಪ್ರಕಾಶ್ ರವರು ಉತ್ತರ ಕೊಡುವಾಗ ಏನು ಬೇಕಾದರೂ ಹೇಳಲಿ. ಪಕ್ಷಾತೀತವಾಗಿ ಇದು ಎಲ್ಲ ಶಾಸಕರಿಗೂ ಅನ್ವಯಿಸತಕ್ಕಂಥಾದ್ದು. ಇತ್ತೀಚಿನ ದಿನಗಳಲ್ಲಿ ಒಂದು ಸಮಾರಂಭ ಮಾಡಿದರೆ ೩೦ ಜನರನ್ನು ಕರೆಯಬೇಕು. ಗ್ರಾಮ ಪಂಚಾಯಿತಿಯಿಂದ ಹಿಡಿದು ಮೇಲಿನವರವರೆಗೆ ಎಲ್ಲರನ್ನೂ ಕರೆಯಬೇಕು. ಅದಕ್ಕಾಗಿ, ಅವರೇನು ಮಾಡುತ್ತಾರೆ ಎಂದರೆ, ಆಹ್ವಾನ ಪತ್ರಿಕೆಯನ್ನು ಮುದ್ರಣ ಮಾಡುವುದರ ಬದಲು ಎಲ್ಲರನ್ನೂ ಮಾತಿನಲ್ಲೇ ಆಹ್ವಾನಿಸುತ್ತಾರೆ. ಈಗ ಇಂಥ ಪರಿಸ್ಥಿತಿ ಉದ್ಭವವಾಗಿತ್ತು, ಯಾರು ಶಾಸಕರಿರುತ್ತಾರೆ, ಅವರಿಗೆ ರಕ್ಷಣೆ ಕೊಡಬೇಕಾದುದು ಅವರ ಕರ್ತವ್ಯ. ಅವರು ಯಾವುದೇ ಪಕ್ಷದ ಶಾಸಕರಿರಲಿ. ಆದರೆ ಸಿದ್ದರಾಮಯ್ಯನವರ ಪ್ರಕರಣದಲ್ಲಿ ಅಧಿಕಾರಿಗಳು ತೀವ್ರವಾಗಿ ನಡೆದುಕೊಂಡಿದ್ದಾರೆ. ನಾನು ನಿನ್ನೆ ಕಬಿನಿ ಜಿಲ್ಲೆಗೆ ಹೋಗಿದ್ದೆ. ಹಾಗೆ ಹೋಗುವಾಗ ಜಯಪುರದ ಮೇಲೆಯೇ ಹೋದೆ. ಆಗ ಅಲ್ಲಿ ಭಾರೀ ಪೊಲೀಸರಿದ್ದರು. ಏಕೆ ಈ ಊರಿನಲ್ಲಿ ಇಷ್ಟೊಂದು ಪೊಲೀಸರನ್ನು ಹಾಕಿದ್ದಾರೆ ಎಂದು ನನಗನ್ನಿಸಿತು. ಕೊನೆಗೆ ಕೇಳಿದಾಗ, ಸಿದ್ದರಾಮಯ್ಯನವರು ಒಂದು ಸಮಾರಂಭಕ್ಕೆ ಬರುತ್ತಾರೆ ಎಂದು ಹೇಳಿದರು. ಆದರೆ, ನಾನು ಕಬಿನಿಗೆ ಹೋಗಿ ಬರುವಷ್ಟರಲ್ಲಿ ಒಂದು ದೊಡ್ಡ ದಾಂಧಲೆಯಾಗಿತ್ತು. ನನಗನ್ನಿಸುತ್ತದೆ, ನಿಜವಾಗಿಯೂ ಅಲ್ಲಿ ಪೊಲೀಸರು ತೀವ್ರವಾದಂಥ, ಅಕ್ಷಮ್ಯವಾದಂಥ ಅಪರಾಧವನ್ನು ಮಾಡಿದ್ದಾರೆ. ಈ ಬಗ್ಗೆ ಈ ಸದಸ್ಯರಿಗೆ ರಕ್ಷಣೆ ಕೊಡಬೇಕಾದದ್ದು ವಿಧಾನಸಭಾ ಅಧ್ಯಕ್ಷರಾದ ತಮ್ಮ ಕರ್ತವ್ಯ ಶಾಸಕರಿಗೆ ರಕ್ಷಣೆ ಕೊಡಬೇಕಾದದ್ದು ಅಧ್ಯಕ್ಷರ ಕರ್ತವ್ಯ.

(ಗೊಂದಲ)

ಅಧ್ಯಕ್ಷರು : ಅವರು ಹೇಳಿದ ವಿಚಾರದ ಮೇಲೆ ಮತ್ತೆ ಮತ್ತೆ ಪ್ರಸ್ತಾಪ ಮಾಡಿದರೆ ಹೇಗೆ? ಈಗ ಸರ್ಕಾರ ಕಡೆಯಿಂದ ಉತ್ತರ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರದಲ್ಲಿ ೨ ನಿಮಿಷ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ತಾವು ಹಿರಿಯರು, ಗೃಹ ಸಚಿವರು ಆಗಿದ್ದಂಥವರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ದಯವಿಟ್ಟು ನನಗೆ ಎರಡು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ವಿವರವಾಗಿ ಎಲ್ಲ ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹಾಗಲ್ಲ, Former Home Minister ಎಂದೇನಿಲ್ಲ. ಒಬ್ಬ ಶಾಸಕನಾಗಿ ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸುವ ಂದರ್ಭದಲ್ಲಿ ನಾನು ಈ ವಿಚಾರದಲ್ಲಿ ೨ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಮಾನ್ಯ ಪ್ರಕಾಶ್‌ರವರು yield ಆಗಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಪುಸ್ತಕ ಹಿಡಿದುಕೊಳ್ಳಬೇಡಿ ಎಂದು ಹೇಳುತ್ತೀರಿ. ಒಂದು privilege ಗೆ ತಾವು ಅವಕಾಶ ಕೊಟ್ಟಿದ್ದೀರಿ. ಇನ್ನೂ ಇಬ್ಬರು ಮುವ್ವರು ಮಾತನಾಡಿದ್ದಾರೆ. ಎಲ್ಲರೂ ಮಾತನಾಡಬೇಕೆನ್ನುವುದಾದರೆ, ನಿಯಮಾವಳಿಗಳನ್ನು ನಾವ್ಯಾಕೆ ರಚನೆ ಮಾಡಿಕೊಳ್ಳಬೇಕು? ಅದರಲ್ಲಿ ಬೇರೆಯವರೆಲ್ಲ ಭಾಗವಹಿಸಲಿಕ್ಕೆ ಅವಕಾಶವಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಪ್ರಕಾಶ್‌ರವರು ಹೇಳಿರುವುದು ಸರಿಯಿದೆ. ಸದನದ ಸಮಯವನ್ನು ವ್ಯರ್ಥ ಮಾಡಬೇಕೆನ್ನುವ ಉದ್ದೇಶ ನನಗಂತೂ ಇಲ್ಲ. ಅಥವಾ ಈ ವಿಚಾರಗಳ, ಅನೇಕ ವಿಚಾರಗಳ ಬಗ್ಗೆ ನಾನು ಮಾತನಾಡುವುದಕ್ಕೆ ಬರುವುದಿಲ್ಲವೆಂತಲೂ ಅಲ್ಲ. ನಾವು ಶಾಸನ ಸಭೆಯಲ್ಲಿ ಇರುತ್ತೇವೆ. ಇದ್ದಂಥ ಸಂದರ್ಭದಲ್ಲಿ ಇಂಥ ಘಟನೆಗಳು ನಡೆದಾಗ ನಮ್ಮ ಅಭಿಪ್ರಾಯಗಳನ್ನು ಕೊಡಲಿಲ್ಲವೆಂದರೆ ನಾಳೆಯ ದಿನ ಈ ಶಾಸನ ಸಭೆಯ ಇತಿಹಾಸವನ್ನು ಓದುವ ಜನ ನಮ್ಮ ಮುಂದಿನ ಪೀಳಿಗೆಯವರು ನಮ್ಮ ಬಗ್ಗೆ ಏನು ಹೇಳಬಹದು? ಅದರಿಂದಾಗಿ, ಈ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. No. there is no question of senior, junior, here. All are equal. ನನಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ತುಂಬಾ ಧನ್ಯವಾದಗಳು. ೨ ವಿಚಾರಗಳನ್ನು ಮಾತ್ರ ನಾನು ಹೇಳಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ, ನನ್ನ ಅನುಭವದಲ್ಲಿ

ತುರ್ತು ಪರಿಸ್ಥಿತಿಯ ಕಾಲದಲ್ಲಿ ೨ ವರ್ಷಗಳ ಜೈಲುವಾಸ ಅನುಭವಿಸಿದ್ದೆ. ಪೋಲೀಸರ ದಬ್ಬಾಳಿಕೆಗೆ ಒಳಗಾಗಿದ್ದವನು. ಆದರೆ, ಯಾವುದೇ ಅಧಿಕಾರಿ, ಪೋಲೀಸ್ ಸಹ ಮೇಲ್ಗಡೆಯಿಂದ ಯಾರು ರಾಜಕೀಯ ಸೂತ್ರವನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡಿರುತ್ತಾರೆ. ಅವರ ಸೂಚನೆ ಇಲ್ಲದೆ ಮಾಡಲಿಕ್ಕೆ ಸಾಧ್ಯವಿಲ್ಲ. ಇದು ನನ್ನ ಅನುಭವದ ಮಾತು. ಆದರೆ, ಇದನ್ನು ಅಳವಡಿಸಬೇಕೆಂದು ನಾನು ಹೇಳುವುದಿಲ್ಲ. ಆದರೆ, ಈಗ ೩೧ನೇ ತಾರೀಖು ಮಧ್ಯಾಹ್ನ ಅಲ್ಲಿರುವ ಪೋಲೀಸ್ ಅಧಿಕಾರಿಗಳಿಗೆ. ನಮ್ಮ Police wing ಎಷ್ಟೊಂದು ವಿಸ್ತಾರವಾಗಿದೆ ಎಂದು ಹೇಳುವ ಅವಶ್ಯಕತೆ ಇಲ್ಲ. ಬಹುಶಃ ನಮ್ಮ ಎಲ್ಲ ಶಾಸಕರಿಗೂ ಗೊತ್ತಿದೆ. Intelligence wing ಇದೆ, ಅಲ್ಲಿ ಇರುವ S.P. ಗೆ ಒಂದು Special branch ಇರುತ್ತದೆ. Special Branch ನವರು Intelligence Wing ನವರು ಅದಲ್ಲದೆ ಅಲ್ಲಿರುವ regular law and order ಪೋಲೀಸ್ ನವರು ಇರುತ್ತಾರೆ. ಇವರೆಲ್ಲರೂ ಸಹ S.P. ಗೆ ಸಿದ್ದರಾಮಯ್ಯನವರು ಬಂದಾಗ ಈ ತರಹ ಗಲಾಟೆ ಆಗುತ್ತದೆ, ಒಂದು ಪಕ್ಷದ ಕಾರ್ಯಕರ್ತರಿಗೆ ಅಸಮಾಧಾನವಿದೆ ಎನ್ನುವುದನ್ನು ತಿಳಿಸಿರಲಿಲ್ಲವೇ? ತಿಳಿಸಿದ್ದಿದ್ದರೆ SP ಯವರು ಅಥವಾ ಪೋಲೀಸ್ ನವರು ಸಿದ್ದರಾಮಯ್ಯನವರಿಗೆ – ನೀವು ಹೋಗಬೇಡಿ, ಅಲ್ಲಿ ಗಲಾಟೆ ಆಗುತ್ತದೆ, ಅಲ್ಲಿ ಪ್ರತಿಭಟನೆ ಆಗುತ್ತದೆ, ಅಲ್ಲಿ ನಾವು ಪ್ರತಿಬಂಧಕ ಆಜ್ಞೆಯನ್ನು ಹಾಕಿದ್ದೇವೆ, ಅಲ್ಲಿ ಕಾರ್ಯಕ್ರಮ ನಡೆಸುವುದಕ್ಕೆ ನಾವು ಬಿಡುವುದಿಲ್ಲ ಎಂದು ಮುಂಚೆಯೇ ತಿಳಿಸಬೇಕಾಗಿತ್ತು. That means, it is the failure of Police Department. ಬಂದಮೇಲೆ ಹೇಳುವುದು. ಆಮೇಲೆ ಸಿದ್ದರಾಮಯ್ಯನವರೆ. ಗಲಾಟೆಯಾಗುತ್ತಿದೆ ಎಂದು S.P., D.C., Dy. S.P. ಇರಬಹುದು, ಮಧ್ಯಾಹ್ನ ನನಗೆ ಹೇಳದೆ ಏಕೆ ಸುಮ್ಮನಿದ್ದರು? ಅವರು ಯಾರಿಗೆ ಚಿತಾವಣೆ ಮಾಡುತ್ತಿದ್ದರು? ಎರಡನೆಯದಾಗಿ, ಇನ್ನು ಮೇಲೆ ಸಮ್ಮಿಶ್ರ ಸರ್ಕಾರಗಳು ಬರುವುದು ಗ್ಯಾರಂಟಿ. ಯಾವುದೇ ಒಂದು ಪಕ್ಷ ಆಡಳಿತ ನಡೆಸುತ್ತದೆಂದು ನನಗನ್ನಿಸುವುದಿಲ್ಲ. ಆಡಳಿತ ನಡೆಸತಕ್ಕಂಥವರಿಗೆ ಅದರಲ್ಲೂ ಪ್ರಕಾಶ್ ರವರಂಥ ಅನುಭವಸ್ಥರಿಗೆ ಈ ಸಂದರ್ಭದಲ್ಲಿ ಒಂದು ಕಿವಿಮಾತು ಹೇಳಲು ಬಯಸುತ್ತೇನೆ. ಪೋಲೀಸ್ ನವರು ಹೇಗೆಂದರೆ, ಹುಲಿ ಸವಾರಿ ಮಾಡಿದ ಹಾಗೆ, ಹುಲಿ ಯಾವಾಗ ಮೇಲ್ಗಡೆ ಇದ್ದವರನ್ನು ಕೆಳಗೆ ಬೀಸಾಕಿ ಓಡಿ ಹೋಗುತ್ತದೆ, ತಿಂದು ಹಾಕಿಬಿಡುತ್ತದೋ ಹೇಳಲಿಕ್ಕೆ ಆಗುವುದಿಲ್ಲ. ಅದನ್ನು ತಾವು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಿ. ಪೋಲೀಸ್ ನವರಿಗೆ ನೀವು ಬುದ್ಧಿವಾದ ಹೇಳದೇ ಹೋದರೆ,

ಸರಿಯದ ರೀತಿಯಲ್ಲಿ ತೆಗೆದುಕೊಂಡು ಹೋಗದಿದ್ದರೆ ಮುಂದಿನ ದಿನಗಳಲ್ಲಿ ತೊಂದರೆಯಾಗುತ್ತದೆ. ಕರ್ನಾಟಕ ರಾಜ್ಯದ ಪೊಲೀಸ್ ನಲ್ಲಿ ಪಕ್ಷದ ಆಧಾರದ ಮೇಲೆ allignment ಇರುವವರು ಕಡಿಮೆ. ಆದರೆ, ಇತ್ತೀಚಿನ ದಿನಗಳಲ್ಲಿ ನಮ್ಮ bureaucracy ನಲ್ಲಿ ಕೂಡ ಪಕ್ಷದ ಆಧಾರದ ಮೇಲೆ, ಜಾತಿಗಳ ಆಧಾರದ ಮೇಲೆ allignment ಗಳನ್ನು ನೋಡುತ್ತಿದ್ದೇವೆ. ಇದು ರಾಜ್ಯದ ಪ್ರಗತಿಯ ದೃಷ್ಟಿಯಿಂದ ಒಳ್ಳೆಯದಲ್ಲ. ಆದ್ದರಿಂದ, ದಯಮಾಡಿ ನಾನು ಮಾನ್ಯ ಗೃಹಮಂತ್ರಿಗಳಲ್ಲಿ ಮನವಿಯನ್ನು ಮಾಡಲಿಕ್ಕೆ ಬಯಸುತ್ತೇನೆ. ಇದು ಸಿದ್ದರಾಮಯ್ಯನವರಿಗೆ ಅಥವಾ ಒಬ್ಬ ಶಾಸಕರಿಗೆ ಆಗಿರತಕ್ಕಂಥ ಅಪಮಾನವಷ್ಟೆ ಅಲ್ಲ. ಇದು ಎಲ್ಲರಿಗೂ ಸಹಿತ ಆಗುತ್ತದೆ. ನಾವು ಎದುರಿಸಲಿಕ್ಕೆ ತಯಾರಿದ್ದೇವೆ. ಯಾರ್‍ಯಾರನ್ನೋ ನಾವು ನೋಡಿದ್ದೇವೆ. ದೇಶ ಆಳಿರತಕ್ಕಂಥವರೆಲ್ಲ ಏನೇನು ಆಯಿತೆನ್ನುವುದನ್ನೆಲ್ಲ ನಾವು ನೋಡಿದ್ದೇವೆ. ಆದ್ದರಿಂದ, ಅಧಿಕಾರ ಶಾಶ್ವತವಲ್ಲ. ತಿಂಗಳು ತಿಂಗಳುಗಳ ಶಾಶ್ವತ ಇವೆಲ್ಲ ಅಧಿಕಾರಗಳು. ಆದ್ದರಿಂದ ಇದನ್ನೆಲ್ಲ, ಗಮನದಲ್ಲಿಟ್ಟುಕೊಂಡು ದೊಡ್ಡವರಿಗೆ ಸ್ವಲ್ಪ, ಸಿದ್ದರಾಮಯ್ಯನವರು ೪-೫ ಸಲ ಗೆದ್ದಿರತಕ್ಕಂಥವರು, ಉಪ ಮುಖ್ಯಮಂತ್ರಿಯಾಗಿದ್ದವರು, ಇಂಥವರಿಗೇ ಈ ರೀತಿ ಆಯಿತೆಂದರೆ, ಒಬ್ಬ ಸಾಮಾನ್ಯವಾದ Constable, Head Constable ಒಬ್ಬ Dy. S.P. ಮೂಲಕ ಮಾಡಿಸುವುದಾದಲ್ಲಿ ಮುಂದೆ ನಿಮಗೇನು ಗತಿ ಕಾದಿದೆ ಎನ್ನುವುದನ್ನು ನೀವು ವಿಚಾರ ಮಾಡಬೇಕಾಗುತ್ತದೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ, ಯಾವ್ಯಾವ ಹುತ್ತದಲ್ಲಿ ಯಾವ್ಯಾವ ಹಾವುಗಳು ಇರುತ್ತವೋ ಹೇಳುವುದಕ್ಕಾಗುವುದಿಲ್ಲ. ಯಾವ್ಯಾವ ಗೂಡಿನಲ್ಲಿ ಯಾವ್ಯಾವ ಹಾವುಗಳಿರುತ್ತವೋ ಹೇಳುವುದಕ್ಕಾಗುವುದಿಲ್ಲ. ಯಾವಾಗ ಕಚ್ಚುದತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇದನ್ನೆಲ್ಲ ಗಮನದಲ್ಲಿಟ್ಟುಕೊಳ್ಳಬೇಕು. ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಿಮ್ಮ role ಬಹಳಷ್ಟಿದೆ. I am happy that you have allowed all of us to speak. ಅದನ್ನು ನಾನು appriciate ಮಾಡುತ್ತೇನೆ. ಮಾನ್ಯ ಗೃಹ ಮಂತ್ರಿಗಳೂ ಎರಡೂ ಕಡೆ ಇದ್ದವರು. ಎರಡೂ ಸದನಗಳಲ್ಲಿದ್ದವರು. ಎಲ್ಲ ಆಡಳಿತವನ್ನು ನೋಡಿದ್ದೀರಿ. ಪೊಲೀಸ್ ಇಲಾಖೆಯ ಯೋಗ್ಯತೆ ಸಹ ನಿಮಗೆ ಗೊತ್ತಿದೆ. ಒಳ್ಳೆಯವರು, ಕೆಟ್ಟವರು ಎಲ್ಲರೂ ಸಹ ಇದ್ದಾರೆನ್ನುವುದು ನಿಮಗೆ ಗೊತ್ತಿರುವ ವಿಚಾರ. ಪೊಲೀಸ್ ಇಲಾಖೆಯವರು ನನಗೆ ಗೊತ್ತಿರುವ ಹಾಗೆ majority of them, unless there are instructions ಅವರು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಮತ್ತು

vengeance politics ಬಹಳ ದಿನ ನಡೆಯುವುದಿಲ್ಲ. ಈಗ frank ಆಗಿ ಮಾತನಾಡೋಣ. Ruling coalition ನಲ್ಲಿ ideological differences ನಿಮ್ಮಲ್ಲಿ ಎಷ್ಟೊಂದು ಇದೆ? ನಾಳೆ ದಿನ ಮತ್ತೊಂದು ರಥ ಯಾತ್ರೆ ಹೊರಟರೆ ನೀವು allow ಮಾಡುತ್ತೀರಾ? ನಿಮ್ಮ party manifesto allow ಮಾಡುತ್ತದೆಯೇ? ಮಾಡುವುದಿಲ್ಲ. ಹಾಗೆಂದು ಹೇಳಿ ನಿಮ್ಮ Deputy Chief Minister ರವರನ್ನು ನೀವು arrest ಮಾಡಿಸುತ್ತೀರ? ಅಥವಾ ಅಲ್ಲಿರುವ All India leaders ಬಂದು ಇಲ್ಲಿ protest ಮಾಡಿದರೆ ಅವರನ್ನು arrest ಮಾಡಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತದೆಯೇ? ಇವೆಲ್ಲಾ ಪ್ರಶ್ನೆಗಳು ಬರುತ್ತವೆ. ಆದ್ದರಿಂದ, ದಯಮಾಡಿ ಬಹಳ ಸೂಕ್ಷ್ಮವಾಗಿ ಕರ್ನಾಟಕ ರಾಜಕೀಯ ಜನ ನಾವೆಲ್ಲ leaders ಸರಿಯಾಗಿದ್ದಿದ್ದರೆ ಯಾವುದಾದರೂ ಒಂದು party ಗೆ ಜನ ಓಟು ಕೊಟ್ಟಿರುವವರು. 2-3 party ಗೆ ಓಟು ಕೊಟ್ಟಿರುವುದರಿಂದಾಗಿ ಯಾರು correct ಆಗಿ ನಡೆಸುವುದಕ್ಕಾಗುತ್ತಿಲ್ಲ. ಇದನ್ನು ಗಮನದಲ್ಲಿಟ್ಟುಕೊಳ್ಳಿ. ದಯವಿಟ್ಟು ಆ ಅಧಿಕಾರಿಗಳು ಯಾರಿದ್ದರೆ, ಅವರು ಎಷ್ಟೇ ದೊಡ್ಡವಾರಾಗಿರಲಿ ಅವರನ್ನು ನೀವು suspend ಮಾಡಿ. Suspend ಮಾಡಿ ಕ್ರಮ ತೆಗೆದುಕೊಂಡ ಮೇಲೆ ಉಳಿದ ವಿಚಾರ ಮಾತನಾಡೋಣ.

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರೆ, ನೀವು ಹೇಳಿದರಲ್ಲ, ಈ ಲೀಡರ್‌ಗಳಿಂದ two party system develop ಆಗುವುದಿಲ್ಲವೆಂದು, ಅದಕ್ಕೆ ಕಾರಣವಾದ leaders ಅನ್ನು ಕರ್ನಾಟಕದಿಂದ ಗಡಿಪಾರು ಮಾಡಿಬಿಟ್ಟರೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಬಹಳ ಮಹತ್ವವಾದ ವಿಷಯವು ಈ ಸದನದಲ್ಲಿ ಪ್ರಸ್ತಾಪವಾಗಿದೆ.

ಅಧ್ಯಕ್ಷರು : ಉದಾಸಿಯವರು ಒಂದೂವರೆಗೆ ಭೋಜನ ಇಟ್ಟುಕೊಂಡಿದ್ದಾರೆ. ಈಗಲೇ ಉತ್ತರ ಕೊಡುತ್ತೀರಾ ಅಥವಾ ಆ ಮೇಲೇ ಮಾಡುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್ : Evening papers ನಲ್ಲೆಲ್ಲ ಒಂದು ಭಾಗದ ಕಥೆ ಮಾತ್ರ ಬರುತ್ತದೆ. ಈ ಭಾಗದ ಕಥೆ ಬರುವುದಿಲ್ಲ. Evening papers ನಲ್ಲಿ ನಮ್ಮ ಭಾಗದ್ದು ಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಭಾಗ ನಮ್ಮ ಭಾಗ ಎಂದರೇನು ? ಇದು ಇಲ್ಲರ ಭಾಗ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು) : ಹೌದು. ಎಲ್ಲರ ಭಾಗವನ್ನೇ ಆಡಳಿತ ಪಕ್ಷದಲ್ಲಿ ನಾವು ಹೇಳುತ್ತೇವಲ್ಲ. ಆದ್ದರಿಂದ ಸಂಜೆ ಪತ್ರಿಕೆಗಳಲ್ಲಿ ಆ ಉತ್ತರ ಬರುವುದಿಲ್ಲ. ಆದ್ದರಿಂದ ದಯವಿಟ್ಟು, ಸ್ವಲ್ಪ ತಡವಾದರೂ ಚಿಂತೆ ಇಲ್ಲ. ಊಟವನ್ನು ನಂತರ ಮಾಡೋಣ. ತಾವು ದಯವಿಟ್ಟು ಉತ್ತರ ಕೊಡಲಿಕ್ಕೆ ಅವಕಾಶ ಮಾಡಕೊಡಬೇಕು. ಬಹಳ ಮುಖ್ಯವಾಗಿರುವ ಮತ್ತು ಎಲ್ಲರ ಗೌರವ ಮಾನ ರಕ್ಷಣೆ ಮಾಡಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಅದೆಲ್ಲಕ್ಕಿಂತಲೂ ಹೆಚ್ಚಾಗಿ ತಮ್ಮ ಮೇಲಿದೆ ಎನ್ನುವುದರ ಬಗ್ಗೆ ಯಾವುದೇ ತರವಾದ ಭಿನ್ನಾಭಿಪ್ರಾಯವಿಲ್ಲ. ಈ ಸಂದರ್ಭದಲ್ಲಿ ಯಾವ್ಯಾವ ಘಟನೆಗಳಿಗೆ ಕಾರ್ಯಕಾರಣಗಳೇನಿರುತ್ತವೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಒಂದು ಘಟನೆ ಮತ್ತೊಂದು ಘಟನೆಗೆ ಪ್ರತಿಕ್ರಿಯೆಯಾಗಿ ಬರುತ್ತದೆ. ಆ ಪ್ರತಿಕ್ರಿಯೆಯಾಗುವಂಥ ಸಂದರ್ಭದಲ್ಲಿ ಅದನ್ನು ಹೇಗೆ ಹತೋಟಿಯಲ್ಲಿಟ್ಟುಕೊಳ್ಳಬೇಕೆನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ೧೪೯ ಲಕ್ಷ ರೂ. ಗಳನ್ನು ಮಾನ್ಯ ಸಚಿವರಾದಂಥ ಅಶೋಕ್ ರವರ ಆರೋಗ್ಯ ಇಲಾಖೆಯವರು ೧.೪. ೨೦೦೭ ರಲ್ಲಿ ೧೪೯-೩೬ ಲಕ್ಷ ರೂ. ಗಳಿಗೆ ಆಡಳಿತಾತ್ಮಕ ಅನುಮೋದನೆ ಕೊಟ್ಟು, ಅಲ್ಲಿ ಮೇಲ್ದರ್ಜೆಗೇರಿಸುವಂಥ ಆಸ್ಪತ್ರೆ ಕಟ್ಟಡಕ್ಕಾಗಿ ಹಣವನ್ನು ಮಂಜೂರಾತಿ ಮಾಡಿದ್ದಾರೆ. ಹಿಂದೆ ಏನು ಮಾತನಾಡುತ್ತಿದ್ದರು, ಜಿಲ್ಲಾ ಪತ್ರಿಕೆಗಳಲ್ಲಿ ವರದಿಯಾದಂತೆ ಇದು ಜಿಲ್ಲಾ ಪರಿಷತ್ತಿನ ಕೆಲಸ, ಯಾರನ್ನೂ ನಾವು ಕೇಳಬೇಕಾದಂಥದ್ದಿಲ್ಲ. ಜಿಲ್ಲಾ ಪಂಚಾಯತ್‌ಗೆ ಸಂಬಂಧಪಟ್ಟಿರುವುದರಿಂದ ನಾವು ಅದನ್ನು ಏರ್ಪಾಡು ಮಾಡುತ್ತೇವೆಂದು. ಜಿಲ್ಲಾ ಪಂಚಾಯಿತಿ ಕೆಲಸವೇ ಆಗಿರಲಿ, ಅದು ರಾಜ್ಯ ಸರ್ಕಾರದಿಂದ ಬಂದಿರುವ ಅನುದಾನದ ಪ್ರಶ್ನೆಯೇ ಆಗಿರಲಿ, ಅದನ್ನು ಮಾಡುವಾಗ ಅನೇಕ ಬಾರಿ ಇಂಥ ದೂರುಗಳು ಅನೇಕ ಬಾರಿ ಇಂಥ ನಿವಾದಗಳು ಅನಾವಶ್ಯಕವಾದಂಥ ಕಹಿ

ಪ್ರಸಂಗಗಳು ಉಂಟಾಗಿವೆ ಎಂದು ತಮಗೆ ಹೇಳುವುದಾಗಿದ್ದರೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರು ಇಷ್ಟು ದೊಡ್ಡ ಪುಸ್ತಕದಲ್ಲಿ ಪದೇ ಪದೇ ಸುತ್ತೋಲೆಗಳನ್ನು ಕಳುಹಿಸಿಕೊಟ್ಟಿರತಕ್ಕಂಥದ್ದು ಇದೆ. ಮಾನ್ಯ ರಾಯರೆಡ್ಡಿಯವರು ಪದೇ ಪದೇ ಎದ್ದು ಈ ಸೂಚನೆಗಳಲ್ಲಿ ಸಚಿವರನ್ನು ಕರೆಯಬೇಕೆಂದು ಎಲ್ಲಿದೆ ಅಥವಾ ಸಂಬಂಧಪಟ್ಟ ಇಲಾಖೆ...

ಶ್ರೀ ಬಸವರಾಜ ರಾಯರೆಡ್ಡಿ : ಕರೆಯಲೇಬೇಕೆಂದು ...

ಶ್ರೀ ಎಂ.ಪಿ. ಪ್ರಕಾಶ್ : I am reading this. ಅದನ್ನೇ ನಾನು ಹೇಳುತ್ತಿದ್ದೇನೆ. ದಿನಾಂಕ ೧೨ನೇ ಜುಲೈ ೨೦೦೧ ರಲ್ಲಿ ಸೂಚನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧರಣಾ ಇಲಾಖೆಯವರು ಇಂಥ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಆ ಪ್ರಕರಣದಲ್ಲಿ, ಸರ್ಕಾರದ ಇಲಾಖೆಗಳು ಏರ್ಪಡಿಸುವಂಥ ಸಮಾರಂಭಗಳಲ್ಲಿ ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ವಿಧಾನ ಪರಿಷತ್ತಿನ ಸದಸ್ಯರು ಮತ್ತು ವಿಧಾನಸಭಾ ಸದಸ್ಯರನ್ನು ತಪ್ಪದೇ ಆಹ್ವಾನಿಸಬೇಕು. ಸಮಾರಂಭದಲ್ಲಿ ಪಾಲ್ಗೊಳ್ಳುವಂಥ ಸಂದರ್ಭ ಮತ್ತು ಇತರ ಸನ್ನಿವೇಶಗಳನ್ನು ಆಧರಿಸಿ ಸಚಿವರು, ರಾಜ್ಯ ಸಚಿವರು, ಸಂಸತ್ ಸದಸ್ಯರು, ರಾಜ್ಯ ವಿಧಾನಮಂಡಲಗಳ ಸದಸ್ಯರಿಗೆ, ಅಧ್ಯಕ್ಷರು, ಮುಖ್ಯ ಅತಿಥಿ, ವಿಶೇಷಾಹ್ವಾನಿತರು ಹೀಗೆ ಎಲ್ಲರಿಗು ಸ್ಥಾನಗಳನ್ನು ನೀಡಬೇಕು ಮತ್ತು ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಬೇಕು ಎಂದು ಇದೆ. ಕಾಲ ಕಾಲಕ್ಕೆ ಇದೇ ರೀತಿಯಾಗಿ ಅನೇಕ ಇಂಥ...

ಶ್ರೀ ಬಸವರಾಜ ರಾಯರೆಡ್ಡಿ : ೨ನೇ sentence ಓದಿ. ಸಮಾರಂಭದಲ್ಲಿ ಪಾಲ್ಗೊಳ್ಳುವಂಥ ಸಂದರ್ಭ ಮತ್ತು ಸನ್ನಿವೇಶ, ಆ ಸನ್ನಿವೇಶ ಎಲ್ಲ ಎಂದು ಹೇಳಿದೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಧರ್ಮಸಿಂಗ್ ರವರು ನಮ್ಮ ನಾಯಕರು. ಅವರು ವಿರೋಧ ಪಕ್ಷದ ನಾಯಕರಾದರೂ ನಮ್ಮ ನಾಯಕರೆಂದು ಕರೆಯುತ್ತೇವೆ. ಅವರು ಹೇಳಿದಂತೆ, Shakdher and Kaul ಅನ್ನು ದೂರವೇ ಇಡುತ್ತೇವೆ. ಈ ನಿಯಮಾವಳಿಗಳನ್ನು ಹೇಳಬೇಡಿ.. hair-splitting argument ನ ಪ್ರಶ್ನೆಯಲ್ಲ

ಇದು. ಇಲ್ಲಿ ಬಂದಿರುವುದೇನೆಂದರೆ, ಕಾಲ ಕಾಲಕ್ಕೆ ಕೊಟ್ಟಿರುತಕ್ಕಂಥ ಸುತ್ತೋಲೆಗಳಿವೆ. ಈ ಸಂದರ್ಭದಲ್ಲಾಗಿರತಕ್ಕಂಥದ್ದೇನಿದೆ,...

ಶ್ರೀ ಸಿದ್ದರಾಮಯ್ಯ : ಅಲ್ಲಿ ಪ್ರತಿನಿಧಿಸುವ ಸಂಸತ್ ಸದಸ್ಯರನ್ನು, ಶಾಸಕರನ್ನು ಕಡ್ಡಾಯವಾಗಿ ಕರೆಯಲೇಬೇಕು. ಮಂತ್ರಿ ಅಥವಾ ಬೇರೆ ...

ಶ್ರೀ ಎಂ. ಪಿ. ಪ್ರಕಾಶ್ : ಸಮಾರಂಭದಲ್ಲಿ ಪಾಲ್ಗಳ್ಳುವಂಥ ಸಂದರ್ಭ ಮತ್ತು ಇದರ ಸನ್ನಿವೇಶ ...

ಶ್ರೀ ಸಿದ್ದರಾಮಯ್ಯ : It is not mandatory. ಹಾಗೆ ಇದ್ದಿದ್ದರೆ ಸಂಸತ್ ಸದಸ್ಯರನ್ನು, ಶಾಸಕರನ್ನು, ಮಂತ್ರಿಗಳನ್ನು ಕಡ್ಡಾಯವಾಗಿ ಕರೆಯಬೇಕು...

ಶ್ರೀ ಎಂ.ಪಿ. ಪ್ರಕಾಶ್ : ತಾವು ಹೇಳಿದ್ದೀರಿ. ಸರ್ಕಾರದ ಉತ್ತರವನ್ನು ತಾವು ದಯವಿಟ್ಟು ಶಾಂತರಾಗಿ ಕೇಳಿ. ಈ ಸಂದರ್ಭವನ್ನಾಧರಿಸಿ ರಾಜ್ಯ ಸಚಿವರು, ಸಂಸತ್ ಸದಸ್ಯರು, ವಿಧಾನ ಪರಿಷತ್ ಸದಸ್ಯರು. ಎಲ್ಲರೂ ಈ ಪಟ್ಟಿಯಲ್ಲಿ ಇದ್ದಾರೆ. ಈ ಎಲ್ಲಾ ಸುತ್ತೋಲೆಗಳ ಕ್ರಮ ಏಕೆ ಬಂತು ? ವಿಧಾನ ಪರಿಷತ್ ಸದಸ್ಯರನ್ನು ಕೈಬಿಡುತ್ತಿದ್ದೆವು, ಮಂತ್ರಿಗಳನ್ನು ಕೈಬಿಡುತ್ತಿದ್ದೆವು. ಒಟ್ಟಿನಲ್ಲಿ ಈ ಕಾರ್ಯಕ್ರಮಗಳನ್ನು ಮಾಡಬೇಕಾಗಿರುವವರು ಯಾರು? ಸಂಬಂಧಪಟ್ಟ ಇಲಾಖೆಯವರು ಈ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಕಾರ್ಯಕ್ರಮವನ್ನು ಮಾಡಬೇಕೆಂದು ಸೂಚನೆ ಬಂದಂಥ ಸಂದರ್ಭದಲ್ಲಿ ಅಧಿವೇಶನ ಮುಗಿದ ನಂತರ ಈ ಕಾರ್ಯಕ್ರಮವನ್ನು ಇಟ್ಟುಕೊಳ್ಳಿ ಎಂದು ಆರೋಗ್ಯ ಸಚಿವರೂ ಹೇಳಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರೂ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅಧಿವೇಶನದ ಈ ಸಂದರ್ಭದಲ್ಲಿ ಇದನ್ನು ಮಾಡತಕ್ಕಂಥದ್ದು ಆಗುವುದಿಲ್ಲ. ಅಧಿವೇಶನ ಮುಗಿದ ಮೇಲೆ ಮಾಡಲಿ ಎನ್ನತಕ್ಕಂಥದ್ದು... ಆ ಸಂದರ್ಭ ಬಂದಿರತಕ್ಕಂಥದ್ದರಲ್ಲಿಯೂ ಕೂಡ ಈಗಾಗಲೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ವಾಟಾಳ್ ನಾಗರಾಜ್ ರವರು ಹೇಳಿದಂತೆ ಅವರಿಗೆ ಈ ಸೂಚನೆಯನ್ನು ಕಳುಹಿಸಿದರು. S.P., Additional S.P ಮಾತನಾಡಿದ್ದಾರೆ. ಇಲ್ಲಿ ಪ್ರತಿರೋಧ ಬರುವ ಸಂದರ್ಭ ಇದೆ, ನಿಮಗೆ ಮಾತನಾಡಿ ಕಳುಹಿಸಿಕೊಟ್ಟಿದ್ದೇವೆಂದು ಹೇಳುತ್ತಾರೆ. ಅದರಿರಲಿ, ನನಗೆ ಬಂದ ಮಾಹಿತಿಯನ್ನು

ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಅದು ತಪ್ಪು ಮಾಹಿತಿ.

ಶ್ರೀ ಎಂ. ಪಿ. ಪ್ರಕಾಶ್ : ಆಗಬಹುದು. ಒಂದು ವೇಳೆ ಆ ರೀತಿ ಇದ್ದರೆ ಸರಿಪಡಿಸುತ್ತೇನೆ. ನೀವೇ ಅದನ್ನು deny ಮಾಡುತ್ತಿರುವುದರಿಂದ ನಿಮ್ಮ ಮಾತನ್ನು ಒಪ್ಪುತ್ತೇನೆಯೇ ವಿನಃ ಅವರ ಮಾತನ್ನು ಒಪ್ಪುವುದಿಲ್ಲ. ಆದುದರಿಂದ, ಅವರು ಹೇಳಿರತಕ್ಕಂಥದ್ದು, ಈ ತರಹದ ಅಭಿಪ್ರಾಯಗಳು ಬರುತ್ತಿವೆ. ಹೇಗೂ ಮುಂದಿನ ದಿವಸಗಳಲ್ಲಿ ನೀವು ಮಾಡಬೇಕಾಗುತ್ತದೆ, ಆ ಸಂದರ್ಭದಲ್ಲಿ ಮಾಡೋಣವೆಂದು ಹೇಳಿದಾಗ, ಇಲ್ಲ , ನಮಗೆ ಇಲ್ಲಿ ಇರುವ ಕಾರ್ಯಕ್ರಮ ಜನಸಂಪರ್ಕದ ಕಾರ್ಯಕ್ರಮವಿದೆ, ಜನ ಸಂಪರ್ಕದ ಕಾರ್ಯಕ್ರಮಕ್ಕೆ ನಾವು ಹೋಗುತ್ತೇವೆ. ಅಲ್ಲಿಗೆ ಹೋಗುವುದಿಲ್ಲ ಎನ್ನುವ ಮಾತು. ಬೇರೆ ಇಲ್ಲ ಮೂಲಭೂತವಾದ ಪ್ರಶ್ನೆಯೇನು ? ಈ ಕಾರ್ಯಕ್ರಮವನ್ನು ಮಾಡಬೇಕಾಗಿದ್ದರೆ ಅದನ್ನು ರೂಪಿಸಬೇಕಾದ ಅಧಿಕಾರ ಇದೆಯಲ್ಲ, ರೂಪಿಸಬೇಕಾದ ಅಧಿಕಾರಿಗಳು ಯಾರು ? ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಮಾಡಬೇಕು. ನಾವು ಅವರನ್ನು ಈ ವಿಚಾರಕ್ಕೆ ಕರೆದಿಲ್ಲ, ಆಹ್ವಾನ ಪತ್ರಿಕೆಯನ್ನು print ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಅವರನ್ನು ಕರೆಸಿ,. ನನ್ನನ್ನು ಅವರು ಬಂದು ಕರೆದಿಲ್ಲವೆಂದು ಹೇಳಿದರೆ ನಾನು ಈ ಗಳಿಗೆಯಲ್ಲಿಯೇ ರಾಜಿನಾಮೆ ಕೊಟ್ಟು ಹೋಗುತ್ತೇನೆ. ಇಲ್ಲಿಯೇ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಆ ಅಧಿಕಾರಿಗಳನ್ನು ಇಲ್ಲಿಗೇ ಕರೆಸಿ. Invitation ಬೇಕಾಗಿಲ್ಲ. ಮಾಡಲೇ ಬೇಕೆಂದೇನೂ ಇಲ್ಲ. ಕಡ್ಡಾಯವೇನಿಲ್ಲ. ಕರೆದಿಲ್ಲವೆಂದು ಅವರು ಇಲ್ಲಿ ಬಂದು ಹೇಳಲಿ. ಒಂದ್ನಿಮಿಷ...

ಶ್ರೀ ಎಂ.ಪಿ. ಪ್ರಕಾಶ್ : ನಿಮಗೆ ಉತ್ತರ ಬೇಕೆಂದಿದ್ದರೆ ಕೇಳಿ. ನಾವು ನಿಮಿಷ ನಿಮಿಷಕ್ಕೂ ನಿಮಗೆ ಅಡ್ಡಿ ಪಡಿಸಬಹುದಿತ್ತು. ದಯವಿಟ್ಟು ಈಗ ನಮ್ಮ ಉತ್ತರವನ್ನು ಶಾಂತ ರೀತಿಯಿಂದ ಕೇಳಿಸಿಕೊಂಡರೆ ಆಗ ಇದು ಯಾವುದು ತಪ್ಪು? ಯಾವು ತಪ್ಪಲ್ಲ, ಎನ್ನುವುದು ಬರುತ್ತದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಒಂದು ವರದಿಯನ್ನುಕಳುಹಿಸಿಕೊಟ್ಟಿದ್ದಾರೆ. ಏನೆಂದರೆ – ಮೈಸೂರು ತಾಲ್ಲೂಕಿನ ಜಯಪುರ ಗ್ರಾಮದ ಈ ಕೇಂದ್ರವನ್ನು ಉಲ್ಲೇಖ (೧)

ರಲ್ಲಿ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿ ಸದರಿ ಕಟ್ಟಡದ ನಿರ್ಮಾಣ ಕಾಮಗಾರಿಗೆ ಉಲ್ಲೇಖ (೨) ರಲ್ಲಿ ಕರ್ನಾಟಕ ರಾಜ್ಯ ಆರೋಗ್ಯ ವ್ಯವಸ್ಥೆ ಮತ್ತು ಕಾಮಗಾರಿಗಳಿಗಾಗಿ ೧೬೯.೩೬ ಲಕ್ಷ ರೂ. ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ಸಂಬಂಧ KHSDP ಯವರು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರನ್ನು ಸಂಪರ್ಕಿಸಿದಾಗ ವಿಧಾನಸಭೆಯ ಅಧಿವೇಶನ ಮುಗಿದ ನಂತರ ದಿನಾಂಕವನ್ನು ನಿಗಧಿಗೊಳಿಸಬಹುದೆಂದು ತಿಳಿಸಿರುತ್ತಾರೆ. ಈ ಮಧ್ಯೆ ದಿ: ೩೧.೩. ೨೦೦೭ ರಂದು ಶಾಸಕರಾದ ಮಾನ್ಯ ಸಿದ್ದರಾಮಯ್ಯನವರು ಹಾಗೂ ಅವರ ಅನುಯಾಯಿಗಳೂ ಕಟ್ಟಡದ ಶಂಕುಸ್ಥಾಪನೆ ಹಮ್ಮಿಕೊಂಡಿರುವುದಾಗಿ ತಿಳಿದು ಬಂದಿರುತತದೆ. ಇದರಲ್ಲಿ ಜಿಲ್ಲಾಡಳಿತವಾಗಲಿ, ಜಿಲ್ಲಾ ಪಂಚಾಯತ್ ವತಿಯಿಂದಾಗಲಿ ಅಥವಾ ಇಲಾಖಾ ವತಿಯಿಂದಾಗಲಿ, ಯಾವುದೇ ಕಾರ್ಯಕ್ರಮವನ್ನೇರ್ಪಡಿಸಿರುವುದಿಲ್ಲ. ಇದು ಅವರು ಕಳುಹಿಸಿಕೊಟ್ಟಿರುವ ಒಂದು ವರದಿ.

ಶ್ರೀ ಸಿದ್ದರಾಮಯ್ಯ : ಇದು ಸಂಘರ್ಷ ಅಲ್ಲ. ಅವರನ್ನು ಕರೆಸಿ. ಅವರು ನನ್ನನ್ನು ಕರೆದಿಲ್ಲವೆಂದು ಹೇಳಿಬಿಟ್ಟರೆ ಅಥವಾ ಜಿಲ್ಲಾ ಮಂತ್ರಿಯಾಗಲಿ ಅಥವಾ ಆರೋಗ್ಯ ಮಂತ್ರಿಯಗಲಿ ಮುಂದಕ್ಕೆ ಹಾಕಬೇಕೆಂದು ಹೇಳಿದ್ದಾರೆ ಸರ್, ನೀವು ಮಾಡುವುದು ಬೇಡ ಎಂದು ಹೇಳಿದ್ದರೆ ನಾನು ಒಂದು ನಿಮಿಷ ಸಹ ಇಲ್ಲಿ ಶಾಸಕರಾಗಿ ಉಳಿಯುವುದಿಲ್ಲ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್ : ರಾಜೀನಾಮೆ ಪ್ರಶ್ನೆ ಬೇಡ.

ಶ್ರೀ ಸಿದ್ದರಾಮಯ್ಯ : ಅಧಿಕಾರಿಗಳು ಬರೆದುಕೊಟ್ಟಿದ್ದನ್ನು ನಂಬಿಕೊಂಡು ಹೇಳುವುದಾದರೆ ಹಾಗೆಯೇ ಮಾಡಿ. ನನಗೇನೂ ಅವಮಾನವಾದರೂ ಏನೂ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ : ನಿಮ್ಮ ಪ್ರಶ್ನೆಗೆ ಉತ್ತರ ಕೊಡಬೇಕೆಂದು ನೀವು ಅಪೇಕ್ಷೆ ಪಡುತ್ತೀರಿ. ಆ ರೀತಿ ಅಪೇಕ್ಷೆ ನಾವು ಉತ್ತರ ಕೊಡಲೇ ಬೇಕಾಗುತ್ತದೆ. ಇದು ಆರೋಗ್ಯ ಇಲಾಖೆಯವರು ಕಳುಹಿಸಿರುವ ವರದಿ. ನಾನು ಮೂಲಭೂತವಾದ ಪ್ರಶ್ನೆಯನ್ನು ತಮಗೆ ಕೇಳುತ್ತೇನೆ. ಈ ಕಾರ್ಯಕ್ರಮವನ್ನು ಏರ್ಪಾಡು ಮಾಡಿದವರು ಯಾರು ? ಈ ಕಾರ್ಯಕ್ರಮವನ್ನು ಏರ್ಪಾಡು ಮಾಡುವ ಅಧಿಕಾರ ಯಾರಿಗಿದೆ? (ಗೊಂದಲ) ಅಲ್ಲಿಯ ಶಾಸಕರಿಗಿರುವುದಿಲ್ಲ. ಅಲ್ಲಿಯ ಆರೋಗ್ಯ ಇಲಾಖೆಯವರು ಮಾಡಬೇಕಾಗಿರುವ ಕಾರ್ಯಕ್ರಮ. ಅದು ಇರಬಹುದು. ಅದರ ಬಗ್ಗೆ ಚರ್ಚೆ ಮಾಡೋಣ. ಅದಕ್ಕಾಗಿ ತಾವು ಹಕ್ಕುಚ್ಯುತಿ ಚರ್ಚೆಗೆ ಕೊಟ್ಟಿದ್ದೀರಿ. ಈ ಹಿಂದೆ ತಾವು ಕೂಡ ಹೇಳಿದ್ದೀರಿ. ಹಿಂದೆ ಲಘುವಾಗಿಯಾಗಿದ್ದರೂ ಕೂಡ ತಮಾಷೆಯಾಗಿ ಕೂಡ ಹೇಳಿದ್ದೀರಿ. ಈ ಸಲ ನಾನು ರಾಜೀನಾಮೆ ಕೊಡುವ ಕೆಲಸಕ್ಕೆ ಹೋಗುವುದಿಲ್ಲ. ಈ ರಾಜೀನಾಮೆಯನ್ನು ಕೊಟ್ಟು ಏನೆಲ್ಲಾ ಕಷ್ಟ ಅನುಭವಿಸಿದೆ ಎಂಬುದು ನನಗೆ ಗೊತ್ತಿದೆ, ಇನ್ನು ಮೇಲೆ ಆ ಸುದ್ದಿಯನ್ನು ನಾನು ಮಾತನಾಡುವುದಿಲ್ಲ ಎಂದು ಹೇಳಿದ್ದರಿಂದ ನಾನು ನಿಮ್ಮಂಥವರು ಇಲ್ಲಿ ಇರಬೇಕೆನ್ನುವ ಕಾರಣಕ್ಕಾಗಿ ವಿನಯಪೂರ್ವಕವಾಗಿ ಹೇಳಬಯಸುತ್ತೇನೆ. ಈ ವಿಚಾರದಲ್ಲಿ ನಾನು ರಾಜೀನಾಮೆ ಕೊಡುತ್ತೇನೆನ್ನುವ ಮಾತನ್ನು ತಾವು ದಯವಿಟ್ಟು ಹೇಳಬಾರದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಇದರಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟೆ. ಇದರಲ್ಲಿ ರಾಜಿನಾಮೆ ಕೊಡಬೇಕಾದಂಥ ಅಗತ್ಯವಿಲ್ಲ. ಕ್ರಮವಾಗಬೇಕಾದಂಥದ್ದೇನಿದೆ, ಅದು ತಮ್ಮ ವಿವೇಚನೆ ಬಿಟ್ಟಿರತಕ್ಕಂಥದ್ದು. ಈ ಕಾರ್ಯಕ್ರಮವನ್ನು ರೂಪಿಸಬೇಕಾದಂಥದ್ದು ಆಡಳಿತ ಮಾಡುವ ಇಲಾಖೆಯುವರದ್ದು. ಅದು ಅದನಂತರ ಅದಕ್ಕೆ ಸಂಬಂಧಪಟ್ಟಿರುವ ಜಿಲ್ಲಾಡಳಿತದವರು ಕ್ರಮ ಕೈಗೊಳ್ಳುತ್ತಾರೆ. ಆಹ್ವಾನ ಪತ್ರಿಕೆ ಮುದ್ರಣವಾಗಿಲ್ಲ, ಅಲ್ಲಿಗೆ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಕೂಡ ಹೋಗಿಲ್ಲ. ಜಿಲ್ಲಾ ಪಂಚಾಯತಿಯ ಯಾವ ಅಧಿಕಾರಿಯೂ ಅಲ್ಲಿಗೆ ಹೋಗಿಲ್ಲ. ಜಿಲ್ಲಾಡಳಿತದಲ್ಲಿರುವವರ್ಯಾರೂ ಹೋಗಿಲ್ಲ. ಸಚಿವರನ್ನು ಕರೆದಿಲ್ಲವೋ ಅದನ್ನು ಬಿಟ್ಟುಬಿಡಿ, ಉಸ್ತುವಾರಿ ಸಚಿವರನ್ನು ಕರೆದಿಲ್ಲವೋ ಅದೂ ಬಿಟ್ಟುಬಿಡಿ. ಆದರೆ, ಜಿಲ್ಲಾಡಳಿತಕ್ಕೆ ಸಂಬಂಧಪಟ್ಟಂಥವರರಿರಬೇಕಲ್ಲವೇ? ಅವರ್ಯಾರೂ ಕೂಡ ಇಲ್ಲದೆ ಆಹ್ವಾನ ಪತ್ರಿಕೆ ಇಲ್ಲದೆ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸುಮ್ಮನೆ ತಕರಾರು ಮಾಡಿಕೊಳ್ಳುವುದು ಬೇಡ. ತಾವು ಒಪ್ಪುವುದಾದರೆ ಸದನ ಸಮಿತಿ ಮಾಡಿ. ಶ್ರೀ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಅಥವಾ ವಾಟಾಳ್ ನಾಗರಾಜ್ ರವರ ಅಧ್ಯಕ್ಷತೆಯಲ್ಲಿ, ನಾವೂ ಬೇಡ ನೀವೂ ಬೇಡ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಿರಿಯರಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅವರು ಉತ್ತರ ಕೊಡುವುದು ಮುಗಿಯಲಿ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್ : ಇಂಥ ವಿಚಾರಗಳಲ್ಲಿ ಸರ್ಕಾರದ ಆಕ್ಷೇಪಣೆಗಳನ್ನು ಮತ್ತು ತಮ್ಮ ಆಕ್ಷೇಪಣೆಗಳನ್ನು ಕೇಳಿದ ಮೇಲೆ ಇಂಥ ಹಕ್ಕುಚ್ಯುತಿಯ ಸಂದರ್ಭ ಬಂದಾಗ ಮಾನ್ಯ ಸಭಾಧ್ಯಕ್ಷರು ಯಾವ ರೀತಿಯ ಕ್ರಮ ಕೈಗೊಳ್ಳಬೇಕೆಂಬುದನ್ನು ನಿರ್ಣಯ ಮಾಡುತ್ತಾರೆ. ತಾವು ಹೇಳಿರುವುದು ಒಂದು ಪರ್ಯಾಯವಾದ ಒಂದು ಸೂತ್ರ. ಆದರೆ ನನ್ನ ಉತ್ತರ ಮುಗಿಯುವುದರೊಳಗಾಗಿ ತಾವು ಇಷ್ಟು ಅವಸರದಲ್ಲಿ ಪರಿಹಾರ ಸೂಚಿಸುವುದಾಗಿದ್ದರೆ ಮಲ್ಲಿಕಾರ್ಜುನ ಖರ್ಗೆಯವರೆ, ಇದು ಸರಿಯಾದಂಥ ಕ್ರಮವಾಗುವುದಿಲ್ಲ. ಈಗ ನಾನು ಹೇಳತಕ್ಕಂಥದ್ದು ಎರಡನೆಯ ಮುಖ್ಯವಾದಂಥದ್ದು, ಈ ಒಂದು ಶಿಷ್ಟಾಚಾರದ ವಿಚಾರದಲ್ಲಿ ನಾನು ಆಗಲೇ ಪ್ರಸ್ತಾಪ ಮಾಡಿದ್ದೇನೆ. ಅವರನ್ನು ಕರೆಯಲೇ ಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾವು ಅವರನ್ನು ಅರೆಸ್ಟ್ ಮಾಡಿಲ್ಲ ಎನ್ನತಕ್ಕಂಥ ವಿಚಾರದಲ್ಲಿ, ಏಕೆ ಕರೆದುಕೊಂಡು ಬಂದರು? ಏನಾಯಿತು? ಅಲ್ಲಿ DAR ನಲ್ಲಿ ಪೋಲೀಸ್ ಪೇದೆಗಳಿಗೆ ಮತ್ತು ಅಲ್ಲಿನ ಸಿಬ್ಬಂದಿಗಳಿಗೆ ಅನುಕೂಲವಾಗಲಿ ಎನ್ನುವ ಕಾರಣಕ್ಕಾಗಿ ಒಂದು ಕಲ್ಯಾಣ ಮಂಟಪವನ್ನು ಬಹಳ ದೊಡ್ಡದಾಗಿ ಬಹಳ ಸುಂದರವಾಗಿ ಬಹಳ ಸುಂದರವಾಗಿ ದೊಡ್ಡ ಖರ್ಚನ್ನು ಮಾಡಿ ಕಟ್ಟಿರತಕ್ಕಂಥದ್ದು ಇದೆ. ಅಲ್ಲಿ ಅವರನ್ನು ಕರೆದುಕೊಂಡು

ಹೋಗತಕ್ಕಂಥದ್ದರಲ್ಲಿ Karnataka Police Act ತಮಗೆ ಗೊತ್ತಿದೆ. "Persons bound to conform to reasonable directions of police" ಇಲ್ಲಿನ ಘಟನಾವಳಿಗಳ ಬಗ್ಗೆ ಉಸ್ತುವಾರಿ ಸಚಿವರಾದಂಥ ಶ್ರೀ ಜಿ.ಟಿ. ದೇವೇಗೌಡರವರು ಕೆಲವು ವಾಸ್ತವ ಸಂಗತಿಗಳನ್ನು ಹೇಳುತ್ತಾರೆ. ಸುಮಾರು ನಾಲ್ಕು ಗಂಟೆಯ ಸಂದರ್ಭದಲ್ಲಿ ಅಲ್ಲಿಗೆ ಹೋದಾಗ ಅಲ್ಲಿದ್ದಂತಹ ಅಲ್ಲಿಯ ಗ್ರಾಮ ಪಂಚಾಯಿತಿಯ ಅಧ್ಯಕ್ಷ ನಮ್ಮಂತೆ ಆತನೂ ಕೂಡ ಜನಪ್ರತಿನಿಧಿ. ಒಬ್ಬರು ಕೆಳಹಂತದಲ್ಲಿರತಕ್ಕಂಥ ಜನಪ್ರತಿನಿಧಿ, ಕೆಲವರು ದೊಡ್ಡಮಟ್ಟದಲ್ಲಿರತಕ್ಕಂಥ ಜನಪ್ರತಿನಿಧಿಗಳಾಗಿರುತ್ತಾರೆ. ಜನಪ್ರತಿನಿಧಿಗಳು ಜನಪ್ರತಿನಿಧಿಗಳೇ. ಎಲ್ಲರಿಗೂ ಕೂಡ ಗೌರವ ಕೊಡಬೇಕಾಗಿರತಕ್ಕಂಥದ್ದು ಹೊಸ ಅಧಿಕಾರದ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿದೆ. ಮಾನ್ಯ ಸಿದ್ದರಾಮಯ್ಯನವರು ಅಥವಾ ಅಲ್ಲಿದ್ದಂಥ ಎಲ್ಲರೂ ಕೂಡ ಅಕಸ್ಮಾತ್ ಮಾಡಿಯೇ ತಿರಬೇಕು ಎನ್ನುವುದಾಗಿದ್ದರೆ, ಆ ಗ್ರಾಮ ಪಂಚಾಯಿತಿಯ ಅಧ್ಯಕ್ಷನನ್ನು ನೀನು ಬಾರಯ್ಯ, ನೀನು ಕೂಡ ಇದಕ್ಕೆ ಸಂಬಂಧಪಟ್ಟಿರತಕ್ಕಂಥ ವ್ಯಕ್ತಿ, ನಿಮ್ಮ ಊರಿಗೆ ಇಂಥ ದೊಡ್ಡ ಕೆಲಸವಾಗಿದೆ, ಆ ಅಡಿಗಲ್ಲು ಸಮಾರಂಭಕ್ಕೆ ನೀನು ಆ ಎಂದು ಆಹ್ವಾನಿಸಬಹುದಾಗಿತ್ತು. ಅವರು ಅದಕ್ಕೆ ಆಕ್ಷೇಪಣೆ ಮಾಡಿದ್ದಾರೆ. ಪಕ್ಷದ ವಿಚಾರಗಳು ಬೇರೆ. ನಾವು ಎಷ್ಟೇ ನಿರ್ಭಾವದಿಂದ ಮಾತನಾಡಿದರೂ ಕೂಡ ಆ ಚುನಾವಣೆಯ ಕಹಿ ಸಂದರ್ಭಗಳು ಮನಸ್ಸಿನಲ್ಲಿಟ್ಟುಕೊಂಡಿರುತ್ತೇವೆ. ಅದನ್ನು ಇಟ್ಟುಕೊಂಡಿರುತ್ತೇವೆ ಎನ್ನುವುದಕ್ಕೆ ಏನು ಕಾರಣ ಎಂದರೆ, ಸುಮಾರು ಏಳು ವಾಹನಗಳು ಬೆಂಕಿ ಹಚ್ಚಿ ಉರಿದಿದೆ. ಮಾನ್ಯ ಚೆಲುವರಾಯ ಸ್ವಾಮಿಯವರು ಕೆಂಪು ಬಸ್‌ಗಳೂ ಇರಬಾರದು ಎಂದು ಬಣ್ಣ ಬದಲಿಸಿದರೂ, ಎಲ್ಲೋ ಒಂದು ಘಟನೆಯಾಗಿದೆ ಎಂದರೆ..

ಶ್ರೀ ಎನ್. ಚೆಲುವರಾಯ ಸ್ವಾಮಿ : ಕೆಂಪು ಬಸ್‌ಗಳ ಮೇಲೆ ಸಿಟ್ಟು ಇದೆ ಎಂದು ಬಣ್ಣವನ್ನು ಬದಲಾವಣೆ ಮಾಡಿದರೆ, ಕಾವೇರಿ ಗಲಾಟೆಯಲ್ಲಿಯೇ ಒಂದು ಬಸ್ ಸುಡಲಿಲ್ಲ, ಇದು ಸಣ್ಣ ಗಲಾಟೆಯಲ್ಲಿ ನಾಲ್ಕು ಬಸ್ ಸುಟ್ಟರು ಎಂದರೆ ಏನು?

ಶ್ರೀ ಎಂ.ಪಿ. ಪ್ರಕಾಶ್ : ಅಲ್ಲಿ ಬಸ್ ಗಳು ಹತ್ತಿ ಉರಿಯುತ್ತಿವೆ ಎಂದರೆ, ಅಗ್ನಿ ಶಾಮಕ ದಳದವರು ಹೋಗಿ ಆ ಬೆಂಕಿಯನ್ನು ನಂದಿಸಲಿಕ್ಕೆ ಹೋದರೆ,

ಅಗ್ನಿ ಶಾಮಕ ದಳದ ವ್ಯಾನ್ ಅನ್ನು ಸುಟು ಹಾಕಿದ್ದಾರೆ. ಅಂದರೆ, ಈ ರೀತಿಯಾದಂಥ ಅರಾಜಕತೆ, ಅಶಿಸ್ತು, ಯಾವೊದೋ ಒಂದು ಕಾರಣಗಳಿಗಾಗಿ ಈ ರೀತಿ ವರ್ತಿಸಿಕೊಳ್ಳತಕ್ಕಂಥದ್ದು, ಆಗಿದೆ. ನನ್ನ ಕಾರ್ಯಕರ್ತರು ಎಂದ ಕೂಡಲೇ ಪೊಲಿಸರು ಬಂಧಿಸುವುದು, ಅವರನ್ನು ರೌಡಿಲಿಸ್ಟ್ ನಲ್ಲಿ ಪೊಲೀಸ್ ಠಾಣೆಯಲ್ಲಿ ಭಾವ ಚಿತ್ರ ಹಾಕುವುದು ಎಷ್ಟು ಅಕ್ಷ್ಯಮ್ಯ ಅಪರಾಧವೊ, ನಿಮ್ಮ ಮೇಲೆ ಕುರುಡು ಅಭಿಮಾನಕ್ಕೋ ಅಥವಾ ಮತ್ತೊಂದು ಕಾರಣಕ್ಕೋ ಈ ರೀತಿ ಬಸ್ ಗಳನ್ನು ಸುಡತಕ್ಕಂಥದದು. ಅಗ್ನಿಶಾಮಕದಳದ van ಅನ್ನು ಸುಡತಕ್ಕಂಥದ್ದು, ಕಾನೂನನ್ನು ಕೈಗೆ ತೆಗೆದುಕೊಳ್ಳತಕ್ಕಂಥದ್ದು ಅಷ್ಟೇ ಅಪರಾಧ, ಇಂತಹವರು ನಮಗೆ ನಿಮಗೆ ಎಲ್ಲರಿಗೂ ಕೆಟ್ಟ ಹೆಸರನ್ನು ತರತಕ್ಕಂಥವರಾಗಿರುತ್ತಾರೆ. ಅವರ ಬಗ್ಗೆ ನಾವು ಹೆಚ್ಚು ಕಾಳಜಿಯನ್ನು ವಹಿಸಿಕೊಳ್ಳಬೇಕಾಗಿರುವಂಥದ್ದು ಇದೆ. ಆ ದಿವಸ ಅಲ್ಲಿಗೆ ಹೋದಾಗ, ತಾವು ರಸ್ತಾ ರೋಖೋ ಚಳುವಳಿ ಮಾಡುತ್ತಿದ್ದೀರಿ, ಹೆಗ್ಗಡದೇವನ ಕೋಟೆಗೆ ಹೋಗತಕ್ಕಂಥ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಗಿದೆ, ದಯವಿಟ್ಟು ತಾವು ಅಲ್ಲಿಂದ ಬರಬೇಕೆಂದು ಹೇಳಿದ್ದಾರೆ. ಅಲ್ಲಿ ಯಾವ ರೀತಿ ಉದ್ಧಟತನದಿಂದ ವರ್ತಿಸತಕ್ಕಂಥ ಅಧಿಕಾರಿಗಳು ಇದ್ದಾರೆ ಎಂದರೆ, ಇರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಅನೇಕ ಸಂದರ್ಭದಲ್ಲಿ ಜೀವಿಜಯರವರು, ಬಸವರಾಜುರವರು ಎಲ್ಲಾ ಹೇಳಿದರು, ಕೊಡಗಿನ ವಿಚಾರದಲ್ಲಿ ಒಬ್ಬ ಜಿಲ್ಲಾಧಿಕಾರಿ ಉದ್ಧಟತನದಲ್ಲಿ ಮಾತನಾಡುತ್ತಾನೆಂದು ಹೇಳಿದರು. ಇಂಥದ್ದು ಆಗಿದೆ ಎಂದು ನಮ್ಮೆಲ್ಲರ ಅನುಭವಕ್ಕೆ ಬಂದಿದೆ. ಆದರೆ ಉದ್ಧಟತನದ ಕ್ರಮ ಆಗಿರಬಹುದು. ಅದಕ್ಕೆ ಏನೇನು ಕ್ರಮ ಕೈಗೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಮಗೆ ಆ ರೀತಿ ಮಾತನಾಡಿದನಲ್ಲ ನೀವಾದರೂ ಕ್ರಮ ತೆಗೆದುಕೊಳ್ಳಿ. ಆ ಜಿಲ್ಲಾಧಿಕಾರಿ ನಿಮಗೆ ಆಡಿದ್ದನಲ್ಲಾ ಏನಾದರೂ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಅಂಥದ್ದೆಲ್ಲವೂ ಆಗಿವೆ. ಅದು ಏನೇ ಇದ್ದರೂ ಕೂಡ ಅವರು ಮೂರು ಜನ ಪಕ್ಷಾತೀತವಾಗಿ, ಕಾಂಗ್ರೆಸ್‌ನವರು, ಭಾರತೀಯ ಜನತಾ ಪಕ್ಷದವರು ಮತ್ತು ಸಮ್ಮಿಶ್ರ ಸರಕಾರದ ಪಕ್ಷದವರು ಕೂಡ ಬಂದು ಹೇಳಿದರು. ಅಂಥ ಉದ್ದಟತನದ ಅಧಿಕಾರಿಗಳು ಇರುತ್ತಾರೆ. ಇರುವುದಿಲ್ಲವೆಂದು ನಾನು ಹೇಳುವುದಿಲ್ಲ. ಎಲ್ಲಾ ಸಂಭಾವಿತರು, ಸಜ್ಜನರು ಎಂದು ಹೇಳಲಿಕ್ಕೆ

ತಯಾರಿಲ್ಲ. ಆದರೆ ಇಲ್ಲಿಯೂ ಕೂಡ, ಅಲ್ಲಿ ಕೇಳಿಕೊಂಡಂಥ ಸಂದರ್ಭದಲ್ಲಿ, ಇಲ್ಲ ನಾನಿಲ್ಲಿ ಪ್ರತಿಭಟನೆ ಮಾಡುತ್ತೇನೆಂದು ಹೇಳಿದ್ದಾರೆ. ಅಷ್ಟೋತ್ತಿಗೆ ಕತ್ತಲೆಯಾಗಿದೆ. ಕತ್ತಲೆಯಾದಂಥ ಸಂದರ್ಭದಲ್ಲಿ ಉಭಯ ಗುಂಪಿನಲ್ಲಿರತಕ್ಕಂಥ ಕಿಡಿಗೇಡಿಗಳು, ಸಮಾಜ ಘಾತುಕ ಶಕ್ತಿಗಳು, ಅಲ್ಲಿನ ಬಸ್‌ಗಳಿಗೆ ಕಲ್ಲನ್ನು ಹೊಡೆದು, ಅಲ್ಲೆಲ್ಲಾ ಗಾಜನ್ನು ಪುಡಿ ಪುಡಿ ಮಾಡಿದ್ದಾರೆ. ಒಂದು ಪ್ರಕ್ಷುಬ್ಧ ಪರಿಸ್ಥಿತಿಯನ್ನು ಅಲ್ಲಿ ಸೃಷ್ಟಿ ಮಾಡಿದ್ದಾರೆ. ಆ ಸಂದರ್ಭದಲ್ಲಿ ಇವರೇನು ಮಾಡಿದ್ದಾರೆ, ನೀವು Police Act ಕೆಳಗೆ, ಅವರು ಹೇಳುತ್ತಾರೆ. "All persons shall be bound to conform to the reasonable diretions of a Police Officer given fulfill-ment of any of his duties under this Act". ದಯವಿಟ್ಟು ತಾವು ಅಲ್ಲಿಂದ ನಿರ್ಗಮಿಸಬೇಕೆಂದು ಹೇಳಿದಾಗ, ಅನೇಕ ಸಂದರ್ಭದಲ್ಲಿ ಚಳುವಳಿ,. ಮತ್ತೊಂದು ಮಾಡಿದ್ದೇವೆ, ನಿರ್ಗಮಿಸಬೇಕಾದುದು ಕೂಡ ನಮ್ಮ ಅಧಿಕಾರವೆ, ಹಗೆ ೭೧ ರ ಕೆಳಗೆ ಕೂಡ Powers of Police Officer to restrain, remove, etc, -- " A Police Officer may restrain or remove any person resisting or refusing or omitting to conform to any di-rection referred to in section 70 and may either take such per-son before a (Judicial Magistrate)' or, in trivial cases, may relaese him when the occassion is past". ಇಲ್ಲಿ ಎರಡನೆಯದನ್ನು ಅವರು ಮಾಡಿದ್ದಾರೆ ಇಲ್ಲಿ ಮುಖ್ಯವಾಗಿರತಕ್ಕಂಥದ್ದು, "ದಯವಿಟ್ಟು ರಸ್ತಾ ರೋಖೋ ಮಾಡಬೇಡಿ, ಸಂಚಾರಕ್ಕೆ ತೊಂದರೆಯಾಗುತ್ತದೆ, ದಯವಿಟ್ಟು ರಸ್ತಾ ರೋಖೋ ಮಾಡಬೇಡಿ, ಸಂಚಾರಕ್ಕೆ ತೊಂದರೆಯಾಗತ್ತದೆ, ದಯವಿಟ್ಟು ಅಲ್ಲಿಂದ ನಿರ್ಗಮಿಸಿರಿ" ಎಂದು ವಿನಂತಿ ಮಾಡಿಕೊಂಡಿದ್ದಾರೆ, ಆಗ, ಇಲ್ಲ ನಾನು ಸತ್ಯಾಗ್ರಹ ಮಾಡತಕ್ಕಂಥದ್ದು ನನ್ನ ಅಧಿಕಾರ. ನಾನು ಮಾಡುತ್ತೇನೆ" ಎಂದು ಅವರು ಮತ್ತು ಅವರ ಹಿಂಬಾಲಕರು ಹೇಳಿದಾಗ, ದಯವಿಟ್ಟು ಆ ಸ್ಥಾನದಿಂದ ತಾವು ಹೋಗಬೇಕೆಂದು ಅವರನ್ನು ಕರೆದುಕೊಂಡು ಬಂದಿದ್ದಾರೆ. arrest ಎನ್ನತಕ್ಕಂಥದ್ದು ಬೇರೆ. re-straint ಎನ್ನತಕ್ಕಂಥದ್ದು ಬೇರೆ. ನಮ್ಮನ್ನು ನಿಯಂತ್ರಿಸಬೇಕಾದುದು ಬೇರೆ, ಬಂಧಿಸತಕ್ಕಂಥದ್ದು ಬೇರೆ. ಬಂಧಿಸದೇ ಇರತಕ್ಕಂಥ ಕಾರಣಕ್ಕಾಗಿಯೇ ಅವರನ್ನು ಕರೆದುಕೊಂಡು ಬಂದು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿಲ್ಲ. DAR

ಕಾಂಪೌಂಡ್ ನಲ್ಲಿರುವಂಥ ಕಲ್ಯಾಣ ಮಂಟಪದಲ್ಲಿ ಅವರಿಗೂ ಕೂಡ ಇಷ್ಟು ವರ್ಷ ಒಬ್ಬ ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದಂಥ, ಕನ್ನಡ ನಾಡಿನಲ್ಲಿ ಒಂದು ಪರ್ಯಾಯ ಶಕ್ತಿಯಾಗಿ ಬೆಳೆದಂಥ ನಾಯಕತ್ವದ ಬಗ್ಗೆ ಯಾರಾದರೂ ಸ್ವಲ್ಪ ತಿಳುವಳಿಕೆ ಇರತಕ್ಕಂಥ ಅಧಿಕಾರಿಯೂ ಕೂಡ ಗೌರವವನ್ನು ಕೊಡುತ್ತಾನೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಆ ರೀತಿ ಆಗದೇ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ, ಅವರು ಬಂದು ಅವರನ್ನು ಕಲ್ಯಾಣ ಮಂಟಪದಲ್ಲಿ ಕೂಡಿಸಿದ್ದಾರೆ. ನಂತರ ತಾವು ಇಲ್ಲಿಂದ ಹೋಗಬೇಕೆಂದು ಹೇಳಿದ್ದಾರೆ. ಆ ಸಂದರ್ಭದಲ್ಲಿ ಸುಮಾರು ಹನ್ನೊಂದೂವರೆ ಗಂಟೆಗೆ ಮಾಜಿ ಮಂತ್ರಿಗಳಾದ ಸನ್ಮಾನ್ಯ ಹೆಚ್.ಸಿ. ಮಹಾದೇವಪ್ಪನವರು ನನಗೆ ಫೋನು ಮಾಡಿದರು. ಅವರು ಬಹಳ ಭಾವೋದ್ವೇಗಕ್ಕೆ ಒಳಗಾಗಿದ್ದರು, ನನಗೆ ಫೋನು ಮಾಡಿ ಅವರು ಉದ್ಧಟತನದಲ್ಲಿ ವರ್ತಿಸಿದ್ದಾರೆಂದು ಹೇಳಿದರು. ಈ ರೀತಿಯಾಗಿ ನಮ್ಮನ್ನು ಬಂಧಿಸಿ ತಂದಿಟ್ಟಿದ್ದಾರೆ, ಅವರನ್ನು ಈ ಕೂಡಲೇ suspend ಮಾಡಬೇಕೆಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ನಿಮಗೆಲ್ಲರಿಗೂ ಕೂಡ ಗೊತ್ತಿದೆ, ಯಾವುದೇ ಒಬ್ಬ ಅಧಿಕಾರಿಯನ್ನು ತತ್‌ಕ್ಷಣವೇ ಅಮಾನತ್ತಿನಲ್ಲಿಡಲು ಬರುವುದಿಲ್ಲ. ನಾನು ಖಂಡಿತವಾಗಿಯೂ ವರದಿಯನ್ನು ತರಿಸಿಕೊಳ್ಳುತ್ತೇನೆ. ಆದ್ದರಿಂದ ತಮ್ಮನ್ನು ಯಾರು ಬಂಧಿಸಿಲ್ಲ ಬಿಟ್ಟುಬಿಡಿ ಎಂದು ಹೇಳಿದ್ದಾರೆ. ದಯವಿಟ್ಟು ಅಲ್ಲಿಂದ ನಿರ್ಗಮಿಸಿ ನಮಗೆ ಸಹಕಾರ ಕೊಡಿ, ಈ ವಿಚಾರದಲ್ಲಿ ತನಿಖೆ ಮಾಡುತ್ತೇವೆ. ಉನ್ನತ ಅಧಿಕಾರಗಳಾದ ಕಮಿಷನರ್ ಕಡೆಯಿಂದ ವರದಿಯನ್ನು ತರಿಸಿಕೊಂಡ ಮೇಲೆ ನಾನು ಖಂಡಿತವಾಗಿ ಅದರಲ್ಲಿ ಸೂಕ್ತವೆಂದು ಕಂಡುಬಂದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಕೂಡ ಮಾನ್ಯ ಹೆಚ್. ಸಿ. ಮಹಾದೇವಪ್ಪ ನವರಿಗೆ ನಾನು ತಿಳಿಸಿದೆ. ಪ್ರಯಶಃ ಆ ಸಂಧರ್ಭದಲ್ಲಿ ಹೇಳಿದರು. ನಾವು ಇನ್ನು ನಮ್ಮ ಜೊತೆಗಾರರ ಜೊತೆಯಲ್ಲಿ ಮಾತನಾಡಿ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದರು. ಇದು ಮರೆಯಬಹುದಾದಂಥ, ಉಪೇಕ್ಷಿಸಬಹುದಾದ ಘಟನೆ. ಉಪೇಕ್ಷಿಸಬಾರದಂಥ ಒಂದು ಘಟನೆ ಎಂದ ತಕ್ಷಣವೇ ಆ ಪೊಲೀಸ್ ಅಧಿಕಾರಿ ತನ್ನ ವಿವೇಚನೆಯ ಮೂಲಕ ತಾವು ಇಲ್ಲಿಂದ ಹೋಗಿ ಬಿಡಿ ಎಂದು ಹೇಳಲಿಕ್ಕೆ ಬರುತ್ತದೆ. ಆದ್ದರಿಂದ, ಇಲ್ಲಿ ಅವರು ತಪ್ಪಾಗಿ ಭಾವಿಸಿಕೊಂಡಿರತಕ್ಕಂಥದ್ದು. ಅದನ್ನು arrest ಎಂದು ಭಾವಿಸಿಕೊಂಡಿರಬಹುದು. DAR van ನಲ್ಲಿ ಏಕೆ ತಂದರು ಎಂದರೆ, ನಮ್ಮನ್ನು ಇಲ್ಲಿಂದ ತೆಗೆದುಕೊಂಡು ಹೋಗುತ್ತೇವೆ ಎನ್ನುವುದಾದರೆ,

ನಮ್ಮನ್ನು van ನಲ್ಲಿ ಕರೆದುಕೊಂಡು ಹೋಗಿ ಎಂದು ಒತ್ತಾಯ ಮಾಡಿದ್ದಾರೆ. ಅದರಲ್ಲಿ ಉಪಾಧ್ಯಕ್ಷರಾಗಿರತಕ್ಕಂಥ ಮರೀಗೌಡ ಎನ್ನತಕ್ಕಂಥವರು ಇದು ಆಗಲೇಬೇಕು ಎಂದು, ಅಲ್ಲಿನ ಹೆಚ್ಚುವರಿ ಪೊಲೀಸ್ ನವರು ಹೇಳಿದ್ದಾರೆ. ಬೇರೆ ಅಧಿಕಾರಿಗಳು ಕೂಡ ಹೇಳಿದ್ದಾರೆ. ಈ ವಿಚಾರ ಗೊತ್ತಾದ ಮೇಲೆ ಅಲ್ಲಿ ಒಂದು ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗುತ್ತಿದೆಂದು ಜಿಲ್ಲಾಧಿಕಾರಿ ಮತ್ತು ಅಲ್ಲಿರತಕ್ಕಂಥ ಉಭಯಮಿತ್ರರು ಮತ್ತು ತಹಶೀಲ್ದಾರ್ ರವರು ೧೪೪ ಕಲಂ ಅನ್ನು ಘೋಷಣೆ ಮಾಡಿದ್ದಾರೆ. ೧೪೪ ಘೋಷಣೆ ಮಾಡಿದಾಗ ಇಂಥ ವಿಚಾರಗಳಲ್ಲಿ ಎಷ್ಟು ಸೂಕ್ಷ್ಮತೆ ಇರುತ್ತದೆ ಎಂದರೆ, ಆ ಸೂಕ್ಷ್ಮತೆಯನ್ನು ಗ್ರಹಿಸುವ ಶಕ್ತಿಯನ್ನು ನಾವ್ಯಾರು ಪಡೆದುಕೊಂಡಿಲ್ಲ. ನಾವಿನ್ನು ರಾಗ ದ್ವೇಷಗಳಿಗೆ ಒಳಗಾಗಿದ್ದೇವೆ. ಮಹಾತ್ಮ ಗಾಂಧೀಜಿ ಯವರು ಕರ ನಿರಾಕರಣೆಯ ಸಂದರ್ಭದಲ್ಲಿ ಅವರನ್ನು ದಸ್ತಿಗಿರಿ ಮಾಡಿ...

ಶ್ರೀ ಧರ್ಮಸಿಂಗ್ : ಮಹಾತ್ಮಗಾಂಧೀಜಿಯವರ ವಿಚಾರಕ್ಕೆ ಏಕೆ ಹೋಗುತ್ತೀರಿ?

ಶ್ರೀ ಎಂ. ಪಿ. ಪ್ರಕಾಶ್ : ಸಾರ್ ಇಲ್ಲಿ ಅದನ್ನು ಹೇಳಬೇಕಾಗುತ್ತದೆ. ಏಕೆ ಹೋಗಬೇಕೆಂದರೆ, ಅದನ್ನು ಇಲ್ಲಿಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಅದರಲ್ಲಿ ಏನು ನಡೆಯಿತು ಎಂಬುದನ್ನು ಹೇಳುತ್ತೇನೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಪಾರ್ಟಿಯವರೇ ಇವತ್ತು ನಿಮಗೊಂದು ಪತ್ರ ಬರೆದಿದ್ದಾರೆ, ಏಕೆ ರಾಜೀನಾಮೆ ಕೊಟ್ಟಿದ್ದಾರೆಂದು ಒಬ್ಬ ಸಚಿವರೇ ರಾಜೀನಾಮೆ ಕೊಟ್ಟಿದ್ದಾರೆ. ಅದು ಯಾರು ಕೊಟ್ಟಿದ್ದಾರೊ ಗೊತ್ತಿಲ್ಲ. ನಾನು ತಮಗೆ ಕಳುಹಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ನೋಡಿ ಒಂದು ವಿಚಾರದಲ್ಲಿ ಮತ್ತೊಂದು ವಿಚಾರವನ್ನು ಸೇರಿಸಬೇಡಿ. ಅದನ್ನು ಆಮೇಲೆ ಹೇಳಿ, ಇದಕ್ಕೂ ಅದಕ್ಕೂ ಏನು ಸಂಬಂಧ ? ನಾನು ಗಾಂಧೀಜಿಯ ದಸ್ತಗಿರಿ ವಿಚಾರ ಹೇಳಿದರೆ ಮಾತನಾಡಬೇಡಿ

ಎಂದು ಹೇಳುತ್ತೀರಿ, ಯಾರೋ ರಾಜೀನಾಮೆ ಕೊಟ್ಟಿರತಕ್ಕಂಥದ್ದರ ಬಗ್ಗೆ ಇಲ್ಲಿ ಹೇಳಿದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾತನಾಡಬೇಡಿ ಎಂದೂ ಹೇಳಲಿಲ್ಲ. ಪೊಲೀಸ್ ರಾಜ್ಯದಲ್ಲಿ ಗಾಂಧೀಜಿಯನ್ನು ಏಕೆ ತರುತ್ತೀರಿ ಎಂದು ಹೇಳಿದೆವು. ಅವರು ಯಾವ ರೀತಿ ನಡೆದುಕೊಂಡಿದ್ದಾರೆ ಅದನ್ನು ನೀವು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಅದನ್ನೇ ಹೇಳುತ್ತೇನೆ. ಮಹಾತ್ಮಗಾಂಧೀಜಿಯವರನ್ನು ಕರ ನಿರಾಕರಣೆಯ ವಿರುದ್ಧವಾಗಿ ದಸ್ತಗಿರಿ ಮಾಡಿದಂಥ ಸಂದರ್ಭದಲ್ಲಿ ಅವರನ್ನು ಸೆರಮನೆಗೆ ಕಳುಹಿಸುತ್ತಾರೆ. ಸೆರಮನೆಯಲ್ಲಿ ಹೋದಾಗ ಮಹಾತ್ಮ ಗಾಂಧೀಜಿಯವರು ತಮ್ಮ ಅನುಯಾಯಿಗಳಿಗೆ ಹೇಳುತ್ತಾರೆ, ಜೈಲಿನ ಕಾನೂನುಗಳನ್ನು ಮುರಿಯಬೇಡಿ, ನೀವು ಪತ್ರಿಕೆಗಳನ್ನು ತರಿಸಿಕೊಳ್ಳುವುದು, ಆಹಾರವನ್ನು ತರಿಸಿಕೊಳ್ಳುವುದು, ಜೈಲಿನ ವಾರ್ಡನ್‌ರವರು ನಿಬಂಧನೆಗಳನ್ನು ಹೇಳಿದಾಗ ನೀವು ನಿರಾಕರಿಸಬಾರದೆಂದು ಹೇಳುತ್ತಾರೆ. ಆಗ ನೆಹರೂರವರು ಪ್ರಶ್ನೆ ಮಾಡುತ್ತಾರೆ.

ಶ್ರೀ ಧರ್ಮಸಿಂಗ್ : You are the Home Minister of the State. ಆ ಮುರುಗವ್‌ಗೆ, ಚೆಲುವರಾಜುಗೆ ಮಹಾತ್ಮ ಗಾಂಧೀಜಿಯುವರನ್ನು ಹೋಲಿಸುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್ : ನಾನು ಹೋಲಿಸಿದೆನೆ ? ನಾನು ಹೋಲಿಸಿದೆನೆ ? ನಮಗೆ ನಾವು ಹೋಲಿಸಿಕೊಳ್ಳುತ್ತಿದ್ದೇವೆ. ಈ ದೇಶದಲ್ಲಿ ಗಾಂಧೀಜಿಯ ಮಟ್ಟಕ್ಕೆ ಏರುತಕ್ಕಂಥವರು ಯಾರು ಇಲ್ಲ. ಗಾಂಧೀಜಿಯ ಹೆಸರನ್ನು ಹೇಳಿಕೊಂಡಿರತಕ್ಕಂಥವರು ಕೆಲವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ : ಅದನ್ನು ೧೦೦% admit ಮಾಡಿಕೊಳ್ಳುತ್ತೇನೆ. ನಾನು ಗಾಂಧಿಯಾಗುವುದಕ್ಕೆ ಸಾಧ್ಯವಾಗಲ್ಲ. ನೀವು ಗಾಂಧಿಯಾಗುವುದಕ್ಕೆ ಸಾಧ್ಯವಾಗಲ್ಲ ಯಾರು ಆಗುವುದಕ್ಕೆ ಆಗುವುದಿಲ್ಲ. ಈ ದೇಶದಲ್ಲಿ ಯಾರು ಆಗುವುದಕ್ಕೆ ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಹೌದು, ಅದಕ್ಕಾಗಿ ಹೇಳಿದೆ, ನಾವು ಇನ್ನೂ ಮಾಡುವುದಕ್ಕೆ ಆಗಿಲ್ಲ. ಅದನ್ನೇ ನಾನು ಹೇಳಿದೆ. ಗಾಂಧೀಜಿಯ ಮಾತುಗಳಲ್ಲಿ ಬಹಳ ಸೂಕ್ಷ್ಮವಾದ ವಿಚಾರಗಳನ್ನು ಹೇಳಿದರು. ನೆಹರೂರವರು ಪ್ರಶ್ನೆ ಕೇಳುತ್ತಾರೆ. ನೀವು ಕರ ನಿರಾಕರಣೆ ವಿರುದ್ಧ ಕಾನೂನು ಬಾಹಿರ ಚಳುವಳಿಯನ್ನು ಮಾಡಿ ಅದರ ವಿರುದ್ಧವಾಗಿ ಬಂದು ಸೆರಮನೆ ಸೇರಿದ ಮೇಲೆ ಮೆರಮನೆಯ ಕಾನೂನುಗಳನ್ನು ಉಲ್ಲಂಘಿಸಬಾರದು ಎಂದು ಹೇಳುತ್ತಿರಲ್ಲಾ ಇದು ಏನು? ಎಂದು ಪ್ರಶ್ನಿಸುತ್ತಾರೆ. ಯಾವ ವಿಷಯ ನಿರ್ಧಿಷ್ಟವಾಗಿರುತ್ತದೆಯೊ ಅಷ್ಟಕ್ಕೆ ಮಾತ್ರ ನಾವು ಮಾಡಬೇಕು. ಉಳಿದಂತೆ ಕಾನೂನಿಗೆ ಅನುಗುಣವಾದಂಥ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಮಹಾತ್ಮ ಗಾಂಧೀಜಿಯವರು ಹೇಳುತ್ತಾರೆ. ಆ ಮಟ್ಟಕ್ಕೆ ನಾವ್ಯಾರು ಬಂದಿಲ್ಲ. ಗಾಂಧೀಜಿಯವರ ಹೆಸರು ಇವತ್ತು ಏನಾಗಿದೆಂದರೆ, ಕೆಲವೇ ಕೆಲವು ಜನಗಳು ಉಪಯೋಗಿಸತಕ್ಕಂಥ ವಸ್ತುವಾಗಿದೆ. ಇದು ದುರ್ವೈದ ೦ಗತಿ ಮತ್ತು ಈ ದೇಶದ ದುರಂತ ಕೂಡ ಆಗಿದೆ. ಇಲ್ಲಿನ ತಾಲ್ಲೂಕು ವ್ಯಾಪ್ತಿಯಲ್ಲಿ ಅವತ್ತಿನ ದಿವಸ ೫ ಸರ್ಕಾರಿ ಬಸ್ ಗಳು, ೩ ಪೋಲೀಸ್ ವಾಹನಗಳು ಹಾಗೂ ಒಂದು ಅಗ್ನಿಶಾಮಕದಳದ ವಾಹನವನ್ನು ಸುಟ್ಟು ಹಾಕಿರುತ್ತಾರೆ. ಈ ಹಿಂಸಾತ್ಮಕ ಘಟನೆಗಳ ಬಗ್ಗೆ ಕೇವಲ ಅಪರಾಧಗಳನ್ನು ಈಗ ದಾಖಲಿಸಿಕೊಂಡಿದ್ದೇವೆ. ಮತ್ತೆ ೩೪ ಜನ ದುಷ್ಕರ್ಮಿಗಳನ್ನು ಬಂಧಿಸಿದ್ದೇವೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಇಂಥ ವಿಚಾರಗಳ ಬಗ್ಗೆ ಸ್ವಲ್ಪ ತಾಳ್ಮೆ ಮತ್ತು ವಿವೇಚನೆ ಎನ್ನತಕ್ಕಂಥದು ಇರಬೇಕಾಗುತ್ತದೆ. ಇಲ್ಲಿ ಇಲಾಖಾ ಕಾರ್ಯಕ್ರಮ ಇರಲಿಲ್ಲ. ಆ ಕಾರಣಕ್ಕಾಗಿ ಅಲ್ಲಿ ಏನು ನಡೆದಿದೆ ಎನ್ನತಕ್ಕಂಥ ದೌರ್ಜನ್ಯ, ದಬ್ಬಾಳಿಕೆ ಆಗಿದೆ ಎಂಬುದರ ಬಗ್ಗೆ ನನಗೆ ಈಗ ಬಂದಿರತಕ್ಕಂಥ ಮಾಹಿತಿಯಾಗಲಿ, ಈ ವಿಚಾರದಲ್ಲಿ ನಿಜವಾಗಿಯೂ ಕೂಡ ಮಾನ್ಯ ಸಿದ್ದರಾಮಯ್ಯನಂಥವರಿಗೆ ಗೌರವವನ್ನು ಕೊಡಬೇಕಾಗಿರತಕ್ಕಂಥದು ಅಗತ್ಯ. ಅವರು ಒಬ್ಬರೇ ಅಲ್ಲ, ಈ ದೇಶದ ಯಾರೊಬ್ಬ ಪ್ರಜೆಗೆ ನಾವು ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಅಥವಾ ಅಧಿಕಾರದಲ್ಲಿ ಇಲ್ಲದೇ ಇದ್ದಂಥ ಸಂದರ್ಭವಾದರೂ ಕೂಡ ನಾವು ಅವರಿಗೆ ಗೌರವ ಕೊಡಬೇಕಾಗುತ್ತದೆ. ಇಲ್ಲಿ ಯಾವುದೇ ತರಹವಾದ ಹಕ್ಕುಚ್ಯುತಿಯಾಗಿಲ್ಲ. ಹಕ್ಕುಚ್ಯುತಿ ಆಗಿಲ್ಲದೇ ಇರುವುದರಿಂದ ಈ ವಿಚಾರವನ್ನು ಇಲ್ಲಿಗೆ ಕೈಬಿಡಬೇಕು. ಇದೊಂದು ಉಪೇಕ್ಷಿಸಲ್ಪಡುವಂಥ ಒಂದು ವಿಚಾರವೆಂದು ಹೇಳುತ್ತೇನೆ. ಮತ್ತು ಇದೊಂದು ಮಾರ್ಗದರ್ಶಿ ಸೂತ್ರವಾಗಿದೆ. ಈ ಸದನದ ಮೂಲಕ ಎಚ್ಚರಿಕೆ ಕೊಡುವುದೇನೆಂದರೆ, ಎಲ್ಲರೂ ಕೂಡ ತಮ್ಮ ತಮ್ಮ ಇತಿಮಿತಿಗಳಲ್ಲಿ

ತಾಳ್ಮೆಯನ್ನು ಕಳೆದುಕೊಳ್ಳಲಾರದೇ ನಮ್ಮ ಅಧಿಕಾರಿಗಳು ಅತ್ಯಂತ ವಿನಯದಿಂದ ಜನಪ್ರತಿನಿಧಿಗಳ ಜೊತೆ ಮತ್ತು ಸಾರ್ವಜನಿಕರ ಜೊತೆ ವರ್ತಿಸಬೇಕೆಂದು ಹೇಳುತ್ತೇನೆ. ಇದು ಎಲ್ಲಿ ಬೇಕಾದರು ಬಂದ್ ಆಗಬೇಕಾಗಿರತಕ್ಕಂಥ ವಿಷಯವಲ್ಲ. ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಹಿಂದೆ ಗೃಹ ಮಂತ್ರಿಗಳಾಗಿದ್ದರು. ಅವರೂ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಬಹಳ ಒಳ್ಳೆಯ ವಿಚಾರವನ್ನು, ಒಳ್ಳೆಯ ಮಾತನ್ನು ಹೇಳಿದರು. ನಾವು ಏನೂ ತಪ್ಪು ಮಾಡದೇ ಶಾಂತ ಪರಿಸ್ಥಿತಿಯಲ್ಲಿ ಪ್ರತಿಭಟನೆ ಮಾಡಿದರೂ ಕೂಡ ತುರ್ತು ಪರಿಸ್ಥಿತಿ ಕಾಲದಲ್ಲಿ ನಮ್ಮ ಆಜನ್ಮಸಿದ್ಧ ಹಕ್ಕನ್ನು ನೀವು ಮೊಟಕುಗೊಳಿಸಿದ್ದೀರೆಂದು ೧೮ ತಿಂಗಳ ಕಾಲ ನಮ್ಮನ್ನು ಜೈಲಿಗೆ ಹಾಕಿದ್ದೀರೆಂದು ಹೇಳಿದರು. ಜೈಲಿಗೆ ಹಾಕಿದಾಗ ನೀವು ಕೂಡ ಅಲ್ಲಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಜೈಲಿಗೆ ಹಾಕಿದಾಗ ಬಹಳ ಒಳ್ಳೆಯ ರೀತಿಯಲ್ಲಿ ನೋಡಿಕೊಂಡಿದ್ದಾರೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಇರಬಹುದು, ಇಲ್ಲವೆಂದು ನಾನು ಹೇಳಿಲ್ಲ.

(ಗೊಂದಲ)

ಶ್ರೀ ಕೆ.ಜಿ. ಬೊಪಯ್ಯ : ಆ ಸಮಯದಲ್ಲಿ ಒಳ್ಳೆಯ ಅಥವಾ ಕೆಟ್ಟ ರೀತಿಯಲ್ಲಿ ನೋಡಿಕೊಂಡರೆಂದು ನಮಗೆ ಗೊತ್ತಿದೆ. ಬಟ್ಟೆ ಬಿಚ್ಚಿ ದನಗಳಿಗೆ ಹೊಡೆದ ಹಾಗೆ ಹೊಡಿದ್ದಿದ್ದಾರೆ.

(ಗೊಂದಲ)

ಅಧ್ಯಕ್ಷರು : ಆಯಿತು, ಎಲ್ಲರು ಕುಳಿತುಕೊಳ್ಳಿ. ಈಗ ಅವರು ಉತ್ತರ ಕೊಡಲಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ತಮ್ಮ ಅನುಭವದ ಹಿನ್ನಲೆಯನ್ನು ಹೇಳಿದ್ದಾರೆ. ಆದ್ದರಿಂದ ಯಾವುದೇ ಅಧಿಕಾರ ಶಾಶ್ವತವಲ್ಲ.

ನಾವು ಇಲ್ಲಿರತಕ್ಕಂಥವರು ನಾಳೆ ದಿವಸ ಅಲ್ಲಿರಬಹುದು ಮತ್ತೆ ಜನ ಸೋಲಿಸಿದರೆ ಅಲ್ಲಿ, ಇಲ್ಲಿ ಇಲ್ಲದೇ ಹೊರಗಡೆ ಕೂಡ ಇರಬಹುದು. ಆದರೆ, ಮಾನ್ಯ ಖರ್ಗೆಯವರು ಮತ್ತು ಮಾನ್ಯ ಧರ್ಮಸಿಂಗ್‌ರವರು ೮ ಸಲ ಗೆದ್ದಿದ್ದಾರೆ ಮತ್ತೆ ಮಾನ್ಯ ದೇಶಪಾಂಡೆ ಮತ್ತು ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ೬ ಸಲ ಗೆದ್ದಿದ್ದೀರಿ. ಉಳಿದವರೆಲ್ಲ ಸೋತಿದ್ದೇವೆ ಮತ್ತೆ ಗೆದ್ದಿದ್ದೇವೆ. ನೀವು ಮಾನ್ಯ ದೇವೇಗೌಡರಂಥವರನ್ನು ಸೋಲಿಸಿ ಗೆದ್ದು ಬಂದಿದ್ದೀರಿ. ಆದ್ದರಿಂದ, ನೀವು ೬ ಜನರು ಇದುವರೆಗೂ ಸೋಲಿನ ಕಹಿಯನ್ನು ನೀವು ಉಂಡಿಲ್ಲ. ಜನ ನಮ್ಮನ್ನು ಯಾವಾಗ ಸೋಲಿಸುತ್ತಾರೆ. ಯಾವಾಗ ಗೆಲ್ಲಿಸುತ್ತಾರೆ ಎನ್ನತಕ್ಕಂಥದು ನಮಗೆ ಗೊತ್ತಾಗುವುದಿಲ್ಲ. ಆದ್ದರಿಂದ ನೀವು ಹೇಳಿದ ಮಾತುಗಳನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ಯಾವುದೂ ಕೂಡ ಶಾಶ್ವತವಲ್ಲ ಎಂಬ ಕಾರಣ ಇರುವುದರಿಂದ ಯಾವುದೇ ಅಧಿಕಾರಿಗಳು ಉದ್ಧಟತನದಿಂದ ವರ್ತಿಸಬಾರದು, ಈ ಬಗ್ಗೆ ವೈಯಕ್ತಿಕವಾಗಿ ಏನಾದರು ಇಂಥ ಘಟನೆ ನಡೆದಿದ್ದರೆ, ಆ ರೀತಿಯ ಘಟನೆ ನಡೆದಿಲ್ಲವೆಂಬ ವರದಿ ನಮಗೆ ಬಂದಿದೆ. ಆದ್ದರಿಂದ ಹಕ್ಕುಚ್ಯುತಿ ಇಲ್ಲಿ ಉಂಟಾಗಿಲ್ಲ. ಹಕ್ಕುಚ್ಯುತಿ ಇಲ್ಲಿ ಉಂಟಾಗಿಲ್ಲದೇ ಇರುವುದರಿಂದ ತಾವು ಇದನ್ನು ತಿರಸ್ಕರಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮುಂದಿನದರ ಬಗ್ಗೆ ತಮ್ಮ ವಿವೇಚನೆಗೆ ಬಿಡಿಸಲಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಜೀವರಾಜ್ ಕೇಸ್‌ನಲ್ಲಿಯೂ ಕೂಡ ಹಕ್ಕುಚ್ಯುತಿಗೆ ರೆಫರ್ ಮಾಡಲಾಗಿತ್ತು. ಆದ್ದರಿಮದ ಈ ಕೇಸ್ ನಲ್ಲಿ ನಾವು ಕೇಳಿಕೊಳ್ಳುವುದೇನೆಂದರೆ, ಇದನ್ನು ಹಕ್ಕುಚ್ಯುತಿಗೆ ರೆಫರ್ ಮಾಡಿ. ಮತ್ತೆ ಡಿವೈ ಎಸ್ ಪಿ ಮತ್ತು ಎಸ್ ಪಿ ಯವರನ್ನು ಸಸ್ಪೆಂಡ್ ಮಾಡಿ ಎಂದು ನಾವು ಕೇಳಿದ್ದೇವೆ. ಏಕೆಂದರೆ, ಈಗಾಗಲೇ ಮಾನ್ಯ ಸಿದ್ದರಾಮಯ್ಯನವರು ೭ ಕಾರಣಗಳನ್ನು ಕೊಟ್ಟಿದ್ದಾರೆ. ಅದು ತಮಗೆ ಮನವರಿಕೆಯಾಗಿರಬೆಕು. ಆದರೆ, ಇಲ್ಲಿ ಏನಾಗಿದೆಂದರೆ, ದುರ್ದೈವದಿಂದ ಯಾವುದೇ ರೀತಿಯಿಂದ ಇದರ ಬಗ್ಗೆ ಡಿಫೈಂಡ್ ಮಾಡಬೇಕೆಂಬ ದೃಷ್ಟಿಯಿಂದ ನೀವು ಇದರ ಬಗ್ಗೆ ಡಿಫೈಂಡ್ ಮಾಡುತ್ತಿದ್ದೀರಾ ಹೊರತಾಗಿ ಅವರ ನಡವಳಿಕೆ ನೋಡಿದರೆ ನೀವು ಖಂಡಿತವಾಗಿ ಅವರನ್ನು ಸಸ್ಪೆಂಡ್ ಮಾಡಬೇಕಾಗುತ್ತದೆ. ಆದ್ದರಿಂದ ಅವರನ್ನು ಸಸ್ಪೆಂಡ್ ಮಾಡಿ ಇದನ್ನು ಹಕ್ಕುಚ್ಯುತಿಗೆ ರೆಫರ್ ಮಾಡಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ಇದನ್ನು ಹಕ್ಕುಚ್ಯುತಿಗೆ ರೆಫರ್ ಮಾಡತಕ್ಕಂಥದು ನಿಮ್ಮ ಅಧಿಕಾರಕ್ಕೆ ಬಿಟ್ಟಂಥ ವಿಷಯ. ಈ ತರಹದ ಘಟನೆಗಳು ಆಗಬಾರದು. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ತಾವು ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು. ಕೆಲವೊಂದು ಸಮಯದಲ್ಲಿ ನಮ್ಮಂಥವರು, ನಿಮ್ಮಂಥವರು ಜಿಲ್ಲಾಪಂಚಾಯತ್‌ನವರಿಗೆ ನೀವೇ ಸಮಾರಂಭವನ್ನು ಮಾಡಿಕೊಳ್ಳಿ ಎಂದು ಹೇಳಿಬಿಡುತ್ತೇವೆ. ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಮಾನ್ಯ ಮೋಹನ್ ಶೆಟ್ಟಿಯವರಿಗೂ ಸಹ ಗೊತ್ತಿದೆ. ನಮ್ಮ ಜಿಲ್ಲೆಯ ಮಾನ್ಯ ಜಿಲ್ಲಾ ಮಂತ್ರಿಗಳು ಕೆಡಿಪಿ ಸಭೆಯಲ್ಲಿ ಒಂದು ಆದೇಶ ಮಾಡಿದ್ದಾರೆ. ಅದೇನೆಂದರೆ, ಈ ಜಿಲ್ಲೆಯ ಯಾವುದೇ ಕ್ಷೇತ್ರದಲ್ಲಿ ಏನಾದರು ಉದ್ಘಾಟನೆ ಮಾಡಬೇಕಾದರೆ ನನ್ನನ್ನು ಕೇಳಿ ಮಾಡಿ ಎಂದು ಹೇಳಿದ್ದಾರಂತೆ. ಇದು ಸರಿಯಲ್ಲ, ನಾವು ಅವರ ಗಮನಕ್ಕೆ ಇದನ್ನು ತಂದೆವು. ಇದು ನನಗೆ ಗೊತ್ತಾಗಲಿಲ್ಲವೆಂದು ಅವರು ಒಪ್ಪಿಕೊಂಡರು. ೨ ಲಕ್ಷ ರೂಪಾಯಿಗಳ ೩ ಮೀಟರ್ ಕೆಲಸವೆಲ್ಲವನ್ನು ಜಿಲ್ಲಾ ಮಂತ್ರಿಗಳನ್ನು ಕೇಳಿ ಮಾಡುವುದಕ್ಕೆ ಆಗುವುದಿಲ್ಲ. ಪ್ರತಿಯೊಂದನ್ನು ಜಿಲ್ಲಾ ಮಂತ್ರಿಗಳು ಉದ್ಘಾಟನೆ ಮಾಡುತ್ತಾ ಹೋದರೆ ಜಿಲ್ಲಾ ಮಂತ್ರಿಗಳು ಒಂದೊಂದು ಕ್ಷೇತ್ರದಲ್ಲಿ ೧೫ ದಿವಸ ಉಳಿಯಬೇಕಾಗುತ್ತದೆ. ಇದರಿಂದ ನಿಮಗೆ ತೊಂದರೆ ಆಗುತ್ತದೆಂದು ನಾನು ಹೇಳುತ್ತಿದ್ದೇನೆ. ಆದ್ದರಿಂದ, ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಹಾಗೆಯೇ ಸರಿಯಾದ ಮಾರ್ಗದರ್ಶನ ಮಾಡ ಬೇಕಾಗುತ್ತದೆ. ಇಲ್ಲದಿದ್ದರೆ, ಈ ರೀತಿಯಾದ ಘಟನೆಗಳು ಆಗುತ್ತಲೇ ಹೋಗುತ್ತವೆ.

ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಶಾಂತಿಯುತವಾಗಿ, ಏನೊಂದು ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ, ಸಂವಿಧಾನ ಬದ್ಧವಾಗಿ ೨೨೫ ಜನ ಶಾಸಕರು ಇಲ್ಲಿಗೆ ಗೆದ್ದು ಬಂದಿದ್ದೇವೆ. ಈ ಸದನದಲ್ಲಿ ಎಲ್ಲಾ ಶಾಸಕರಿಗೂ ಕೂಡ ಅಂದರೆ, ಕಾಂಗ್ರೆಸ್, ಬಿಜೆಪಿ ಮತ್ತು ಜನತಾ ದಳ ಪಕ್ಷದ ಸದಸ್ಯರಿರಬಹುದು. ಆದರೆ, ಸಂವಿಧಾನತ್ಮಕವಾಗಿ ಇಲ್ಲಿರತಕ್ಕಂಥ ಎಲ್ಲಾ ಶಾಸಕರಿಗೂ ಒಂದೇ ರೀತಿಯ ಅಧಿಕಾರ ಇರುತ್ತದೆ. ಅದೇ ರೀತಿಯಾಗಿ ಮಾನ್ಯ ಸಚಿವರಿಗೆ ಮತ್ತು ಲೋಕಸಭಾ ಸದಸ್ಯರಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ಯಾವ ರೀತಿಯಾದ ಅಧಿಕಾರ ಇರುತ್ತದೆಂಬುದರ ಬಗ್ಗೆ ಮತ್ತು ಜಿಲ್ಲಾ ಪಂಚಾಯಿತಿ,

ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯತಿ ವ್ಯವಸ್ಥೆಯಲ್ಲಿ ಪ್ರಜಾಪ್ರತಿನಿಧಿಗಳ ಕರ್ತವ್ಯ ಮತ್ತು ಶಿಷ್ಟಾಚಾರ ಏನು ಎನ್ನತಕ್ಕಂಥದ್ದು ಈಗಾಗಲೇ ನಿರೂಪಣೆಯಾಗಿದೆ. ಇದು ಸಂವಿಧಾನ ಬದ್ಧವಾಗಿ ಆಗಿದೆ. ಎಲ್ಲರೂ ಗಮನವನ್ನು ಹರಿಸತಕ್ಕಂಥ ರೀತಿಯಲ್ಲಿ ಇವತ್ತಿನ ದಿವಸ ಈ ವಿಷಯದ ಮೇಲಿನ ಶಾಂತಿಯುತವಾದ ಒಂದು ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಎಲ್ಲರೂ ಶಾಂತ ರೀತಿಯಿಂದ ಕೇಳುತ್ತಿದ್ದಾರೆ. ಇದರ ಬಗ್ಗೆ ಇನ್ನೂ ಚರ್ಚೆಯಾಗಬೇಕಾಗಿದೆ. ಆದ್ದರಿಂದ ತಾವು ಇನ್ನೂ ಅವಕಾಶ ಮಾಡಿಕೊಡಬೇಕು. ಈ ರೀತಿಯಿಂದ ಘಟನೆಗಳು ಮುಂದೆ ಶಾಶ್ವತವಾಗಿ ನಡೆಯಬಾರದು. ಅಧಿಕಾರಿಗಳ ಕರ್ತವ್ಯ ಏನು ಎನ್ನತಕ್ಕಂಥದನ್ನು ಕೂಡ ಕಾನೂನಿನಲ್ಲಿ ಅಳವಡಿಸಲಾಗಿದೆ. ಈಗ ನಾನು ತಮ್ಮಲ್ಲಿ ಹೇಳುವುದೇನೆಂದರೆ, ಮೈಸೂರು ತಾಲ್ಲೂಕಿನ ಜಯಪುರ ಗ್ರಾಮದಲ್ಲಿ ಏನು ಘಟನೆ ನಡೆದಿದೆ ಎನ್ನತಕ್ಕಂಥ ವಿಚಾರದ ಬಗ್ಗೆ ನನಗೆ ತಿಳಿದಿರತಕ್ಕಂಥ ಸತ್ಯಾಂಶವನ್ನು ಹೇಳುವಾಗ ಅದನ್ನು ಯಾರೂ ಕೂಡ ತಪ್ಪಾಗಿ ಭಾವಿಸಬಾರದು. ನಾನು ಹೇಳುವುದನ್ನು ಕೇಳಿ ಅನಂತರ ಅದಕ್ಕೆ ನೀವೂ ಕೂಡ ಉತ್ತರ ಹೇಳಿ. ನಾವೂ ಕೂಡ ಶಾಂತ ರೀತಿಯಿಂದ ಕೇಳಿದ್ದೇವೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಜಯಪುರ ಘಟನೆ ವಿಚಾರದಲ್ಲಿ ಆರೋಗ್ಯ ಇಲಾಖೆಯ...

(ಗೊಂದಲ)

ಶ್ರೀ ಆರ್. ದಿನೇಶ್ ಗುಂಡೂರಾವ್ : ಇವರೇನು ಸರ್ಕಾರದ ಪರವಾಗಿ ಉತ್ತರ ಹೇಳುತ್ತಿದ್ದಾರೆಯೇ?

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡಲಿ ಬಿಡಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಇದೇನು ಸರ್ಕಾರದ ಪರ ಉತ್ತರವೇ?

ಅಧ್ಯಕ್ಷರು : ತಾವೆಲ್ಲರೂ ಕುಳಿತುಕೊಳ್ಳಿ. ಅವರು ಮಾತನಾಡಲಿ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಿರಿಯ ಸದಸ್ಯರಿದ್ದಾರೆ. ಆದರೆ, ಕೇವಲ ಅವರು ಹೇಳುವುದನ್ನೇ ಕೇಳಬೇಕೆಂದರೆ ಅದು ಆಗುವುದಿಲ್ಲ ಇದು ಇವರ ಜಿಲ್ಲೆಗೆ ಸಂಬಂಧಪಟ್ಟಂಥ ವಿಷಯ. ಆದ್ದರಿಂದ ಅವರೂ ಕೂಡ ಹೇಳುವುದಕ್ಕೆ ಅವಕಾಶ ಕೊಡಬೇಕು. ಅವರು ಹೇಳಿದ್ದನೆ ಕೇಳಿಕೊಂಡು ಹೋಗುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ (ಮಾನ್ಯ ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದು. ಈ ವಿಷಯದಲ್ಲಿ ನನ್ನ ಹೆಸರನ್ನು ಎಳೆದಿದ್ದಾರೆ. ಇದು ಪತ್ರಿಕೆಗಳಲ್ಲಿ ಬಂದಿದೆ. ಪ್ರತಿಭಟನೆ ಮಾಡುವಂಥ ಸಂದರ್ಭದಲ್ಲಿ ನನ್ನ ಹೆಸರು ಹೇಳಿದ್ದಾರೆ. ಆದ್ದರಿಂದ. ನನಗೆ ತಿಳಿದಿರುವಂಥ ವಿಚಾರವನ್ನು ಹೇಳಬೇಕಾಗಿರುವುದರಿಂದ ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಾನು ಹೇಳತಕ್ಕಂಥ ವಿಚಾರ ಏನೆಂದರೆ , ನಾನು ಜಿಲ್ಲಾ ಉಸ್ತುವಾರಿ ಸಚಿವರಾದ ನಂತರ ಈ ಬಗ್ಗೆ ಹೇಳುವುದೇನೆಂದರೆ, ನನ್ನ ಜಿಲ್ಲೆಯ ಮಾನ್ಯ ಸೋಮಶೇಖರ್ ರವರು ಇಲ್ಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವನಾದ ಮೇಲೆ ನನ್ನ ಜಿಲ್ಲೆಯ ಕಾಂಗ್ರೆಸ್ ಮತ್ತು ಬಿಜೆಪಿ ಹಗೂ ಎಲ್ಲಾ ಶಾಸಕರು ಒಟ್ಟುಗೂಡಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಜಯಪುರ ವಿಚಾರದ ಬಗ್ಗೆ ಹೇಳುವುದಾದರೆ, ಆರೋಗ್ಯ ಇಲಾಖೆಯ ಇಂಜಿನಿಯರ್ ಒಬ್ಬರು ಬಂದು ಈ ಒಂದು ಕಾರ್ಯಕ್ರಮವನ್ನು ಮಾರ್ಚ್ ೯ ತಿಂಗಳೊಳಗಾಗಿ ಮಾಡಿದರೆ ಒಳ್ಳೆಯದೆಂದು ನನ್ನ ಹತ್ತಿರ ಬಂದು ಹೇಳಿದರು. ಮಾರ್ಚ್ ತಿಂಗಳಲಿ ಈ ಕಾರ್ಯಕ್ರಮ ಮಾಡುವುದಕ್ಕೆ ಆಗುತ್ತದೆಯೇ, ಇನ್ನು ಎರಡು ದಿವಸದಲ್ಲಿ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಯಾರಿಗೆ Invitation ಕೊಡುತ್ತೀರಿ? ಯಾರಿಗೂ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ, ನೀವೊಂದು ಕೆಲಸ ಮಾಡಿ ಅದೇನೆಂದರೆ, ಆ ಕ್ಷೇತ್ರದಲ್ಲಿ ಗೆದ್ದಿರತಕ್ಕಂಥ ಸನ್ಮಾನ್ಯ ಸಿದ್ದರಾಮಯ್ಯನವರನ್ನು ಕೇಳಿ, ಅವರು ಯಾವತ್ತು ನಿರ್ಣಯ

ಮಾಡುತ್ತಾರೆಯೋ ಅವತತಿನ ದಿವಸ ಆ ಸಭೆಯನ್ನು ಕರೆದು ನಿರ್ಣಯ ಮಾಡಿ ಎಂದು ನಾನು ಅವರಿಗೆ ಹೇಳಿ ಕಳುಹಿಸಿದ ಮೇಲೆ ಅವರು ಮತ್ತೆ ನನ್ನ ಬಳಿ ಬರಲಿಲ್ಲ. ಇದಾದ ಮೇಲೆ ಏನಾಗಿದೆ ಎಂದರೆ, ಜಯಪುರದಲ್ಲಿ ಗ್ರಾಮ ಸಂಪರ್ಕ ಸಭೆಯನ್ನು ನಡೆಸುತ್ತೇನೆಂದು ಜಿಲ್ಲಾ ಪಂಚಾಯತಿ ಉಪಾಧ್ಯಕ್ಷರಾಗಿದ್ದಂಥವರು ಅಲ್ಲಿ ಹೇಳಿದ್ದಾರೆ. ಆ ಒಂದು ಸಂದರ್ಭದಲ್ಲಿ ಶಂಕುಸ್ಥಾಪನೆ ಮಾಡಬೇಕೆಂದು ಹೇಳಿ, ಇವರು ನಿರ್ಣಯವನ್ನು ಮಾಡಿದ್ದಾರೆ. ಜಿಲ್ಲಾಧಿಕಾರಿಗಳಿಗೆ S.P. ಯವರಿಗೆ, ಜಿಲ್ಲಾ ಪಂಚಾಯತಿಯ ಮುಖ್ಯ ನಿರ್ವಹಣಾಧಿಕಾರಿಗಳಿಗೆ ಇವರೆಲ್ಲರಿಗೂ ಕೂಡ ಗ್ರಾಮಸ್ಥರು ಬಂದು ಭೇಟಿ ಮಾಡಿದ್ದಾರೆ. ಗ್ರಾಮ ಪಂಚಾಯತಿಯ ಅಧ್ಯಕ್ಷರು ಬಂದು ಭೇಟಿ ಮಾಡಿದ್ದಾರೆ. ಆ ಜಯಪುರ ಒಂದು ಹೋಬಳಿ ಗ್ರಾಮ, ಅಲ್ಲಿ ಹಿಂದುಳಿದ ವರ್ಗದ ನಮ್ಮ ಪಕ್ಷದ ಒಬ್ಬ ದೇವರಾಜು ಜವರನಾಯಕ ಎಂದು ಅಧ್ಯಕ್ಷರಿದ್ದಾರೆ. ಅವರು ಜಿಲ್ಲಾ ಪಂಚಾಯತಿ ಅಧಿಕಾರಿಗಳನ್ನು ಬಂದು ಭೇಟಿ ಮಾಡಿ, ನಮ್ಮನ್ನು ಕರೆದಿಲ್ಲ, ಈ ರೀತಿ ಮಾಡುತ್ತಿದ್ದಾರೆಂದು ಪ್ರಶ್ನೆ ಮಾಡಿ, ನಂತರ ಅವರು ನನ್ನ ಹತ್ತಿರ ಬಂದಿದ್ದಾರೆ. ನಾನು ಆಗ ಅವರನ್ನು ಕೆಳಿದೆ, ಇಲ್ಲಾ ಇಲ್ಲಾ ಕಾರ್ಯಕ್ರಮ ನಡೆಯುವುದಿಲ್ಲ. ಅವರು ಬರುವುದಿಲ್ಲವೆಂದು ಹೇಳಿದ್ದಾರೆ. ನಾವು ಅವರಿಗೆ ತಿಳಿಸಿದ್ದೇವೆ, ೩೧ನೇ ತಾರೀಖು ಈ ಕಾರ್ಯಕ್ರಮ ನಡೆಯುವುದಿಲ್ಲವೆನ್ನುವ ವಿಚಾರವನ್ನು ಅವರಿಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಕೊಟ್ಟಿರತಕ್ಕಂಥ ಪತ್ರಿಕೆಗಳಿಗೂ ಕೂಡ ಆರೋಗ್ಯ ಇಲಾಖೆಯ D.H.O. ರವರು ಕೂಡ ಈ ಕಾರ್ಯಕ್ರಮ ನಡೆಯುವ ಬಗ್ಗೆ ನಮಗೆ ಗೊತ್ತೆ ಇಲ್ಲ, ಪತ್ರಿಕೆಗೂ ಕೂಡ ಇಶ್ಯು ಮಾಡಿದ್ದಾರೆ. ಅಲ್ಲಿ ಕೂಡ ಕೊಟ್ಟಿರತಕ್ಕಂಥದ್ದನ್ನು ನಾನು ತಮಗೆ ಹೇಳುತ್ತೇನೆ. ಅದರೂ ಕೂಡ ಇವರು ಏಕೆ ಹೇಳಿದರು. ಬೆಳಿಗ್ಗೆಯಿಂದ ಏನೂ ಆಗಿರಲಿಲ್ಲ, ಮಧ್ಯಾಹ್ನದಿಂದ ಏನೂ ಆಗಿರಲಿಲ್ಲ, ಸಾಯಂಕಾಲ ಏಕೆ ಈ ರೀತಿಯಾಯಿತು ಎಂದು ಹೇಳಿದರು. ಅಲ್ಲಿ ಶಾಮಿಯಾನ ಹಾಕಲಿಕ್ಕೆ ಹೋದಾಗ ಇವರು ಪ್ರಶ್ನೆಯನ್ನು ಮಾಡಿದ್ದಾರೆ. ಅವರು ಹೇಳಿದ್ದಾರೆ, ಗ್ರಾಮ ಸಂಪರ್ಕ ಸಭೆಯನ್ನು ಮಾಡುತ್ತೇವೆ. ಇವತ್ತು ನಿಮ್ಮ ಶಂಕುಸ್ಥಾಪನೆ ಇಲ್ಲವೆಂದು ಹೇಳಿದ್ದಾರೆ. ಗ್ರಾಮ ಸಂಪರ್ಕ ಸಭೆಯನ್ನು ಮಾಡುತ್ತೇವೆ. ಇವತ್ತು ನಿಮ್ಮ ಶಂಕುಸ್ಥಾಪನೆ ಇಲ್ಲವೆಂದು ಹೇಳಿದ್ದಾರೆ. ಆಗ ಅವರು ಏನು ಹೇಳಿದ್ದಾರೆಂದರೆ, ನಾವು ಗ್ರಾಮ ಪಂಚಾಯತಿ ಅಧ್ಯಕ್ಷರು, ಈ ಗ್ರಾಮದವರು, ೩೦ ಬೆಡ್ ಆಸ್ಪತ್ರೆಯಾಗಿದೆ. ಇದಕ್ಕೆ ಸಿದ್ದರಾಮಯ್ಯನವರು ಹಿಂದೆ ಜಾಗವನ್ನು ಕೊಡಸಲಿಕ್ಕೆ ಅವರು ಕೂಡ ಕೆಲಸ ಮಾಡಿದ್ದಾರೆ. ನಾವು ಅವರನ್ನೇ ಕರೆದು

ಕಾರ್ಯಕ್ರಮವನ್ನು ಮಾಡುತ್ತೇವೆ. ನಾವು ಅದ್ದೂರಿಯಿಂದ ಮಾಡಬೇಕು. ೩೦ ಹಾಸಿಗೆಗಳ ಆಸ್ಪತ್ರೆ ಈ ಊರಿಗೆ ಬಂದಿರುವಂಥದ್ದು, ಇದನ್ನು ಮಾಡಬೆಕಾದರೆ, ನಾವೆಲ್ಲರೂ ಒಟ್ಟಾಗಿ ಸೇರಿ ಮಾಡುತ್ತೇವೆ. ಅದುವರೆಗೆ ಮಾಡಕೂಡದು ಎನ್ನತಕ್ಕಂಥ ವಿಚಾರವನ್ನು ಅವರಿಗೆ ತಿಳಿಸಿದಾಗ, ಅವರು ಗ್ರಾಮ ಸಂಪರ್ಕ ಸಭೆ ಎನ್ನತಕ್ಕಂಥ ವಿಚಾರದ ಬಗ್ಗೆ ಅವರು ಸ್ಪಷ್ಟನೆಯನ್ನು ಕೊಟ್ಟಾಗ ಅವರೆಲ್ಲರೂ ಕೂಡ ಸುಮ್ಮನಾಗಿದ್ದಾರೆ. ಮಧ್ಯಾಹ್ನದ ನಂತರ ಇವರು ನಾಲ್ಕುವರೆ ಗಂಟೆಗೆ ಅಲ್ಲಿಗೆ ಹೋದ ಮೇಲೆ ನಮ್ಮ ಪಕ್ಷದ ಪಂಚಾಯತಿಯ ಅಧ್ಯಕ್ಷರು, ಅವರು ಕೂಡ ಅವರ ಜೊತೆಯಲ್ಲಿಯೇ ಇದ್ದರು. ಆ ಊರಿನವರು ಕೂಡ ಅವರ ಜೊತೆಯಲ್ಲಿ ಹಿಂದಿನಿಂದಲೂ ಇದ್ದರು ಅದು ಏನು ಹೊಸದಲ್ಲ. ಆದರೆ ಈಗ ಮಾಡಲೇಕೂಡದು ಎಂದು ಹೇಳಿ ೧೦೦ ಜನ ಪ್ರತಿಭಟನೆ ಮಾಡತಕ್ಕಂಥ ಸಂದರ್ಭದಲ್ಲಿ ಆ ಸ್ಥಳಕ್ಕೆ DYSP ಯವರು ಹೋಗಿದ್ದಾರೆ. ಇವರು ಕೂಡ ಕಾದಿದ್ದಾರೆ. ನೀವೇ ಹೇಳಿ ಎಂದಿದ್ದಾರೆ, ಅಣ್ಣ ನಾವು ನಿಮ್ಮನ್ನೇ ಕರೆದು ಕಾರ್ಯಕ್ರಮವನ್ನು ಮಾಡುತ್ತೇವೆ, ಇವತ್ತು ಬೇಡವೆಂದು ಆ ಗ್ರಾಮದ ಮುಖಂಡರುಗಳು, ಗ್ರಾಮ ಪಂಚಾಯತಿಯ ಅಧ್ಯಕ್ಷರು ಕೂಡ ಅವರಿಗೆ ಹೋಗಿ ಕೇಳಿಕೊಂಡಿದ್ದಾರೆ. ಅದರೂ ಕೂಡ ಇಲ್ಲಾ ನಾವು ಮಾಡಬೇಕು ಎನ್ನುವ ವಿಚಾರವನ್ನು ಹೇಳಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಮತ್ತು S.P. ಯವರಿಗೆ ನಿಮ್ಮ ಕರ್ತವ್ಯವನ್ನು ನೀವು ಮಾಡಿ, ನಮ್ಮ ಕೆಲಸ ನಾವು ಮಾಡುತ್ತೇವೆ, ನಿಮ್ಮ ಕಾನೂನು ನೀವು ಚಲಾಯಿಸಿ, ನಾನು ಏನು ಮಾಡಬೇಕು ನಾನು ಮಾಡುತ್ತೇನೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಅವತ್ತು ಆ ಸಂದರ್ಭದಲ್ಲಿ ಆ ಶಾಮಿಯಾನ ಬಗ್ಗೆ ಅವರು ಏನು ಹೇಳಿದರು. ಶಾಮಿಯಾನಕ್ಕೂ ಶಂಕುಸ್ಥಾಪನೆ ಮಾಡತಕ್ಕಂಥ ಸ್ಥಳಕ್ಕೂ ದೂರ ಇದೆ. ಆ ಶಂಕುಸ್ಥಾಪನೆ ಮಾಡತಕ್ಕಂಥ ಸ್ಥಳದಲ್ಲಿ ಯಾವುದೇ ಲೆವಲಿಂಗ್ ಮಾಡುವುದಾಗಲಿ, ಪೂಜೆ ಮಾಡತಕ್ಕಂಥ ಕಾರ್ಯಕ್ರಮವಾಗಲಿ, ಏನೂ ಮಾಡಿಕೊಂಡಿಲ್ಲ. ಶಾಮಿಯಾನ ಬಿಟ್ಟರೆ ಬೇರೆ ಏನು ವ್ಯವಸ್ಥೆ ಮಾಡಿಕೊಂಡಿಲ್ಲ. ಅವರು ಮಾಡತಕ್ಕಂಥ ಸಂದರ್ಭದಲ್ಲಿ ಅವರು ಹೇಳಿದ್ದಾರೆ. ಈ ರೀತಿ ಇರುವುದರಿಂದ ಘರ್ಷಣೆಯಾಗುತ್ತದೆ ಬೇಡವೆಂದು ಅವರು ಹೇಳಿದಾಗ, ಇಲ್ಲಾ DYSP ಯವರು ಮಾಡುತ್ತೇವೆಂದು ಹೇಳಿದಾಗ, ನಂತರ ಅವರ ಕೈಯಿಂದ ಆಗದೆ S.P. ಯವರಿಗೆ ಹೇಳಿದ್ದಾರೆ. S.P. ಯವರು ಸ್ಥಳಕ್ಕೆ ಹೋಗಿದ್ದಾರೆ. ಅಲ್ಲಿಂದ ಬಂದು ಇವರಿಗೆ ಮಾತನಾಡೋಣವೆಂದು ಹೇಳಿ, ಅವರ ಸ್ಟೇಶನ್‌ಗೆ ಹೋಗಿ ಇಬ್ಬರು ೪೦ ನಿಮಿಷಗಳ ಕಾಲ ಚರ್ಚೆ ಮಾಡಿ ಮಾತನಾಡಿದ್ದಾರೆ. ಅವರು ಹೇಳಿದ್ದಾರೆ, ಸರ್ ನಿಮ್ಮ

ಆರೋಗ್ಯ ಇಲಾಖೆಯ ಒಬ್ಬ ಇಂಜನಿಯರ್ ಬಂದಿಲ್ಲ. ಆರೋಗ್ಯ ಇಲಾಖೆಯ ಒಬ್ಬ ಅಧಿಕಾರಿ ಬಂದಿಲ್ಲ. ಜಿಲ್ಲಾ ಪಂಚಾಯತಿ ಒಬ್ಬ ಅಧಿಕಾರಿ ಬಂದಿಲ್ಲ. ಒಬ್ಬರು ಕೂಡ ಸರ್ಕಾರದ ಪ್ರತಿನಿಧಿ ಇಲ್ಲ. ಒಂದು ಇನ್‌ವಿಟೇಶನ್ ಕೂಡ ಪ್ರಿಂಟ್ ಮಾಡಿಸಿಲ್ಲ. ಜಿಲ್ಲಾ ಪಂಚಾಯತಿ ಅಧ್ಯಕ್ಷರು ಕೂಡ ಬಂದಿಲ್ಲ. ನಿಮ್ಮ ಪಕ್ಷದ ಅಧ್ಯಕ್ಷರೇ ಅವರು ಕೂಡ ಬಂದಿಲ್ಲ. ಇಷ್ಟೆಲ್ಲಾ ಇಲ್ಲದಿರುವಾಗ ಒಂದು ಘಟನೆಯಾದರೆ, ತೊಂದರೆಯಾಗುತ್ತದೆ ಬೇಡ ಸರ್ ಎಂದು ಅವರು ಹೇಳಿದ್ದಾರೆ. ಅದಕ್ಕೆ ಅವರು ಹೇಳಿದಂಥ ಸಂದರ್ಭದಿಂದಲೇ, ಅವರು ಬಂದು ಪೊಲೀಸ್ ಸ್ಟೇಶನ್ ಎದುರುಗಡೆ ಸನ್ಮಾನ್ಯ ಸಿದ್ದರಾಮಯ್ಯನವರೆ ಬಂದು ಧರಣಿ ಕುಳಿತಿದ್ದಾರೆ. ಅಲ್ಲಿ ಜನರು ಕೂಡ ಧರಣಿ ಕುಳಿತಿದ್ದಾರೆ. ಇಲ್ಲಾ ನಾವು ಮಾಡಲೇಬೇಕು ಎಂದು, ಧರಣಿ ಕುಳಿತ ಸಂದರ್ಭದಲ್ಲಿ ಕಲ್ಲು ತೂರಾಟ ನಡೆದಿದೆ. ಆ ಸಂದರ್ಭದಲ್ಲಿ ಅವರು ೧೪೪ ಕಲಂ ಹಾಕಿಯಾಗಿದೆ. ನೀವು ಹೋಗಬೇಡಿ ಎಂದು ಅವರು ಹೇಳಿದರು ಕೂಡ ಆದರೂ ಅವರು ಧರಣಿ ಮಾಡುತ್ತೇನೆಂದು ಅವರ ಬಾಯಿಯಿಂದಲೆ ಹೇಳಿದ್ದಾರೆ. ಅವರು ಮಾತನಾಡಿರುವ ಬಗ್ಗೆ ನಿಮ್ಮ ರೆಕಾರ್ಡಿನಲ್ಲಿ ಈಗ ಬಂದಿದೆ. ಒಬ್ಬ ಜ್ಯೂನಿಯರ್ ಇಂಜಿನಿಯರ್ ನಿಂದ ಹಿಡಿದು, ಜಿಲ್ಲಾ ಪಂಚಾಯತಿ ನಿಮ್ಮದೇ ತಾಲ್ಲೂಕು ಪಂಚಾಯತಿ ನಿಮ್ಮದೇ ಸಂಪೂರ್ಣ ಅಧಿಕಾರ ನಿಮ್ಮ ಕೈಯಲ್ಲಿಯೇ ಇದೆ. ನೀವೇ ಶಾಸಕರು, ನಾವು ಹೋಗಬೇಕೆನ್ನುವುದು ಯಾವತ್ತು ಕೂಡ ಬಯಸಿಲ್ಲ. ನಾನು ಬರಬೇಕಾಗಿಯೂ ಇಲ್ಲ. ನಾನು ಬರುತ್ತೇನೆಂದು ಕೂಡ ಯಾವತ್ತೂ ಹೇಳಿಲ್ಲ. ತಾವೇ ಬಂದು ಕೆ.ಆರ್. ಕ್ಷೇತ್ರದಲ್ಲಿ ಮಾಡಿದ್ದೀರಿ, ಅವತ್ತು ಮಾನ್ಯ ಜಯಕುಮಾರ್ ರವರ ಹೆಸರನ್ನು ಹಾಕದೇ ಕಾರ್ಯಕ್ರಮವನ್ನು ಮಾಡಿದ್ದೀರಿ, ಅದಕ್ಕೂ ನಾವು ಅಡ್ಡಿಪಡಿಸಲಿಲ್ಲ. ತಾವು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಯಾವುದೇ ಒಬ್ಬ M.L.A. ಇದ್ದರೂ ಕೂಡ ಬಂದು ನಿಮ್ಮನ್ನು ಕೇಳಿ ಅವರು ಮಾಡಬೇಕಾಗಿತ್ತು. ನಿಮ್ಮನ್ನು ಕೇಳದೇ ಹೆಸರನ್ನು ಕೆಳಗಡೆ ಹಾಕಿಬಿಟ್ಟಿದ್ದರೆ, ಯಾವನೂ ಹಾಕುತ್ತಾನೆಂದು ನೀವು ಅವತ್ತು ಆ ರೀತಿ ಹೇಳಿರತಕ್ಕಂಥದ್ದು ನನಗೂ ಕೂಡ ಚೆನ್ನಾಗಿ ಗೊತ್ತಿರತಕ್ಕಂಥ ವಿಚಾರ. ಇಷ್ಟೆಲ್ಲಾ ಆದ ಮೇಲೆ, ಅವತ್ತು ದೊಡ್ಡಳ್ಳಿ ಗೋಲಿಬಾರ್ ಆದಂಥ ಸಂದರ್ಭದಲ್ಲಿ ಅವತ್ತಿನ ಸರ್ಕಾರದಲ್ಲಿ ಅವತ್ತಿನ ಮಂತ್ರಿಗಳಿಗೆ, ನೀವು ಹೋದರೆ ತೊಂದರೆಯಾಗುತ್ತದೆ, ಹೋಗಬೇಡಿ ಎಂದು ಪೊಲೀಸ್ ನವರು ಹೇಳಿದಾಗ, ಅದನ್ನು ಉಲ್ಲಂಘನೆ ಮಾಡಿ ಹೋಗಿರುವುದರಿಂದ ದೊಡ್ಡಳ್ಳಿ ಗೋಲಿಬಾರ್ ಆಯಿತು. ಮರ್ಡರ್ ಆಯಿತು, ಬೇಕಾದಷ್ಟು ಆಯಿತು. ಅವರು ಇವರನ್ನು

protect ಮಾಡತಕ್ಕಂಥದ್ದು, ಅವತ್ತು protect ಮಾಡಲೇಬೇಕಗಿತ್ತು. ಇವರನ್ನೆ protect ಮಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ರೆಕಾರ್ಡ್ ಸ್ಟೇಟ್ ಆಗಲಿ. ಅವರು ಹೋಗಲಿಲ್ಲ. ಒಂದು ಅಂಬಾಸಿಡರ್ ಕಾರ್ ಮೇಲೆ ಕೆಂಪು ಲೈಟ್ ಇರುವುದನ್ನು ನೋಡಿದರು ಹೊಡೆಯಿರಿ ಎಂದು ಹೊಡೆದರು ಹೊರತಾಗಿ, ಮಂತ್ರಿಗಳು ಹೋಗುವುದು ಬೇಡವೆಂದು S.P. ಯವರು ಹೇಳಿದ ಮೇಲೆ ಅವರು ಹೋಗಿಲ್ಲ.

ಶ್ರೀ ಜಿ.ಟಿ. ದೇವೇಗೌಡ : protect ಮಾಡಬೇಕು, ನಾಳೆ ಯಾವುದಾದರೂ ಅನಾಹುತವಾದರೆ, ನಾವು ಮನೆಗೆ ಹೋಗುತ್ತೇವೆಂದು ಹೇಳಿ, ಅವರು ತಮ್ಮ ಕೈಯಲ್ಲಿರುವ ಕಾನೂನನ್ನು ಕೈಗೆ ತೆಗೆದುಕೊಂಡಾಗ, ನೋಡಿ ಇಲ್ಲಿ ಒಂದನ್ನು ಹೇಳುತ್ತಾರೆ. ವಿಜಯ ಕರ್ನಾಟಕದಲ್ಲಿ ಬಂದಿದೆ, ಏಟು ತಪ್ಪಿಸಿಕೊಂಡ S.P. ಎಂದು ಹೇಳುತ್ತಾರೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಕೂಡ ಈ ಬಗ್ಗೆ ಹೇಳುತ್ತಾರೆ. ಯಾವಾಗ ಕೈ ಕೈ ಮಿಲಾಯಿಸುವ ಹಂತಕ್ಕೆ ಹೋದಾಗ ಬೇಡಿ ಸರ್ ಎಂದು ನಿಮ್ಮನ್ನು ಎತ್ತಿಕೊಂಡು ಬಂದರು ಎಂದು ಹೇಳುತ್ತಾರೆ. ಮಾನ್ಯ ವಾಟಾಳ್ ನಾಗರಾಜ್ ರವರು ಯಾವಾಗಲೂ ಚಳುವಳಿ ಮಾಡುತ್ತಿರುತ್ತಾರೆ. ಅವರನ್ನು ಎತ್ತಿಕೊಂಡು ಹೋಗುತ್ತಿರುತ್ತಾರೆ. ಅವರು ನಿಮಗೆ ಆ ರೀತಿಯ ಅಗೌರವವನ್ನು ತೋರಿಸಿಲ್ಲ. ನಿಮಗೆ ಕೇಳಿಕೊಂಡಿದ್ದಾರೆ. ನೀವೇ ನನ್ನನ್ನು ಅರೆಸ್ಟ್ ಮಾಡಿ ಎಂದು ಹೇಳಿದ್ದೀರಿ. ನೀವೇ ಬಂದು Van ನಲ್ಲಿ ಕುಳಿತಿದ್ದೀರಿ. ನೀವು ಬರತಕ್ಕಂಥ ಸಂದರ್ಭದಲ್ಲಿ ಸಾಲುಂಡಗಿ ಗ್ರಾಮದಲ್ಲಿ ಬಸ್ಸುಗಳನ್ನು ಸುಟ್ಟಿದ್ದಾರೆ. ಪೊಲೀಸ್ ವೆಹಿಕಲ್ ಜಕಂ ಆಗಿವೆ, S.P. ಕಾರ್ ಜಕಂ ಆಗಿದೆ. ಇಷ್ಟೆಲ್ಲಾ ಆಗಿದೆ, ನಂತರ ಬಂದು ಬಿಟ್ಟು ನಿಮ್ಮನ್ನು ಆ ಪೊಲೀಸ್‌ನವರು ಪಕ್ಕದಿಂದ ಇಲ್ಲಾ ಸರ್ ನೀವು ಹೋಗಿ. ಆ ಜಾಗದಿದ ಜನರನ್ನು ಕದಲಿಸಬೇಕು ಎನ್ನತಕ್ಕಂಥದ್ದು, ಅವರು ಕಾನೂನನ್ನು ಕೈಗೆತ್ತಿಕೊಳ್ಳತಕ್ಕಂಥದ್ದನ್ನು, ನೀವೇ ಕಾನೂನನ್ನು ಕೈಗೆತ್ತಿಕೊಂಡಿದ್ದೀರಿ. ಆ ಊರಿನವರು ನಿಮ್ಮ ಮಾತನ್ನು ಕೇಳುತ್ತಿದ್ದರು. ಅಲ್ಲಿ ನಾಯಕ್ ಹಾಗೂ ಹಿಂದುಳಿದ ಸಮಾಜದವರು ಇದ್ದವರು. ನೀವು ಕುಳಿತುಕೊಂಡು ಹೇಳಿದರೆ, ಅವರು ಕೇಳುತ್ತಿರಲಿಲ್ಲವೆಂದು ಏನೂ ಇಲ್ಲ. ಅವರು ಕೆಳುತ್ತಿದ್ದರು, ಛೇರ್ಮನ್‌ರು ಕೇಳುತ್ತಿದ್ದರು. ಅದನ್ನು ಮಾಡತಕ್ಕಂಥ ಶಕ್ತಿ ಇತ್ತು. ನೀವು ಉಪ ಮುಖ್ಯಮಂತ್ರಿಯಾಗಿದ್ದೀರಿ, ೨೫ ವರ್ಷ ಆ ಕ್ಷೇತ್ರವನ್ನು ಪ್ರತಿನಿಧಿಸಿದ್ದೀರಿ, ಅದನ್ನು

ಮಾಡಬಹುದಿತ್ತು,. ಇಷ್ಟೆಲ್ಲಾ ಆಯಿತು, ಇನ್ನೊಂದು ದಿವಸ ಮಾಡೋಣವೆಂದು ಹೇಳಿ ಬಂದಿದ್ದರು ಕೂಡ ಅವತ್ತು ಹೋಗಿ ನೀವು ಮಾಡಬಹುದಾಗಿತ್ತು. ಯಾರು ಕೂಡ ಅಡ್ಡಿಪಡಿಸಲಿಕ್ಕೆ ಆಗುತ್ತಿರಲಿಲ್ಲ. ತಾವು ಬಂದು, "ನೀವು ಎಲ್ಲರೂ ಏನು ಮಾಡುತ್ತಿದ್ದೀರಿ, ನನ್ನನ್ನು ಅರೆಸ್ಟ್ ಮಾಡಿದ್ದಾರೆ, ಬಸ್ ತಡೆಯಿರಿ, ಬಸ್ ಸುಡಿ, " ಎಂದು ಹೇಳತಕ್ಕಂಥ ಕೆಲಸವನ್ನು ತಾವು ನೇರವಾಗಿ ಮಾಡಿರತಕ್ಕಂಥದ್ದು ಸರಿಯಲ್ಲ. ಮತ್ತು ನಾನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಏಕೆ ನೀವು ಈ ತರಹ ಮಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೇ ಅವರು ಜವಾಬ್ದಾರಿಯುಳ್ಳವರಾಗಿರುವುದರಿಂದ, ಮಾನ್ಯ ಗೃಹ ಮಂತ್ರಿಗಳಾದ ಮೇಲೆ ತಮಗೆ ಅವಕಾಶ ಕೊಡುತ್ತೇನೆಂದು ನಾನು ಅವರಿಗೆ ಹೇಳಿದ್ದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸರ್ಕಾರ ರಿಪ್ಲೈ ಕೊಟ್ಟ ಮೇಲೆ ಆಯಿತು.

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ. ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತತಿದ್ದೀರಾ? ಪತ್ರಿಕೆಯನ್ನು ಓದಿಕೊಮಡು ಏತಕ್ಕೆ ಹೇಳುತ್ತಿದ್ದೀರಿ?

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ, ಅವರು ಜವಾಬ್ದಾರಿ ಸ್ಥಾನದಲ್ಲಿ ಇರುವುದರಿಂದ ಅವರು ಮಾತನಾಡುವ ಬಗ್ಗೆ ಮೊದಲೇ ಅವಕಾಶ ಕೊಡಬೇಕೆಂದು ಹೇಳಿದ್ದರು. ಅದಕ್ಕೆ ನಾನು ಗೃಹಸಚಿವರು ಮಾತನಾಡಿದ ನಂತರ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೋಂ ಮಿನಿಸ್ಟರ್ ರವರು ಹೇಳಿದ ಮೇಲೆ ಏನು ಇದೆ ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಅಲ್ಲಿ ವಿರೋಧ ಪಕ್ಷದ ಸದಸ್ಯರೊಬ್ಬರು ಮುಖ್ಯಮಂತ್ರಿಗಳ ಜವಾಬ್ದಾರಿಯ ಬಗ್ಗೆ ಪ್ರಶ್ನೆ ಮಾಡುತ್ತಿದ್ದಾರೆ? ನನಗೆ ಜವಾಬ್ದಾರಿಯ ಬಗ್ಗೆ ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸಭಾನಾಯಕರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ದಯಮಾಡಿ ಎಲ್ಲರೂ ಅರ್ಥಮಾಡಿಕೊಳ್ಳಿ. ಘಟನೆ ಏನು ನಡೆದಿದೆ ಅದು ಗಂಭೀರವಾದುದು, ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾದುದು. ಆ ಕಡೆಯವರಾಗಲಿ, ಈ ಕಡೆಯವರಾಗಲಿ, ಏನೆಂದರೆ, ರಾಜಕೀಯ ಕಾರಣಕ್ಕೋ, ಅಥವಾ ಅಧಿಕಾರಿಗಳ ಬೇಜವಾಬ್ದಾರಿನೋ ಅಥವಾ ಇನ್ನೊಂದು, ಆದರೆ, ನೀವು ವಿಚಾರಗಳನ್ನು ಹೇಳಬೇಕಾದರೆ ಶಾಂತವಾಗಿ ಹೇಳಿ. ಅದಕ್ಕೆ ಸರ್ಕಾರವು ಸೂಕ್ತವಾದ ಉತ್ತರವನ್ನು ಕೊಡುತ್ತದೆ ಹಾಗೂ ಸೂಕ್ತವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. ಅದನ್ನು ಬಿಟ್ಟು ಈ ಕಡೆ ೧೦ ಜನವರು ಆ ಕಡೆ ೧೦ ಜನರು ಒಟ್ಟಿಗೆ ನಿಂತುಕೊಂಡು ಕೂಗಾಡಿದರೆ ಏನಿದೆ? ಈ ತರಹ ನಡೆದರೆ ಸಭೆಯಲ್ಲಿ ಯಾರಿಗೂ ಕೂಡ ಗೌರವವಿಲ್ಲ. ಜನರು ಹೊರಗಡೆಯಲ್ಲಿ ನಗಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಯವರೇ ತಾವು ಮಾತನಾಡಿ.

ಶ್ರೀ ಹೆಚ್. ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರೊಬ್ಬರು ನನ್ನ ಜವಾಬ್ದಾರಿಯ ಬಗ್ಗೆ ಪ್ರಶ್ನೆಯನ್ನು ಎತ್ತಿದ್ದಾರೆ. ನಾನು ಅವಶ್ಯಕತೆ ಬಿದ್ದಾಗ ಚರ್ಚೆಯಲ್ಲಿ ಭಾಗವಹಿಸುತ್ತೇನೆ ಎಲ್ಲದ ಸಮಯದಲ್ಲಿ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಈ ಸಭೆಯಲ್ಲಿ ಕಿರಿಯ ಸದಸ್ಯನಾಗಿದ್ದೇನೆ. ಕೆಲವು ಅನಿರೀಕ್ಷಿತ ಘಟನೆಗಳಿಂದ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆ. ನಾನು ಮುಖ್ಯಮಂತ್ರಿಯಾಗುತ್ತೇನೆಂದು ಕನಸು ಸಹ ಕಂಡಿರಲಿಲ್ಲ. ಸನ್ಮಾನ್ಯ ಸಿಂಧ್ಯಾರವರು ಮಾತನಾಡತಕ್ಕಂತಹ ಸಂದರ್ಭದಲ್ಲಿ ಅಧಿಕಾರ

ಯಾರಿಗೂ ಕೂಡ ಶಾಶ್ವತವಲ್ಲವೆನ್ನುವಂತಹ ಪದವನ್ನು ಬಳಸಿದ್ದಾರೆ. ಅದನ್ನು ನಾನು ಕಿರಿಯ ಸದಸ್ಯನಾಗಿ ಅತ್ಯಂತ ಗೌರವಪೂರ್ವಕವಾಗಿ ಆ ಪದವನ್ನು ನಾನು ಸ್ವೀಕಾರ ಮಾಡುತ್ತೇನೆ. ಯಾರಿಗೂ ಅಧಿಕಾರ ಶಾಶ್ವತವಲ್ಲವೆನ್ನುವಂತಹದ್ದು ಗೊತ್ತಿರತಕ್ಕಂತಹ ವಿಚಾರ. ಇವತ್ತು ಸದನದಲ್ಲಿ ಮಾತನಾಡತಕ್ಕಂತಹ ಸಂದರ್ಭದಲ್ಲಿ ಸನ್ಮಾನ್ಯ ಸಿಂಧ್ಯಾರವರು ಒಂದು ಮಾತನ್ನು ಹೇಳಿದರು. ಇವತ್ತಿನ ಆಡಳಿತದಲ್ಲಿ ಜಾತಿಯ ರಾಜಕಾರಣವು, ಅಧಿಕಾರಿಗಳ ಮೇಲೆ ಪ್ರೇರೇಪಣೆಯಾಗುತ್ತದೆ ಎಂಬ ಪದವನ್ನು ಬಳಸಿದ್ದಾರೆ. ನಾನು ಈ ಜಾತಿಯ ರಾಜಕಾರಣವು ಎಲ್ಲಿಂದ ಪ್ರಾರಂಭವಾಗಿದೆ, ಅಧಿಕಾರಿಗಳ ಮೇಲೆ ಏತಕ್ಕೆ ಪ್ರೇರೆಪಣೆಯಾಗಿದೆ ಎನ್ನುವುದರ ಬಗ್ಗೆ ಸುದೀರ್ಘವಾಗಿ ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಏನು ಮೊನ್ನೆ ಜಯಪುರದಲ್ಲಿ ನಡೆದಿರುವ ಘಟನೆಯ ಬಗ್ಗೆ ಈಗಾಗಲೇ ಗೃಹಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ಮತ್ತೇ ಮಾತನಾಡತಕ್ಕದ್ದು ಸೂಕ್ತವಲ್ಲವೆನ್ನುವ ದೃಷ್ಟಿಯಿಂದ ಕುಳಿತಿದ್ದೇನೆ. ಸನ್ಮಾನ್ಯ ಸಿದ್ದರಾಮಯ್ಯನವರು ಅಲ್ಲಿ ಘಟನೆಯಾದ ನಂತರ ಇವತ್ತು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಗಮನಿಸಿದ್ದೇನೆ. ಇದರಲ್ಲಿ ಮುಖ್ಯಮಂತ್ರಿಗಳು ಚಿತಾವಣೆ ಇದೆ ಎನ್ನುವ ಪದವನ್ನು ಬಳಸಿದ್ದಾರೆ. ನಾನು ಪತ್ರಿಕೆಯಲ್ಲಿ ಬಂದಿರುವಂತಹ ವರದಿಯನ್ನು ನೋಡಿದ್ದೇನೆ. ಆದರೂ ನಾನು ಇಲ್ಲಿ ಉತ್ತರವನ್ನು ಕೊಡುವುದಕ್ಕೆ ಹೋಗಿರಲಿಲ್ಲ. ಸನ್ಮಾನ್ಯ ಸದಸ್ಯರೊಬ್ಬರು ಜವಾಬ್ದಾರಿಯ ಬಗ್ಗೆ ಪ್ರಶ್ನೆ ಮಾಡಿದ್ದಾರೆ, ಅದಕ್ಕಾಗಿ ಹೇಳುತ್ತಿದ್ದೇನೆ, ಮುಖ್ಯಮಂತ್ರಿಗಳು ಚುನಾವಣೆಯಾದ ನಂತರ ದ್ವೇಷದ ರಾಜಕಾರಣವನ್ನು ಮಾಡುವುದಕ್ಕೆ ಹೊರಟ್ಟಿದ್ದಾರೆ. ಅವರು ಇಲ್ಲಿ ಗಲಾಟೆಯಾಗುವುದಕ್ಕೆ ಚಿತಾವಣೆ ಮಾಡಿದ್ದಾರೆನ್ನುವಂತಹ ವರದಿಯು ಇವತ್ತಿನ ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಗಮನಿಸಿದ್ದೇನೆ. ಆದರೂ ಕೂಡ ನಾನು ಸದನದಲ್ಲಿ ಪ್ರಸ್ತಾಪ ಮಾಡುವುದು ಬೇಡವೆಂದು ಇದ್ದೇ. ನಾನು ರಾಮನಗರದ ನನ್ನ ಕ್ಷೇತ್ರದ ಕಾರ್ಯಕ್ರಮಕ್ಕೆ ಹೋಗುತ್ತಿದ್ದೆ. ಸನ್ಮಾನ್ಯ ಜಿ.ಟಿ.ದೇವೇಗೌಡರು, ಸಹಕಾರ ಸಚಿವರು ಕೂಡ ನನ್ನ ಕ್ಷೇತ್ರದ ಕಾರ್ಯಕ್ರಮಕ್ಕೆ ಬರುತ್ತಿದ್ದರು. ನನಗೆ ಆ ಒಂದು ಘಟನೆಯ ಬಗ್ಗೆ ಮಾಹಿತಿಯು ಬಂದಾಗ ನಾನು ನಮ್ಮ ಪಕ್ಷದ ಕಾರ್ಯಕರ್ತರಿಗೆ ಒಂದು ಮಾತನ್ನು ಹೇಳಿದೆ. ಇಲ್ಲಿ ರಾಜಕೀಯದ ಪ್ರತಿಷ್ಠೆಗೋಸ್ಕರವಾಗಿ ಯಾವುದೇ ಕಾರಣಕ್ಕೂ ಅಮಾಯಕರ ಜೀವಕ್ಕೆ ಹಾನಿಯಗಬಾರದು. ದಯವಿಟ್ಟು ನೀವು ಅಲ್ಲಿಯ ಕಾರ್ಯಕರ್ತರಿಗೆ ಹೇಳಬೇಕು. ಅಲ್ಲಿ ಶಾಸಕರು ಏನೂ ಬೇಕೋ ಆ ಕಾರ್ಯಕ್ರಮವನ್ನು ಮಾಡಿಕೊಳ್ಳಲಿ, ಅದನ್ನು ಬಿಟ್ಟುಬಿಡುವುದಕ್ಕೆ ಹೇಳಿ ಎನ್ನುವ ಪದವನ್ನು ಹೇಳಿದ್ದೇನೆ. ಹಿಂದೆ ಈ ರಾಜ್ಯದಲ್ಲಿ ಏನು ಹಲವಾರು ಘಟನೆಗಳು ನಡೆದಿವೆ,

ನಮ್ಮ ಒಂದು ರಾಜಕೀಯ ಪ್ರತಿಷ್ಠೆಗೋಸ್ಕರವಾಗಿ ಹಲವಾರು ಬಾರಿ ರಾಜ್ಯದಲ್ಲಿ ಹಾನಿಗಳಾಗುವಂತಹದ್ದು ಇರಬಹುದು. ಜೀವಹಾನಿಗಳಾಗಿರುವಂತಹ ಘಟನೆಗಳಾಗಿರುವುದನ್ನು ನಾವು ಏನು ಗಮನಿಸಿದ್ದೇವೆ. ಆ ದೃಷ್ಟಿಯಿಂದಲೇ ನಾನು ನಮ್ಮ ಪಕ್ಷದ ಕಾರ್ಯಕರ್ತರಿಗೆ ಕಟ್ಟುನಿಟ್ಟಿನ ಸೂಚನೆಯನ್ನು ಕೊಡಿ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಆದರೂ ಕೂಡ ಅಲ್ಲಿ ನಡೆದಿರುವ ಬಗ್ಗೆ ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ಜಿಲ್ಲಾಧಿಕಾರಿಗಳ ವರದಿಯು ಇಲ್ಲಿ ಇದೆ. ಇವತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳೇ ಕಾರ್ಯಕ್ರಮಕ್ಕೆ ಆಹ್ವಾನವನ್ನು ಕೊಟ್ಟಿದ್ದಾರೆನ್ನುವಂತಹ ಮಾತನ್ನು ಹೇಳಿದ್ದಾರೆ. ಈಗಾಗಲೇ ಅಧಿಕೃತವಾಗಿ ಆರೋಗ್ಯ ಇಲಾಖೆಯ ಅಧಿಕಾರಿಗಳು ಇಲ್ಲಿ ಏನು ಸದನದ ಮುಂದೆ ಇವತ್ತು ಗೃಹಸಚಿವರಿಗೆ ಹೇಳಿಕೆಯನ್ನು ಕೊಡತಕ್ಕಂಹದ್ದಕ್ಕೆ ಪತ್ರವನ್ನು ಕಳುಹಿಸಿದ್ದಾರೆ. ಇವೆಲ್ಲವನ್ನು ನಾನು ಸುದೀರ್ಘವಾಗಿ ಪ್ರಶ್ನೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಾನು ಈ ಸಂದರ್ಭದಲ್ಲಿ ಸದನದಲ್ಲಿ ಇರುವ ಎಲ್ಲಾ ಸದಸ್ಯರುಗಳಲ್ಲಿ ಮನವಿಯನ್ನು ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ. ಇವತ್ತು ನಾವು ಕೇವಲ ಅಧಿಕಾರದ ಹಿನ್ನಲೆಯಲ್ಲಿ ಸ್ವಲ್ಪ ಹೆಚ್ಚಾಗಿ ನನ್ನನ್ನು ಸೇರಿಕೊಂಡು, ಜನಪ್ರತಿನಿಧಿಗಳ ಎಲ್ಲರ ಜವಾಬ್ದಾರಿ ಏನಿದೆ, ಆ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ ಸಾರ್ವಜನಿಕವಾಗಿ ಅಶಾಂತಿಯ ವಾತಾವರಣವನ್ನು ಮೂಡಿಸುವಂತಹದ್ದಕ್ಕೆ ಅವಕಾಶಗಳು ಆಗಿದೆ ಇರುವಂತಹ ರೀತಿಯಲ್ಲಿ ಅಮಾಯಕರು, ನನ್ನ ಅಭಿಮಾನಿಗಳೇ ಇರಬಹುದು, ಅಥವಾ ವಿರೋಧಿಗಳೇ ಇರಬಹುದು, ಪ್ರಚೋದನೆಗೆ ಒಳಗಾಗಿ ರಾಜ್ಯದಲ್ಲಿ ಅಶಾಂತಿಯ ವಾತಾವರಣವನ್ನು ನಿರ್ಮಾಣ ಮಾಡುವಂತಹ ರೀತಿಯ ಘಟನೆಗಳನ್ನು ಆಗುವುದಕ್ಕೆ ನನ್ನನ್ನು ಸೇರಿಕೊಂಡು ಯಾವ ಜನಪ್ರತಿನಿಧಿಗಳು ಆ ರೀತಿಯ ಒಂದು ಅವಕಾಶವನ್ನು ಕಲ್ಪಿಸುವುದು ಒಳ್ಳೆಯದಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲಿ ನಡೆದಿರುವಂತಹ ಘಟನೆಗಳು ಏನು ನಡೆದಿದೆ, ಇವತ್ತು ಸನ್ಮಾನ್ಯ ಸಿದ್ಧರಾಮಯ್ಯನವರು ಏನೂ ಆ ಕಾರ್ಯಕ್ರಮವನ್ನು ಮಾಡಲೇಬೇಕೆಂದು ತೀರ್ಮಾನ ಮಾಡಿ ಹೊರಟಿದ್ದರು. ಇವತ್ತು ಅವರೇ ಜಿಲ್ಲಾ ಉಸ್ತುವಾರಿ ಸಚಿವರಾಗಿ ಹಿಂದೆ ಯಾವ ಯಾವ ರೀತಿಯಾಗಿ ಆ ಒಂದು ಜಿಲ್ಲೆಯಲ್ಲಿ ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆಂಬ ಬಗ್ಗೆ ಅವರ ಆತ್ಮಕ್ಕೆ ಅವರೇ ಪ್ರಶ್ನೆಯನ್ನು ಹಾಕಿಕೊಳ್ಳಲಿ, ನಾನು ಆ ಬಗ್ಗೆ ಹೆಚ್ಚು, ಹಾಗೂ ಹಿಂದಿನ ರಾಜಕಾರಣಿಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಚುನಾವಣೆಯ ಸಂದರ್ಭದಲ್ಲಿ ಆ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹಲವಾರು ಅಭಿವೃದ್ಧಿ ಕೆಲಸಗಳ ಬಗ್ಗೆ ಚಾಲನೆಯನ್ನು ಕೊಟ್ಟಿದ್ದೇನೆ. ನಾನು ಚುನವಣೆಯ

ದೃಷ್ಟಿಯಿಂದ ಕೊಟ್ಟಿರುವುದಲ್ಲ. ನಾನು ಪ್ರಪ್ರಥಮ ಬಾರಿಗೆ ಮುಖ್ಯಮಂತ್ರಿಯಾಗಿ ಬೆಳಗಾವಿಯ ಒಂದು ಕಾರ್ಯಕ್ರಮಕ್ಕೆ ಪ್ರವಾಸವನ್ನು ಕೈಗೊಂಡೆ. ಆ ಸಂದರ್ಭದಲ್ಲಿ ೧೫ ಕಿ.ಮಿ. ದೂರವಿರುವಂತಹ ಒಂದು ಹಳ್ಳಿಯಲ್ಲಿ ಸುಮಾರು ೧೫-೨೦ ವರ್ಷಗಳಿಂದ ಅಲ್ಲಿ ಕುಡಿಯುವ ನೀರಿನ ಸೌಕರ್ಯವಿಲ್ಲದೇ ನನ್ನ ಮುಂದೆ ಜನತಾ ದರ್ಶನದಲ್ಲಿ ಆ ಸಂದರ್ಭದಲ್ಲಿ ಕೆಲವು ಹೆಣ್ಣುಮಕ್ಕಳು ಒಂದು ಅರ್ಜಿಯನ್ನು ಕೊಟ್ಟರು, ಅವತ್ತು ರಾತ್ರಿಯೇ ನಾನು ಆ ಗ್ರಾಮಕ್ಕೆ ಹೋಗಿ ೨೪ ಗಂಟೆಯಲ್ಲಿ ಆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಆದೇಶವನ್ನು ಮಾಡಿ ಸುಮಾರು ೮೪ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಚಾಲನೆಯನ್ನು ಕೊಟ್ಟಿದ್ದೇನೆ. ನಾನು ಚುನಾವಣೆಯ ದೃಷ್ಟಯಿಂದ, ಯಾರನ್ನೂ ಚುನಾವಣೆಯಲ್ಲಿ ಸೋಲಿಸಬೇಕೆನ್ನುವಂತಹ ದೃಷ್ಟಯಿಂದ ಅಲ್ಲಿ ದ್ವೇಷದ ರಾಜಕೀಯವನ್ನು ಮಾಡುವುದಕ್ಕೆ ಹೋಗಿದ್ದೇನೆಂಬುದು ನನ್ನ ಗಮನಕ್ಕೆ ಯಾರೇ ಮನವಿಯನ್ನು ಕೊಟ್ಟಾಗ ಅದಕ್ಕೆ ಸ್ಪಂದಿಸುವುದರಲ್ಲಿ ಪ್ರಾಮಾಣಿಕವಾಗಿ ನಾನು ಪರಿಸ್ಥಿತಿಯನ್ನು ಅರಿತು ಕೆಲಸ ಮಾಡಿದ್ದೇನೆ. ಚುನಾವಣೆಯಲ್ಲಿ ಗೆಲ್ಲಬಹುದು. ಇನ್ನೊಬ್ಬರನ್ನು ಸೋಲಿಸಬೇಕೆಂಬ ದೃಷ್ಟಿಯಿಂದ ರಾಜಕಾರಣವನ್ನು ಮಾಡಿದರೆ ಅದು ಸರಿಯಲ್ಲ. ಇವತ್ತು ದ್ವೇಷಕ್ಕೆ ಚುನಾವಣೆಯಲ್ಲಿ ನಾವು ಗೆದ್ದ ಮೇಲೆ ದ್ವೇಷದ ರಾಜಕೀಯ ಎಂದು ಹೇಳಿದ್ದಾರೆ. ನಾವು ಯಾವ ನಿಮ್ಮ ಕಾರ್ಯಕ್ರಮಕ್ಕೂ ಕೂಡ ಬಂದಿಲ್ಲ. ನಿಮ್ಮ ತಾಲ್ಲೂಕಿನಲ್ಲಿ ಚುನಾವಣೆಯಾದ ನಂತರ ಇವತ್ತಿನವರೆಗೂ ಆ ತಾಲ್ಲೂಕಿನಲ್ಲಿ ಕಾಲು ಇಟ್ಟಿಲ್ಲ. ಇವತ್ತು ನನ್ನನ್ನು ಅನಾವಶ್ಯಕವಾಗಿ ಪತ್ರಿಕೆಯಲ್ಲಿ ಎಳೆದಿದ್ದಾರೆ. ಇವತ್ತು ಏನು ಬಸ್ಸುಗಳನ್ನು ಸುಟ್ಟಿದ್ದಾರೆಂಬುದು ಇರಬಹುದು, ಈಗ ಏನು ಪ್ರತಿಭಟನೆಗಳು ನಡೆಯುತ್ತಿದೆ, ಅದರ ಹಿಂದೆ ಇರುವವರ ಬಗ್ಗೆಯೂ ಕೂಡ ನನಗೆ ಅರ್ಥವಾಗುತ್ತಿದೆ. ದಯವಿಟ್ಟು ಮುಂದೆ ಈ ಬಗ್ಗೆ ಚರ್ಚೆ ಮಾಡುವುದು ಅನಾವಶ್ಯಕ. ಇದರಲ್ಲಿ ಯಾರದು ತಪ್ಪು. ಯಾರದು ಸರಿ ಎನ್ನುವುದರ ಬಗ್ಗೆ ಸಾರ್ವಜನಿಕರ ತೀರ್ಮಾನಕ್ಕೆ ಈ ಸಂದರ್ಭದಲ್ಲಿ ಬಿಡೋಣ. ಇದನ್ನು ಮತ್ತೇ ಮುಂದುವರಿಸಿ ಸದನದ ಕಲಾಪಗಳನ್ನು ನಾವು ಹಾಳುಮಾಡತಕ್ಕಂತಹದ್ದು ಅನಾವಶ್ಯಕವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವರೆಲ್ಲರೂ ಉತ್ತರವನ್ನು ಕೊಟ್ಟಾಯಿತು. ನನಗೆ ಅವಕಾಶವನ್ನು ತಾವು ಕೊಡಬೇಕು.

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಇನ್ನು ಪೂರ್ಣ ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷದಲ್ಲಿ ಜಿ.ಟಿ.ದೇವೇಗೌಡರು ಮಾತನಾಡಿ ಮುಗಿಸುತ್ತೇನೆಂದು ಹೇಳುತ್ತಿದ್ದಾರೆ. ಕೊನೆಯ ಹಂತದಲ್ಲಿದ್ದಾರೆ, ಒಂದು ನಿಮಿಷದಲ್ಲಿ ಮುಗಿಸುತ್ತೇನೆಂದು ಹೇಳುತ್ತಿದಾರೆ.

ಶ್ರೀ ಜಿ.ಟಿ. ದೇವೇಗೌಡ : ನಾನು ಈಗ ಮಾತನಾಡುತ್ತಿದ್ದೇನೆ,

ಅಧ್ಯಕ್ಷರು : ಬೇಗ ಮುಗಿಸಿ,

ಶ್ರೀ ಜಿ.ಟಿ. ದೇವೇಗೌಡ : ಇಷ್ಟು ಧರಣಿ ಮಾಡಿ ಅವರು ಅಲ್ಲಿಂದ ಬಿಟ್ಟು ಹೋಗಿ ಎಂದು ಹೇಳಿದರೂ ಕೂಡ ಹೋಗಲಿಲ್ಲವೆಂದು ಅವರೇ ಹೇಳಿದ್ದಾರೆ, endorsement ಕೊಡಿ ಎಂದು ಕೇಳಿದ್ದಾರೆ, ನನ್ನನ್ನು ಜೈಲಿಗೆ ಕಳುಹಿಸಿ, ಏತಕ್ಕೆ ಕರೆದುಕೊಂಡು ಬಂದಿದ್ದೀರಿ ಎಂದು ಕೇಳಿರುವುದು ತಮಗೆ ಗೊತ್ತಿದೆ. ಇದಾದ ಮೇಲೆ ಬಂದ್‌ಗೆ ಕರೆ ಕೊಡುತ್ತಾರೆ. ಬಂದ್‌ಗೆ ಕರೆ ಕೊಡತಕ್ಕಂಥ ಸಮಯದಲ್ಲಿ ಬೆಳಿಗ್ಗೆ ಭಾನುವಾರದ ದಿನ ಕೆಲವೇ ಅಂಗಡಿಗಳು ಬಾಗಿಲು ತೆರೆದಿರುತ್ತದೆ, ದೇವರಾಜ ಅರಸು ರಸ್ತೆಯಲ್ಲಿ ಭಾನುವಾರ ರಜೆ,. ಅವತ್ತು ಅಲ್ಲಿ ಅಂಗಡಿಯವರಿಗೆ ಏಟು ಹೊಡೆದಿದ್ದಾರೆ, ಯಾರು ಹಿಂಬಾಲಕರೆಂದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿದೆ, ಆ ಅಂಗಡಿಯವರಿಗೆ ಏಟು ಹೊಡೆದಿದ್ದಾರೆ, ಅಂಗಡಿಗಳನ್ನು ಮುಚ್ಚಿಸಿದ್ದಾರೆ, ತಾವು ಟಿ.ವಿ.ಯಲ್ಲಿ ನೋಡಿ. ದೂರದರ್ಶನದಲ್ಲಿ ನೋಡಿ, ಹೊಡೆದು ಬಡಿದು ಅಂಗಡಿಗಳನ್ನು ಮುಚ್ಚಿಸಿದ್ದಾರೆ ತಮಗೆ ಗೊತ್ತಿದೆ, ಸುಪ್ರೀಂಕೋರ್ಟಿನ ಇತ್ತೀಚಿನ ತೀರ್ಪಿನ ಪ್ರಕಾರ ಯಾರಾದರೂ ಕೂಡ ಈ ರೀತಿ ಪ್ರತಿಭಟನೆ ಸಭೆಗಳನ್ನು ಕರೆದಂಥ ಸಂದರ್ಭದಲ್ಲಿ ಸಾರ್ವಜನಿಕ ಅಸ್ತಿಪಾಸ್ತಿಗಳಿಗೆ ನಷ್ಟವಾದರೆ ಯಾರು ಕರೆ ಕೊಡುತ್ತಾರೆ, ಅವರೇ ಜವಾಬ್ದಾರರಾಗಬೇಕಾಗುತ್ತದೆ, ಅವರೇ ನಷ್ಟವನ್ನು ತುಂಬಿಕೊಡಬೇಕು ಎನ್ನತಕ್ಕಂಥಾದ್ದು ತಮಗೆಲ್ಲಾ ಗೊತ್ತಿದೆ, ಇವತ್ತು ಅಷ್ಟೇ ಅಲ್ಲ, ಕೊನೆಯದಾಗಿ ಹೇಳುತ್ತಾರೆ, ವಿಜಯ ಕರ್ನಾಟಕದಲ್ಲಿ ಅವರೇ ಹೇಳಿದ್ದಾರೆ.

ಅಧ್ಯಕ್ಷರು : ದೇವೇಗೌಡರೇ,

ಶ್ರೀ ಕೆ.ಆರ್. ರಮೇಶ್ ಕುಮಾರ್ : I am on a Point of order. ನಾನು ಕ್ರಿಯಾಲೋಪ ಎತ್ತಿದ್ದೇನೆ.

ಶ್ರೀ ಜಿ.ಟಿ.ದೇವೇಗೌಡ : ಅವರು ಒಂದು ಮಾತು ಹೇಳುತ್ತಾರೆ. ಕಾಂಗ್ರೆಸ್ಸಿನಲ್ಲಿ ಸಿದ್ದರಾಮಯ್ಯನವರನ್ನು ನಿರ್ಲಕ್ಷಿಸಲಾಗುತ್ತಿದೆ ಎಂಬ ಬೇಸರದಿಂದ ಅವರ ಶಕ್ತಿ ಪ್ರದರ್ಶನಕ್ಕೆ ಪ್ರತಿಭಟನೆ ಮಾಡುತ್ತಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ, ಇವತ್ತು ಇಡೀ ರಾಜ್ಯದಲ್ಲಿ...

(ಈ ಹಂತದಲ್ಲಿ ಹಲವು ಸದಸ್ಯರು ಒಟ್ಟಿಗೆ ಎದ್ದುನಿಂತು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಅವರು ಹೇಳಿಕೆಯನ್ನು ಕೊಡುತ್ತಾರೆ, ಇದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಒಬ್ಬ ಹಿರಿಯ ಮುಖಂಡರಾದಂಥ ಮಲ್ಲಿಕಾರ್ಜುನ ಖರ್ಗೆಯವರು ತಾವೇ ಹೇಳಿದಿರಿ, ನಾವು ೪೦ ವರ್ಷಗಳ ಕಾಲ ರಾಜಕೀಯ ಮಾಡಿದೆವು, ನಮ್ಮ ಕ್ಷೇತ್ರದಲ್ಲಿ ಈ ರೀತಿ ಒಂದು ಘಟನೆಯಾಗಿಲ್ಲ. ಎಲ್ಲರೂ ಒಟ್ಟಿಗೆ ಹೋಗಬೇಕೆಂಬ ಒಳ್ಳೆಯ ಸಲಹೆಯನ್ನು ತಾವು ಕೊಟ್ಟಿದ್ದೀರಿ, ಅದನ್ನು ಅವರಿಗೂ ನೀವು ಕೊಡಬೇಕಲ್ಲವೇ? ನಮಗೇನು ಸಲಹೆಯನ್ನು ಕೊಟ್ಟಿದ್ದೀರಿ, ಅದನ್ನು ಅವರಿಗೂ ನೀವು ಸಲಹೆಯನ್ನು ಕೊಡಬೇಕಲ್ಲವೇ?

ಅಧ್ಯಕ್ಷರು : ಅವರು ಎಲ್ಲರಿಗೂ ಸಲಹೆ ಕೊಟ್ಟಿದ್ದಾರೆ ಅದು ಎಲ್ಲರಿಗೂ ಅನ್ವಯವಾಗುತ್ತದೆ.

ಶ್ರೀ ಎಸ್. ಮಲ್ಲಿಕಾರ್ಜುನ ಖರ್ಗೆ : ಕೇಳುವವರಿಗಾದರೆ ಹೇಳಬಹುದು. ನೀವು ಕೇಳುವುದೇ ಇಲ್ಲವಲ್ಲ.

(ಗೊಂದಲ)

ಶ್ರೀ ಜಿ.ಟಿ.ದೇವೇಗೌಡ : ನಾನು ಇಷ್ಟೇ ಹೇಳುತ್ತೇನೆ ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯಲ್ಲಿ ನಷ್ಟವಾಗಿದೆ, ಶಾಂತಿಯುತವಾಗಿರುವ ಜಿಲ್ಲೆ ಚಾಮುಂಡೇಶ್ವರಿ ಕ್ಷೇತ್ರ. ಇವತ್ತು ಆ ಜಿಲ್ಲೆಯ ಶಾಂತಿಯನ್ನು ಕಂಡಿದ್ದಾರೆ. ಇದರಿಂದ ಅಧ್ಯಕ್ಷರು, ವಿರೋಧ ಪಕ್ಷದ ನಾಯಕರು ಎಲ್ಲರೂ ಬಂದು ದಳ ತೆಗೆಯುತ್ತೇವೆ, ಬಿ.ಜೆ.ಪಿ. ತೆಗೆಯುತ್ತೇವೆ, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತದೆಂದು ಹೇಳಿದ್ದಾರೆ. ಈಗ ಅಧಿಕಾರ ಜನರ ಕೈಯಲ್ಲಿದೆ, ನಿಮ್ಮ ಕೈಯಲ್ಲಿಲ್ಲ. ಇವತ್ತು ಅಧಿಕಾರಿ ಯಾರು ಇಂಥ ತೀರ್ಮಾನವನ್ನು ಕೈಗೊಂಡಿದ್ದಾರೆ. ಅವರು ಹಾಗೆ ಮಾಡದಿದ್ದರೆ ಅನಾಹುತವಾಗುತ್ತಿತ್ತು. ಅವರು ನಿಷ್ಠಾವಂತರಾಗಿ ಕೆಲಸ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಆಯಿತು, ಜನ ತೀರ್ಮಾನ ಮಾಡುತ್ತಾರೆ ಬಿಡಿ.

(ಗೊಂದಲ)

ಅಧ್ಯಕ್ಷರು : ಈಗ ಅವರು ಜಿಲ್ಲಾ ಸಚಿವರು, ಅವರ ಉತ್ತರವನ್ನು ಅವರು ಹೇಳಲಿ ಎಂದು ಅವಕಾಶ ಕೊಟ್ಟರೆ ಎಲ್ಲರು ಹೀಗೆ ಮಾತನಾಡಿದರೆ ಹೇಗೆ?

ಶ್ರೀ ಕೆ.ಆರ್.ರಮೇಶ್‌ಕುಮಾರ್ (ಶ್ರೀನಿವಾಸಪುರ) : ಸನ್ಮಾನ್ಯ ಅಧ್ಯಕ್ಷರೇ, ಸ್ವಲ್ಪ ಮಟ್ಟಿಗಾದರೂ ನಾವು ನಿಯಮಾವಳಿಗಳ ಪ್ರಕಾರ ಕೆಲಸ ಮಾಡಿದರೆ ಸದನದ ಗೌರವ, ನಿಮ್ಮ ನಮ್ಮ ಗೌರವವೆಲ್ಲಾ ಹೆಚ್ಚಾಗುತ್ತದೆ. ಅವರು ಪ್ರಿವಿಲೇಜ್‌ಗೆ ನೋಟಿಸ್ ಕೊಟ್ಟಿದ್ದಾರೆ, ಪ್ರಿಲಿಮನರಿ ಸಬ್ ಮಿಷನ್ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಿ. ಸರ್ಕಾರದ ಪರವಾಗಿ ಮಾನ್ಯ ಗೃಹ ಮಂತ್ರಿಗಳು ಈ ಸದನದ ಸಂಪ್ರದಾಯದಂತೆ ಸಂಸದೀಯ ವ್ಯವಹಾರಗಳ ಸಚಿವರು ಎತ್ತಿದ ಅಂಶಗಳನ್ನೊಳಪಡಿಸಿ ಎಲ್ಲವನ್ನು ಸವಿಸ್ತಾರವಾಗಿ ಉತ್ತರಕೊಟ್ಟಿದ್ದಾರೆ. ಸರ್ಕಾರ ಅಂದರೆ ಒಂದೇ, ಎರಡೆರಡು ಇರುವುದಿಲ್ಲ. ಒಂದು ಸಲ ಸರ್ಕಾರದ ಪರವಾಗಿ ಅಧಿಕೃತವಾದ ಹೇಳಿಕೆಯನ್ನು ಅವರು ಮಾಡಿದ ಮೇಲೆ that becomes the staement of the

Government. A Minister is a Government by himself. ಮತ್ತೊಬ್ಬ ಮಂತ್ರಿ ತಾನು ಇನ್ನೊಂದು ಹೇಳಿಕೆಯನ್ನು ಕೊಡಲಿಕ್ಕಾಗುವುದಿಲ್ಲ.

ಶ್ರೀ ಜಿ.ಟಿ.ದೇವೇಗೌಡ: (ಸಹಕಾರ ಸಚಿವರು) : ನನ್ನ ಹೆಸರನ್ನು ಎಳೆದಿದ್ದಾರೆ, ಹೀನಾಯಮಾನವಾಗಿ ಬಯ್ದಿದ್ದಾರೆ. ಹರಾಜು ಹಾಕಿದ್ದಾರೆ. ನಮ್ಮನ್ನು ಬಯ್ದಿದ್ದಾರೆ, ಜನಕ್ಕೆ ಉತ್ತರ ಕೊಡುವವರಿಲ್ಲ, ಅಧ್ಯಕ್ಷರೇ, ಬಹಳ ಹೀನಾಯಮಾನವಾಗಿ ಬಯ್ದಿದ್ದಾರೆ, ಪತ್ರಿಕೆಯವರನ್ನು ಕೇಳಿ , ಸಾರ್ವಜನಿಕರನ್ನು ಕೇಳಿ, ಮಾತನಾಡಬಾರದು, ಉತ್ತರ ಕೊಡಬಾರದಂತೆ, ತಿಳಿದಿರುವುದನ್ನು ಹೇಳಬಾರದಂತೆ, ಹಿರಿಯರು ಅವರು, ಅವರ ಬಗ್ಗೆ ನಮಗೆ ಗೌರವವಿದೆ, ಮೈಸೂರಿನಲ್ಲಿ ಹೋಗಿ ಕೇಳಿ, ನನ್ನನ್ನು ಹೇಗೆ ಬಯ್ದಿದ್ದಾರೆ, ನಾನು ತಪ್ಪು ಮಾಡಿದ್ದೇನೆಯೇ? ಏಕೆ ಬೈಸಿದಿರಿ ನೀವು?

ಅಧ್ಯಕ್ಷರು : ರಾಜಕಾರಣ ಮಾಡುವುದೇ ಬಯ್ದಾಡುವುದಕ್ಕೆ ಎನ್ನುವ ರೀತಿ ಬಂದುಬಿಟ್ಟಿದ್ದೀರಿ, ಏನು ಮಾಡುವುದು ದುರ್ದೈವ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇಡೀ ಸದನ ಗುಣಕ್ಕೆ ಮತ್ಸರ ಇಲ್ಲ. ಮುಖ್ಯಮಂತ್ರಿಗಳನ್ನು ಬೇರೆ ವಿಚಾರಗಳಲ್ಲಿ ವಿರೋಧ ಮಾಡಬಹುದು. ಅವರು ಒಂದು ದೊಡ್ಡ ಮಾತನ್ನು ಹೇಳಿದರು, ನಾನು ಕಿರಿಯವನಾಗಿದ್ದೇನೆ, ಅನಿರೀಕ್ಷಿತ ಘಟನೆಗಳ ಕಾರಣಗಳಿಂದ ನಾನು ಮುಖ್ಯಮಂತ್ರಿ ಆಗಿದ್ದೇನೆ ನನಗೆ ಅನುಭವ ಕಡಿಮೆ, ಆದುದರಿಂದ ಅನಾವಶ್ಯಕವಾಗಿ ಯಾವುದೇ ವಿಷಯದಲ್ಲಿ ಮೂಗು ತೂರಿಸುವುದಿಲ್ಲ. ನಾವು ಸತ್ಯವನ್ನು ಸತ್ಯವೆಂದು ಒಪ್ಪಿಕೊಳ್ಳೋಣ ಎಂದು ಹೇಳಿದ್ದಾರೆ. ಅದನ್ನು ನಾವು ಶ್ಲಾಘನೆ ಮಾಡತಕ್ಕಂಥ ವಿಚಾರ, ಏನು ಅವರನ್ನು ವಿರೋಧ ಮಾಡುತ್ತೇವೆಂದು ಅದನ್ನು ಟೀಕೆ ಮಾಡುವುದೇ? ಪ್ರತಿಯೊಬ್ಬರು ನಾವು ತಿಳಿದುಕೊಳ್ಳುವುದು, ನಾನು ಮಾನ್ಯ ಸಹಕಾರ ಸಚಿವರಾದ ದೇವೇಗೌಡರನ್ನು ಟೀಕೆ ಮಾಡಲಿಲ್ಲ, ನಿಯಮಾವಳಿಗಳನ್ನಷ್ಟೆ ಉಲ್ಲೇಖ ಮಾಡಿದೆ, ತಮ್ಮಲ್ಲಿ ನಾನು ಅರಿಕೆ ಮಾಡಿಕೊಳಳುವುದು ಇಷ್ಟೆ, ಅವರು ಕೆಲವು ಮೂಲಭೂತವಾದ ವಿಚಾರಗಳನ್ನು ತಮ್ಮ ಮುಂದೆ ಪ್ರಸ್ತಾಪ ಮಾಡಿ ಒಬ್ಬ ಶಾಸಕನಾಗಿ ಸಂವಿಧಾನಬದ್ಧವಾಗಿ ನನ್ನ ಕೆಲಸ ನಿರ್ವಹಣೆ ಮಾಡಲಿಕ್ಕೆ ಇಂತಿಂಥ ಅಡಚಣೆಗಳನ್ನು ಇಂತಿಂಥವರು ಉಂಟುಮಾಡಿದ್ದಾರೆಂದು ತಮ್ಮ ಅಳಲನ್ನು ತಮ್ಮ ಮುಂದೆ ತೋಡಿಕೊಂಡಿದ್ದಾರೆ.

ಮಾನ್ಯ ಸಂಸದೀಯ ಸಚಿವರು ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ, ಅವರು ಹೇಳಿಕೆಯನ್ನು ಬೇಕಾದರೆ ತಾವು ಇನ್ನೊಮ್ಮೆ ಪುನಃ ಪರಿಶೀಲನೆ ಮಾಡಿ ನೋಡಿ, ಯಾವ ಖಚಿತ ಆರೋಪಗಳನ್ನು ಕೆಲವು ಅಧಿಕಾರಿಗಳ ಉದ್ಧಟ ವರ್ತನೆಯ ವಿಚಾರದಲ್ಲಿ ಇವರು ಹೇಳಿದ್ದಾರೆ, ಅದಕ್ಕೆ ಅವರು ಉತ್ತರಿಸಲಿಲ್ಲ. ಆ ಅಧಿಕಾರಿಗಳು ಒಳ್ಳೆಯವರೇ, ಕೆಟ್ಟವರೇ ಎನ್ನುವಂಥ ತೀರ್ಮಾನಕ್ಕೆ ಏಕಾಏಕಿ ಬರತಕ್ಕಂಥ ತೀರ್ಮಾನ ನಮ್ಮಲ್ಲಿ ಯಾರಿಗೂ ಇಲ್ಲ, ಅವರು ಈ ಸದನದ ಸದಸ್ಯರೂ ಅಲ್ಲ. ಅವರು ಆ ರೀತಿ ಹೇಳಿದರೋ ಇಲ್ಲವೋ ನಮಗೆ ಗೊತ್ತಿಲ್ಲ, ಏಕಮುಖವಾಗಿ ನಾಳೆ ಇವತ್ತು ನಡೆದಂತಹ ಕಲಾಪಗಳೆಲ್ಲಾ ಪತ್ರಿಕೆಗಳಲ್ಲಿ ಅಚ್ಚಾದಾಗ ಅವರು ಸಾರ್ವಜನಿಕರ ದೃಷ್ಟಿಯಲ್ಲಿ ಆರೋಪಿಗಳಾಗಿ ಕಾಣುತ್ತಾರೆ, ಅವರಿಗೂ ತಮ್ಮದೇ ಆದಂಥ ಸಮಾಜ, ಸ್ನೇಹಿತರು ಮತ್ತೊಬ್ಬರು ಪರಿಚಯಸ್ಥರು ಎಲ್ಲರೂ ಇರುತ್ತಾರೆ, ಅವರು ಗೌರವದಿಂದ ಬಾಳಬೇಕು, ಒಂದು ವೇಳೆ ಸಿದ್ಧರಾಮಯ್ಯನವರು ಆವೇಶದಲ್ಲಿ ಸತ್ಯ ಅಲ್ಲದೇ ಇರತಕ್ಕಂಥ ವಿಚಾರವನ್ನು ಹೇಳಿರಬಹುದು, ಅದಕ್ಕೆ ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ ನಮ್ಮಲ್ಲಿ ಇಂಥ ಕಗ್ಗಂಟು ಏರ್ಪಟ್ಟಾಗ ಇಂಥ ವಿಚಾರಗಳನ್ನು ಪರಿಶೀಲನೆ ಮಾಡಲಿಕ್ಕೆ, ಇತ್ಯರ್ಥ ಮಾಡಲಿಕ್ಕೆಂತಲೇ ನಮ್ಮ ಹಿಂದಿನವರು ಬಹಳ ಆಲೋಚನೆ ಮಾಡಿ ಅನುಭವದ ಆಧಾರದ ಮೇಲೆ Privilege Committee ಅನ್ನು ರಚನೆ ಮಾಡಿರತಕ್ಕಂಥದ್ದು, ಇದಕ್ಕೆ ನಾವೇನು ಬಂಡವಾಳ ಹಾಕಬೇಕಾಗಿಲ್ಲ. ಬಜೆಟ್ ಅಲೋಕೇಷನ್ ಮಾಡಬೇಕಾಗಿಲ್ಲ. ತಾವು ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಯ ವ್ಯಾಪ್ತಿಗೆ ರೆಫರ್ ಮಾಡಿದರೆ ಆ ಅಧಿಕಾರಿಗಳಿಗೂ ಕೂಡ ಪಾಪ notices serve ಮಾಡುತ್ತಾರೆ, witnesses ಆಗಿ ಕರೆಸುತ್ತಾರೆ, ಅವರೇನು ಸತ್ಯ ಸುಳ್ಳು ಎಂದು, ದಯಮಾಡಿ ಕೇಳಿ ತಾವು, ಅವರಿಗೂ ಹೇಳಲಿಕ್ಕೆ ಅವಕಾಶ ಇರುತ್ತದೆ.

ಅಧ್ಯಕ್ಷರು : ಈಗ ಎಲ್ಲಾ ನಡೆದುಹೋಗಿದೆ, ಎಲ್ಲಾ ಈ ಸಾಲಿನಲ್ಲಿ ಮಾತನಾಡಿ ಆಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಆರೋಪವನ್ನು ಮಾಡಿರತಕ್ಕಂಥ ಸದಸ್ಯರನ್ನು ಕೂಡ ಆಗ witness ಆಗಿ ಅವರನ್ನು ಕರೆಯುತ್ತಾರೆ, ಅವರಿಗೆ ನ್ಯಾಯ ಸಿಗುವುದು ಬೇಡವೇ, ಅಧಿಕಾರಿಗಳಿಗೆ ನ್ಯಾಯ ಸಿಗುವುದು ಬೇಡವೇ?

ನಾವೇನೋ ಸದನದ ಸದಸ್ಯರು ನಮಗೆ ಬೇಕಾದುದ್ದನ್ನು ನಾವು ಹೇಳಿದೆವು, ಅವರು ಎಲ್ಲಿ ಹೇಳಿಕೊಳ್ಳಬೇಕು ಪಾಪ, ಅವರಿಗೂ ನ್ಯಾಯ ದೊರಕಿಸಿಕೊಡುವಂಥ ಜವಾಬ್ದಾರಿ ನಮ್ಮ ಮೇಲಿದೆಯೆಲ್ಲಾ, ಅದಕ್ಕೆ ನಾನು ನಮ್ಮಲ್ಲಿ ವಿನಂತಿಸುತ್ತೇನೆ, ಮಾನ್ಯ ಪ್ರಕಾಶ್ ರವರು ಹೇಳಿದ್ದು, ಒಂದು ಘಳಿಗೆಗೆ ಗೆಳೆಯರಾದಂಥ ದೇವೇಗೌಡರು ಹೇಳಿದ ಎಲ್ಲಾ ಮಾತುಗಳು ಸತ್ಯವೆಂದು ತಿಳಿದುಕೊಳ್ಳೋಣ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವಂಥಾದ್ದು simple, ಇದನ್ನು ದಯಮಾಡಿ Privilege Committee ಗೆ ನೀವು ರೆಫರ್ ಮಾಡಿ Privilege Committee ಯಲ್ಲಿ ಎಲ್ಲಾ ಅನುಭವಸ್ಥ ಸದಸ್ಯರು ಇರುತ್ತಾರೆ, ಇಡೀ ಸದನದ ಎಲ್ಲಾ ಸ್ಥಾಯಿ ಸಮಿತಿಗಳು ಕೂಡ ಈ ಸದನದ ಪರವಾಗಿ ತಮ್ಮ ವಿಶ್ವಾಸದಿಂದ ನಿಯಮಾವಳಿಗಳ ಚೌಕಟ್ಟಿನೊಳಗೆ ಕೆಲಸ ಮಾಡತಕ್ಕಂಥದ್ದು. ಅವರು ಎಲ್ಲಾ ವಿಚಾರವನ್ನು ಪರಾಂಬರಿಸಿ ನಂತರ ನಮಗೆ ವರದಿ ಕೊಡಲಿ, ಒಂದು ವೇಳೆ ತಪ್ಪಿತಸ್ಥರು ಯಾರಾದರೂ ಇದ್ದರೆ ಅವರಿಗೆ ಶಿಕ್ಷೆಯಾಗಲಿ, ಅಧಿಕಾರಿಗಳೂ ಒಂದು ವೇಳೆ ತಪ್ಪು ಮಾಡಿದರೆ ಅವರಿಗೆ ಛೀಮಾರಿ ಹಾಕಲಿ ಮುಂದಕ್ಕೆ ಇಂಥ ಘಟನೆಗಳು ಸಂಭವಿಸದೇ ಇರುವುದಕ್ಕೆ ಎಲ್ಲರೂ ಸ್ವಲ್ಪ ಜಾಗೃತರಾಗಿ ನಡೆದುಕೊಳ್ಳುವುದಕ್ಕೆ, ತಮ್ಮ ಇತಿಮಿತಿಗಳನ್ನು ಅರಿತುಕೊಳ್ಳುವುದಕ್ಕೆ ಒಂದು ಸಲ ರೆಫರ್ ಮಾಡಿದರೆ ತಮಗೆ ಆಗತಕ್ಕಂಥ ನಷ್ಟವೇನಿಲ್ಲ, ತಮ್ಮ ಘನತೆ ಮತ್ತಷ್ಟು ಹೆಚ್ಚಾಗುತ್ತದೆ, ದಯಮಾಡಿ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕು ಎಂದು ನಾನು ತಮ್ಮ ಮುಂದೆ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ನೀವು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಲಿಕ್ಕೆ ನೋಟಿಸ್ ಕೊಟ್ಟಾಗಲೇ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ, ಮತ್ತೆ ನೀವು..

ಶ್ರೀ ಸಿದ್ಧರಾಮಯ್ಯ : ಅವರು ಉತ್ತರ ಕೊಟ್ಟ ಮೇಲೆ ನಾನು ಹೇಳುವುದು ಇದೆ, ಎರಡೇ ನಿಮಿಷ, ನಾನು Privilege Committee ಗೆ ಇದನ್ನು ರೆಫರ್ ಮಾಡಲಿಕ್ಕಾಗಿಯೇ ನೋಟಿಸ್ ಕೊಟ್ಟಿರುವವನು. ನನಗೆ ಈ ರೀತಿ ಅಗೌರವವಾಗಿರುವುದು, ನನ್ನ ಹಕ್ಕುಚ್ಯುತಿ ಆಗಿದೆ ಎಂಬ ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಸರ್ಕಾರ ಉತ್ತರ ಕೊಟ್ಟಿದೆ, ಮುಖ್ಯಮಂತ್ರಿಗಳು ಹೇಳಿದ್ದಾರೆ, ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಪತ್ರಿಕೆಗಳನ್ನೆಲ್ಲಾ ಆಧಾರವಾಗಿಟ್ಟುಕೊಂಡು ಆ ರೀತಿ ಬಂದಿದೆ, ಈ ರೀತಿ ಬಂದಿದೆ ಎಂದೆಲ್ಲಾ ಹೇಳಿದ್ದಾರೆ. ಅದಕ್ಕೆ ಅವರು

ಮಾತನಾಡಿರುವುದಕ್ಕೆ ತಕ್ಕಂತೆ ನಾನು ಸ್ವಲ್ಪ ಹೇಳಬೇಕಲ್ಲವೇ? ಇದು ಸತ್ಯವೇ, ಸತ್ಯಕ್ಕೆ ದೂರವಾದದ್ದೇ ಅಥವಾ ಸತ್ಯವೇ ಎನ್ನುವುದನ್ನು ಹೇಳಬೇಕಲ್ಲವೇ? ಏನು ಹೇಳಿದ್ದಾರೆ ಮಾನ್ಯ ಕಾನೂನು ಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಕೊಡಬೇಕಾದರೆ, ನಾನು ಆರೋಗ್ಯ ಇಲಾಖೆಯ ಅಧಿಕಾರಗಳನ್ನು ಕೇಳಿಲ್ಲ. ಅವರು ಅಲ್ಲಿ ಇರಲೇ ಇಲ್ಲ, ಅವರು ಬಂದೇ ಇರಲಿಲ್ಲವೆಂಬುದನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ, ನಾನೇನು ಆರೋಗ್ಯ ಇಲಾಖೆಯವರಿಗೆ function ಮಾಡುತ್ತೇನೆಂದು ಅವರಿಗೆ ಹೇಳಿ ಕಳುಹಿಸಿರಲಿಲ್ಲ. ನಾನು ಮೈಸೂರಿನಲ್ಲಿರುವಾಗ ಅವರೇ ನನ್ನ ಹತ್ತಿರ ಬಂದರು, ಸರ್ ಎಂದರು, ಅದಕ್ಕೆ ಆಯಿತು ನಾನು ಬರ್ತೀನಿ, ೩೧ನೇ ತಾರೀಖು ನಾನು ಮೈಸೂರಿನಲ್ಲಿರುತ್ತೇನೆ ಅವತ್ತು ಬರುತ್ತೇನೆ, ನೀವು ಯಾರ್ಯಾರಿಗೆ ಹೇಳಬೇಕೋ ಅವರಿಗೆಲ್ಲಾ ಹೇಳಿಬಿಡಿ ಎಂದು ಹೇಳಿದೆ, ಆ ರೀತಿ ಹೇಳಿದ ಮೇಲೆ ಇವರೇನು ಈಗ ರಿಪೋರ್ಟ್ ಹೇಳುತ್ತಿದ್ದಾರೆ, ಇಲ್ಲ, ಇಲ್ಲ ಜಿಲ್ಲಾ ಮಂತ್ರಿಗಳನ್ನು ಕೇಳಿದೆವು, concerned ಮಂತ್ರಿಗಳನ್ನು ಕೇಳಿದೆವು ಎಂದು ಅದನ್ನು ಅವರು ಮತ್ತೆ ಬಂದು ನನಗೇನೂ ಹೇಳಲಿಲ್ಲ. ಜಿಲ್ಲಾ ಮಂತ್ರಿಗಳನ್ನು ಕೇಳಿದೆವು ಎಂದು ಹೇಳಲಿಲ್ಲ, ಅವರು ಬೇಡವೆಂದರೂ ಅಂತಲೂ ಹೇಳಲಿಲ್ಲ ಅಥವಾ concerned minister ಆರೋಗ್ಯ ಮಂತ್ರಿಗಳನ್ನು ಕೇಳಿದೆವು, ಅವರು ಮುಂದಕ್ಕೆ ಹಾಕಿ ಎಂದರು ಎಂದು ಸಹ ಹೇಳಲಿಲ್ಲ. ಮತ್ತೆ ಅವರು ನನ್ನನ್ನು ಭೇಟಿಯೇ ಮಾಡಲಿಲ್ಲ. ನಾನು ಬೆಂಗಳೂರಿನಲ್ಲಿಯೇ ಇದ್ದೆ. ಆಮೇಲೆ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರಿಗೆ ಪೊಲೀಸರು, ಎಸ್.ಪಿ. ಏನೋ ಗಲಾಟೆಯಾಗುತ್ತದೆ, ಯಾರೋ ದೇವರಾಜ್ ಎನ್ನುವ ಛೇರ್ಮನ್ ಬಂದು ನಮಗೆ ಗಲಾಟೆ ಆಗುವ ಸಾಧ್ಯತೆ ಇದೆ ಅದನ್ನು ತಡೆಯಿರಿ, ನಾನು ಕರೆದಿಲ್ಲವೆಂದು ಬಂದು ಇಲ್ಲಿ ಕೊಟ್ಟಿದ್ದಾರೆಂದು ಅವರಿಗೆ ಹೇಳಿದರಂತೆ. ನನಗೆ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರು ಹೇಳಿದರು, ನಾನು ಕೂಡಲೇ ೩೧ನೇ ತಾರೀಖು ಬೆಳಿಗ್ಗೆ ೧೦.೦೦-೧೦.೩೦ ಗಂಟೆಯಲ್ಲಿ ಎಸ್.ಪಿ.ಗೆ ಫೋನ್ ಮಾಡಿದೆ, ಏನ್ರೀ ಇದು ಏನೋ ಗಲಾಟೆ ಮಾಡುತ್ತಾರಂತಲ್ಲ, ನೋಡಪ್ಪ, it is your look out, ಅದನ್ನು ನೀವು ಮಾಡಬೇಕು, ಹಿಂದೆ ಎಲ್ಲಾ ಹೀಗೆ ಮಾಡಿದಿರಿ, ಕಾರ್ಯಕ್ರಮ ನಡೆಯುವಾಗ ಯಾರೂ ಅಡ್ಡಿಪಡಿಸುತ್ತಾರೆ ಅವರನ್ನು ಅರೆಸ್ಟ್ ಮಾಡಿ ಹೊರಗಡೆ ಕರೆದುಕೊಂಡು ಹೋಗಿ ಬಿಟ್ಟಿದ್ದೀರಿ, ಕಾರ್ಯಕ್ರಮ ಮಾಡಲಿಕ್ಕೆ ಅನುವು ಮಾಡಿಕೊಟ್ಟಿದ್ದೀರಿ ಆ ರೀತಿ ಈಗಲೂ ಮಾಡಿ ಎಂದು

ಹೇಳಿದೆ. ಅದಕ್ಕೆ ಅವರು yes ಎಂದು ಹೇಳಿದರು. ಅದಾದ ಮೇಲೆ ನಾವು ಹೋದೆವು, ನಾವು ಹೋದದ್ದು ೪.೦೦ ಗಂಟೆಗಿಂತ ಜಾಸ್ತಿಯಾಗಿತ್ತು. ಅಲ್ಲಿ ಹೋದಾಗ ಆರೋಗ್ಯಾಧಿಕಾರಿಗಳು ಎಲ್ಲಿ ಬಿಲ್ಡಿಂಗ್ ಪೂಜೆ ಮಾಡಬೇಕೋ ಅಲ್ಲಿ ಇದ್ದಾರೆ, ಅವರೆಲ್ಲಾ ಪೂಜೆಗೆಲ್ಲಾ ಸಾಮಾನುಗಳನ್ನು ಇಟ್ಟುಕೊಂಡಿದ್ದಾರೆಂದು ಅಧಿಕಾರಿಗಳು ಹೇಳಿದರು, ಅಲ್ಲಿ E.O. ಇದ್ದರು, ತಹಸೀಲ್ದಾರ್ ಇದ್ದರು. Assistannt Commissioner ಆಮೇಲೆ ಬಂದರು ಈ ಸಮನ್ ಮಾಡಿದ ಮೇಲೆ , ಆ ತಾಲ್ಲೂಕು ಮಟ್ಟದ ಅಧಿಕಾರಿಗಳೆಲ್ಲಾ ಅಲ್ಲೇ ಇದ್ದರು. ನಾನು ಯಾವತ್ತೂ ಕೂಡ ಅಥವಾ ಅವರಿಗೆ ತಾಲ್ಲೂಕು ಪಂಚಾಯಿತಿ ಛೇರ್ಮನ್‌ರಿಗಾಗಲೀ ಅಥವಾ ಇನ್ನಾರಿಗಾದರೂ ಆಗಲಿ ಅವರ್ಯಾರು..

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) : ಬುದ್ಧಿವಂತರಾಗಿ ಅವರೇ ತಾಳ್ಮೆಯಿಂದ ಇದ್ದಿದ್ದರೆ ಈ ಘಟನೆಯೇ ನಡೆಯುತ್ತಿರಲಿಲ್ಲ, ಆ ಕ್ಷೇತ್ರಕ್ಕೆ ಇವರ್ಯಾಕೆ ಹೋಗಬೇಕಾಗಿತ್ತು. ನೀವು ಬೇರೆಯವರಿಗೆ ಮಾರ್ಗದರ್ಶಕರಾಗಬೇಕು, ನೀವೊಬ್ಬ ಅನುಭವಿಗಳಾಗಿ ಉಪಮುಖ್ಯಮಂತ್ರಿಗಳಾಗಿ ಮೂರು ಸಲ ಎಂಎಲ್ಎ ಆಗಿ ಇಂಥ ಒಂದು ಸಣ್ಣ ಫಂಕ್ಷನ್ ಗೆ ನೀವು ಹೋಗಿ ಇದನ್ನು prestige issue ಮಾಡುತ್ತಿದ್ದೀರಿ, ಅವರನ್ನು ಕರೆಯಬೇಡಿ. ಇವರನ್ನು ಕರೆಯಬೇಡಿ, ನನಗೆ ಇಷ್ಟ ಬಂದ ಹಾಗೆ ಮಾಡುತ್ತೇನೆ, ಏನು ಹಕ್ಕು? ಅವರಿಗೂ ಹಕ್ಕಿದೆ. ಜನಪ್ರತಿನಿಧಿಯಾಗಿ ಅವರಿಗೂ ಹಕ್ಕಿದೆ. ಈಗ ಘಟನೋತ್ತರ ಕಥೆಯನ್ನು ಹೇಳುತ್ತಿದ್ದಾರಲ್ಲಾ, ಅದರ ಮೊದಲೇ ಯೋಜನೆ ಮಾಡಬೇಕಾಗಿತ್ತು. ನೀವೇ ಸ್ವಲ್ಪ ಜವಾಬ್ದಾರಿಯಿಂದ ನಡೆದುಕೊಂಡಿದ್ದರೆ, ನೀವು ಯಾವ ರೀತಿ ವರ್ತಿಸಬೇಕು, ಗಲಾಟೆ ಆಗಬಾರದೆನ್ನುವುದಕ್ಕೆ ನಿಮಗೂ ಜವಾಬ್ದಾರಿ ಇಲ್ಲವೇ, ನೀವು ತಪ್ಪು ಇಟ್ಟುಕೊಂಡು ಸರ್ಕಾರದ ಮೇಲೆ ತಪ್ಪು, ಪೊಲೀಸಿನವರದು ತಪ್ಪು ಎಂದರೆ ನಿಮ್ಮ ಮೇಲೆ ತಪ್ಪು ಇಲ್ಲವೇ, ಇದಕ್ಕೆ ಕಾರಣ ಇವರ ತಪ್ಪು, ಇವರ ತಪ್ಪಿನಿಂದಲೇ ಈ ಘಟನೆ ಆಗಿದೆ. ಇಲ್ಲದಿದ್ದರೆ ಏನೂ ಆಗುತ್ತಿರಲಿಲ್ಲ.

ಶ್ರೀ ಸಿದ್ಧರಾಮಯ್ಯ : ಆಯಿತು, ನಿನ್ನಷ್ಟು ಅನುಭವವಿಲ್ಲ ನನಗೆ, ಕುಳಿತುಕೊ, ಆಯಿತು ಕುಳಿತುಕೊ, ಅಧ್ಯಕ್ಷರೇ, ಅವರನ್ನು ಕೂರಿಸಿ, ಹೌದು, ನನಗೆ ಇಷ್ಟ ಬಂದ ಹಗೆ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಆಯಿತು ಸುಮ್ಮನೆ ಕುಳಿತುಕೊಳ್ಳಿ, ಮಾತನಾಡಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಜಯಕುಮಾರ್ ರವರ ಹತ್ತಿರ ನಾನು ಬುದ್ಧಿವಾದ ಹೇಳಿಸಿಕೊಳ್ಳಬೇಕಾದಾಗ ಅವರ ಹತ್ತಿರ ಹೋಗುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ : ನಿಮ್ಮ ತಪ್ಪಿನಿಂದಲೇ ಈ ಗಲಾಟೆಯಾಗಿರುವುದು. ಇಲ್ಲದೇ ಹೋದರೆ ಏನು ಗಲಾಟೆಯೂ ಆಗುತ್ತಿರಲಿಲ್ಲ. ಈ ಘಟನೆ ಕೂಡ ಆಗುತ್ತಿರಲಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಬೇಜವಾಬ್ದಾರಿಗೆ ಯಾರ ಹೆಸರನ್ನಾದರೂ ಹೇಳಬಹುದು.

ಅಧ್ಯಕ್ಷರು : ಈಗ ಸಿದ್ಧರಾಮಯ್ಯನವರೇ, ನೀವು ಪ್ರಿವಿಲೇಜ್ ನೋಟಿಸ್ ಕೊಟ್ಟಿದ್ದೀರಿ, ನೀವು ಮಾತನಾಡಬೇಕಿತ್ತು, ಯಾರೂ ಮಾತನಾಡುವುದು ಬೇಕಿರಲಿಲ್ಲ. ಎಲ್ಲರೂ ಕೇಳಿದ್ದಕ್ಕೆ, ಗಂಭೀರವಾದ ಚರ್ಚೆ ನಾವು ಮಾತನಾಡುತ್ತೇವೆ ಎಂದರೆ ನಾನು ಅವಕಾಶ ಕೊಡದೇ ಇರುವುದಕ್ಕಾಗುತ್ತದೆಯೇ? ಅಥವಾ ಯಾರೋ ಎದ್ದುನಿಂತುಕೊಂಡರೆ ನಾನೇನು ಮಾಡಲಿಕ್ಕಾಗುತ್ತದೆ. ಸುಮ್ಮನೆ ನೋಡಿ, ಇಲ್ಲೇನಾಗಿದೆಯೆಂದರೆ ..

ಶ್ರೀ ಸಿದ್ದರಾಮಯ್ಯ : ನೀವು ಸದನವನ್ನು ನಿಯಂತ್ರಣಕ್ಕೆ ತರಬೇಕು, ನಾನಲ್ಲ, ನೀವು ಕಂಟ್ರೋಲ್ ಮಾಡಬೇಕು.

ಅಧ್ಯಕ್ಷರು : ಯಾವ ರೀತಿ ಕಂಟ್ರೋಲ್ ಮಾಡುವುದು ಹೇಳಿ. ಎಲ್ಲಾ ಎದ್ದು ನಿಂತುಕೊಂಡರೆ regulate ಮಾಡುವುದು ಹೇಗೆ, ಪ್ರತಿಯೊಬ್ಬರು ಅವರ

ಜವಾಬ್ದಾರಿಯನ್ನು ಅರಿತುಕೊಂಡು ನಾವು ಯಾವ ರೀತಿ ಯಾವ ಸಂದರ್ಭದಲ್ಲಿ ಮಾತನಾಡಬೇಕು ಕನ್ನುವುದಿದ್ದರೆ ನಾವು regulate ಮಾಡಬಹುದು ಸ್ವಾಮಿ.

ಶ್ರೀ ಸಿದ್ದರಾಮಯ್ಯ : ನೀವು ತೆಗೆದುಕೊಳ್ಳುವುದಿಲ್ಲವೆಂದ ಮೇಲೆ ನಾವೇನು ಮಾಡಲಿಕ್ಕಾಗುವುದಿಲ್ಲ. ಕೇಳಿ ಈಗ ನಾನು ಯಾರಿಂದ ಪಾಠ ಕಲಿಯಬೇಕಾದಂಥ ಅಗತ್ಯವಿಲ್ಲ. ನನಗೆ ಎಷ್ಟು ಅನುಭವ, ಬುದ್ಧಿ ಇದೆ ಅಷ್ಟರೊಳಗೆ ನಾನು ಮಾಡುತ್ತೇನೆ, ಬೇಕಾದಾಗ ಯಾರ ಹತ್ತಿರ ಬೇಕೋ ಅವರ ಹತ್ತಿರ ಹೋಗುತ್ತೇನೆ, ಇಲ್ಲಿ ಪ್ರಶ್ನೆ ಬಂದಿರುವುದು.. ನನಗೆ ನಿಮ್ಮಷ್ಟು ಅನುಭವವಿಲ್ಲ, ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಏನು ಪದೇ ಪದೇ ಮಾತನಾಡೋದು, ಕುಳಿತುಕೊಳ್ಳಿ, ಸರ್ಕಾರದ ಮಂತ್ರಿಯಾಗಿದ್ದೇನೆಂದು ಬಾಯಿಗೆ ಬಂದ ಹಾಗೆ ಮಾತನಾಡುತ್ತೀರಿ, ಹೌದೌದು.

ಅಧ್ಯಕ್ಷರು : ಬೇಗ ಮುಗಿಸೋಣ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ ನಾನು ಈಗ ಜಯಕುಮಾರ್‌ರವರಿಗೆ ಉತ್ತರ ಕೊಡುವುದನ್ನು ಬಿಟ್ಟುಬಿಟ್ಟಿದ್ದೇನೆ. ಬೇರೆಯವರ ಜೊತೆ ಮಾತನಾಡುವುದನ್ನೇ ಬಿಟ್ಟುಬಿಟ್ಟಿದ್ದೇನೆ. ಯಾರಿಗೂ ಉತ್ತರಕೊಡುವುದಿಲ್ಲ ನಾನು, ಪಾಪ ಅವರು ಏನು ಅಂದುಕೊಳ್ಳುತ್ತಾರೋ ಅಂದುಕೊಳ್ಳಲಿ. ಏಕೆಂದರೆ ಅವರೆಲ್ಲಾ ದೊಡ್ಡ ಮಂತ್ರಿಗಳು, ದೊಡ್ಡವರು ಎಂದು ತೀರ್ಮಾನ ಮಾಡಿ ಅವರು ನನಗೆ ಬಾಯಿಗೆ ಬಂದ ಹಾಗೆ ಬಯ್ದರೂ ಮಾತನಾಡುವುದಿಲ್ಲ, ಏನು ಮಾತನಾಡಿದರೂ ಮತನಾಡುವುದಿಲ್ಲ. ಆದ್ದರಿಂದ ನಾನು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ, ಈಗ ಏನಾಗಿದೆ, ಅಲ್ಲಿ ಪೊಲೀಸನವರು ಸೆಕ್ಷನ್ ೧೪೪ ಅನ್ನು ಹಾಕಿದ್ದೇವೆಂದು ಹೇಳುತ್ತಿದ್ದಾರೆ. ಮಾನ್ಯ ಪ್ರಕಾಶ್ ರವರೂ ಕೂಡ ಲಾಯರ್ ಕೆಲಸ ಮಾಡಿದ್ದೀರಿ ನೀವು. ಸ್ಪೀಕರ್ ಗೆ ಈ ಕಾಪಿಯನ್ನು ಯಾರು ಕಳುಹಿಸಿರುವುದು ? ಇದನ್ನು ಓದಿ ನೀವು, ಮುಂಜಾಗ್ರತಾ ಕ್ರಮವಾಗಿ ಕಲಂ ೭೧ರ ಪ್ರಕಾರ ಸಿದ್ಧರಾಮಯ್ಯನವರನ್ನು ದಸ್ತಗಿರಿ ಮಾಡಿದ್ದೀರಿ, ಅರೆಸ್ಟ್ ಮಾಡಿಲ್ಲವೆಂದು ಹೇಗೆ ಹೇಳುತ್ತಾರೆ? ಅವರು ಅರೆಸ್ಟ್ ಮಾಟಿಬಿಟ್ಟು D.A.R. ನಲ್ಲಿರತಕ್ಕಂಥ ಒಂದು ಹಾಲ್ ಗೆ ತೆಗೆದುಕೊಂಡು ಹೋದ ತಕ್ಷಣ

ನಾವು ಅವರನ್ನು ಮದುವೆ ಹಾಲ್ ಗೆ ಕರೆದುಕೊಂಡು ಹೋಗಿದ್ದೆವು ಎಂದರೆ ಅವರಿಗೆ ಗೌರವ ಬಂದುಬಿಡುತ್ತದೆಯೇ? ಕರೆದುಕೊಂಡು ಹೋಗಿರುವುದು D.A.R. Office ಗೆ . ಅಲ್ಲಿ ನನ್ನನ್ನು ಒಂದೂವರೆ ಗಂಟೆಯವರೆಗೆ ಕೂರಿಸಿದ್ದಾರೆ. ಆಮೇಲೆ ನಾನು ಯಾವ ಕಲಂ ಪ್ರಕಾರ arrest ಮಾಡಿದ್ದೀರಿ? ಯಾವ ಐ.ಪಿ.ಸಿ., ಸಿ.ಆರ್.ಪಿ.ಸಿ. ಮೇಲೆ ಮಾಡಿದ್ದೀರಾ? ನನ್ನ ಮೇಲೆ ಯಾವ ಆರ್ಡರ್ ಮೇಲೆ ಮಾಡಿದ್ದೀರಿ ತೆಗೆಯಪ್ಪಾ ಎಂದರೆ, ಆಮೇಲೆ ಒತ್ತಾಯ ಮಾಡಿದ ಮೇಲೆ ಇದನ್ನು ಈ ಪತ್ರವನ್ನು ಕೊಟ್ಟರು, ದಸ್ತಗಿರಿ ಮಾಡಿದ್ದೇವೆ ನಿಮ್ಮನ್ನು ಎಂದು. ನಾನು ಹಾಗಾದರೆ ಕೋರ್ಟ್‌ಗೆ produce ಮಾಡಪ್ಪಾ ಎಂದೆ. ಇಲ್ಲಿ ನೋಡಿ, ಪೊಲೀಸಿನವರೇ ನನ್ನ ಕೈಗೆ ಕೊಟ್ಟಿರುವುದು. ಅದು ಇವರಿಗೆ ಬಂದಿದೆ, ಓದಲಿಕ್ಕೆ ಕಳುಹಿಸಲೇ.

ಶ್ರೀ ಎಂ.ಪಿ. ಪ್ರಕಾಶ್ : ಗೊತ್ತು ನನಗೆ, ತಾವು ಹೋಗಿದ್ದನ್ನು ನಾನು ಕೂಡ ನೋಡಿದ್ದೇನೆ. ಒಮ್ಮೊಮ್ಮೆ ದಸ್ತಗಿರಿಯಾದರೂ ನಿಯಂತ್ರಿಸುವುದರ ಬಗ್ಗೆ ತಿಳುವಳಿಕೆ ಇಲ್ಲದೆ ಕೊಟ್ಟಿರುವಂಥದ್ದು.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ನಾನು ಇಲ್ಲಿ ಯಾವ ಮಾತಿಗೂ ಹೆದರುವವನಲ್ಲ, ಸತ್ಯವೇನೆಂಬುದನ್ನು ಹೇಳಿದ್ದೇನೆ. ಸೆಕ್ಷನ್ ೭೧ ಏನು ಇದೆ ಎಂದು ಹೇಳಿದ್ದೇನೆ. They have to be restrained. ಯಾವುದಾದರೂ ಒಂದು ಡೈರೆಕ್ಷನ್ ಹೋದಾಗ ಅದನ್ನು ಅನುಸರಿಸೇಕು. ಅದನ್ನು ಪದೇ ಪದೇ ಇದನ್ನೇ ಚರ್ಚೆ ಮಾಡಿಕೊಳ್ಳುತ್ತಾ ಕುಳಿತರೆ ಅದನ್ನು ನಿಮ್ಮ ಇಚ್ಛೆಗೆ ಬಿಟ್ಟಿದ್ದೇವೆ, ಇದನ್ನು ತಿರಸ್ಕರಿಸಬಹುದು. ನಾವೇನು ಉತ್ತರವನ್ನು ಕೊಟಿದ್ದೇವೆ ಅದನ್ನು ಇಲ್ಲಿಗೆ ಮುಕ್ತಾಯ ಮಾಡಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಇಲ್ಲವೆಂದು ಹೇಳಲಿ ಬಿಡಿ, ಪೊಲೀಸಿನವರಿಗೆ ದಸ್ತಗಿರಿ ಎಂದರೆ ಯಾವುದು ಎಂದು ಗೊತ್ತಿದೆಯೇ ಇವರಿಗೆ, ಎಸ್. ಪಿ, ಸೀನಿಯರ್ ಐ.ಪಿ.ಎಸ್. ಆಫೀಸರ್, ಆಯಿತು, ಆಯಿತು, ತಾವು ಹೇಳಿದ್ದನ್ನೆಲ್ಲಾ ಕೇಳಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ತಮ್ಮ ವಿವೇಚನೆಯಿಂದ ಅದನ್ನು ತಿರಸ್ಕಾರವನ್ನಾದರೂ ಮಾಡಿ ಅಥವಾ ನಿಮ್ಮ ವಿವೇಚನೆ ಮೂಲಕ ಇನ್ನಾವುದಾದರೂ ಪರ್ಯಾಯವಾಗಿರುವದನ್ನಾದರೂ ಮಾಡಿ. I leave it to you.

ಅಧ್ಯಕ್ಷರು : ಅದು ಸರಿ,

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಅದನ್ನೇ ನಾನು ಡಿಮ್ಯಾಂಡ್ ಮಾಡಿದ್ದು, my prayer is also that.

ಶ್ರೀ ಎಂ.ಪಿ. ಪ್ರಕಾಶ್ : Under section 71 it has been treated as....

ಶ್ರೀ ಸಿದ್ಧರಾಮಯ್ಯ : Mr. Prakash, Home minister, ಅವರ ಪೊಲೀಸ್ ಆಫೀಸರ್ಸ್ ಗೆ ದಸ್ತಗಿರಿ ಎಂದರೆ ಗೊತ್ತಿಲ್ಲ. arrest ಎಂದರೆ ಗೊತ್ತಿಲ್ಲ, ಇವರೇನು ಗೊತ್ತಿಲ್ಲದೇ ಈ ರೀತಿ ಮಾಡಿಬಿಟ್ಟಿದ್ದಾರೆಂದು ನೀವು ತೀರ್ಮಾನ ತೆಗೆದುಕೊಳ್ಳಿ....

ಶ್ರೀ ಪಿ.ಜಿ. ಆರ್. ಸಿಂಧ್ಯಾ : ಅಧ್ಯಕ್ಷರೇ, ತಾವು ಇದನ್ನು ದಯವಿಟ್ಟು ಸದನಕ್ಕೆ ತಿಳಿಸಬೇಕು,. ಏಕೆಂದರೆ ಪೊಲೀಸ್ ಅಧಿಕಾರಿಗಳು ತಮಗೆ ವರದಿಯನ್ನು ಕಳುಹಿಸಿರುವಂಥಾದ್ದು, ಈಗ ಗೃಹ ಮಂತ್ರಿಗಳು ಏನು ಹೇಳುತ್ತಿದ್ದಾರೆ, ದಸ್ತಗಿರಿ ಮಾಡಲಿಲ್ಲವೆಂದು ಹೇಳುತ್ತಿದ್ದಾರೆ, ತಾವು ಸದನಕ್ಕೆ ತಿಳಿಸಿ, ಇಂಥ ಸದಸ್ಯರನ್ನು ದಸ್ತಗಿರಿ ಮಾಡಿದ್ದಾರೋ ಇಲ್ಲವೋ, ಇದರ ಬಗ್ಗೆ ಮಾಹಿತಿ ಬಂದಿದೆಯೋ ಇಲ್ಲವೋ ತಾವು ದಯವಿಟ್ಟು ಕ್ಲಾರಿಫೈ ಮಾಡಿ.

(ಗೊಂದಲ)

ಅಧ್ಯಕ್ಷರು : ಸಮಯ ಹಾಳಾಗುತ್ತದೆ ವಿನಃ ಈ ರೀತಿ ಮಾಡಿದರೆ ಏನೂ ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ದಸ್ತಗಿರಿ ಮಾಡಿದ್ದರೆ ಬಾಂಡ್ ಗೆ ಸೈನ್ ಮಾಡಿಸಿಕೊಳ್ಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಇದೇನು, ನೀವೆಲ್ಲಾ ಹುಡುಗರ ತರಹ ಆಡುತ್ತಿದ್ದೀರಿ, ಸ್ವಲ್ಪ ಸುಮ್ಮನಿರಿ, ಎಲ್ಲಾ ನೀವೇ ಹೇಳಬೇಕು.

ಶ್ರೀ ಸಿದ್ಧರಾಮಯ್ಯ : ಅಧ್ಯಕ್ಷರೇ, ಎರಡೇ ನಿಮಿಷದಲ್ಲಿ ನಾನು ಮುಗಿಸುತ್ತೇನೆ, ಈಗ ನನ್ನನ್ನು ದಸ್ತಗಿರಿ ಮಾಡಿದ್ದೇವೆಂದು ಪೋಲೀಸಿನವರು ಹೇಳಿದ್ದಾರೆ, ಅವರು ಮೊದಲು ದಸ್ತಗಿರಿ ಮಾಡಿಲ್ಲವೆಂದು ಹೇಳಿದರು, ಹಾಗಾದರೆ ನನ್ನನ್ನು ಹೇಗೆ ಕರೆದುಕೊಂಡು ಬಂದಿರಿ ಎಂದು ಕೇಳಿದೆ, ಕೇಳಿ, ಅದನ್ನೇ ನಾನು ಅಲ್ಲೇ ಕುಳಿತು ಧರಣಿ ಮಾಡುತ್ತಿದ್ದೆ.

ಶ್ರೀ ಎಂ.ಪಿ. ಪ್ರಕಾಶ್ : ಹಾಗಿದ್ದರೆ ಹೊರಗೆ ಏಕೆ ಬಂದಿರಿ ? ರಾತ್ರಿ ಒಂದುವರೆ ಗಂಟೆಗೆ ಹೊರಗಡೆ ಬಂದರಲ್ಲ, ಹೇಗೆ ಬಂದಿರಿ?

(ಗೊಂದಲ)

(ಒಟ್ಟಿಗೆ ಎಲ್ಲಾ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಧರಂಸಿಂಗ್ : ಅವರು ಬಹಳ ವಿವರವಾಗಿ ಹೇಳಿದ್ದಾರೆ..-

(ಗೊಂದಲ)

ಶ್ರಿ ಕೆ. ಜಯಪ್ರಕಾಶ್ ಹೆಗ್ಡೆ : ತಮಗೆ ಮಾಹಿತಿ ಬಂದಿದ್ದರೆ ದಯವಿಟ್ಟು ಈ ಮನೆಗೆ ಓದಿ ಹೇಳಿ.

(ಗೊಂದಲ)

ಅಧ್ಯಕ್ಷರು : ಸ್ವಲ್ಪ ದಯವಿಟ್ಟು ಕುಳಿತುಕೊಳ್ಳಿ. ಎಲ್ಲಾ ತಾವೇ ಹೇಳಿದ ಹಾಗೆ ಆಗುತ್ತದೆಯೇ?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಈಗ ನನ್ನನ್ನು ದಸ್ತಗಿರಿ ಮಾಡಿದ್ದೇವೆಂದು ಪೊಲೀಸಿನವರು ಹೇಳಿದ್ದಾರೆ. ಅವರು ಮೊದಲು ದಸ್ತಗಿರಿ ಮಾಡಿಲ್ಲವೆಂದು ಹೇಳಿದರು. ಹಾಗಾದರೆ ನನ್ನನ್ನು ಏತಕ್ಕೆ ಕರೆದುಕೊಂಡು ಬಂದಿರಿ ಎಂದು ಕೇಳಿದೆ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್ : ಹಾಗಿದ್ದರೆ ತಾವು ಹೊರಗಡೆ ಹೇಗೆ ಬಂದಿರಿ? ತಾವು ಒಂದೂವರೆ ಗಂಟೆಗೆ ಹೊರಗಡೆ ಬಂದರಲ್ಲ, ---

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾನು ಅಲ್ಲೇ ಧರಣಿ ಮಾಡುತ್ತಿದ್ದೆ..

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕೇಳಬೇಕು, ಈಗ ಸರ್ಕಾರದ ವಾದವನ್ನು ಸರ್ಕಾರ ಇಟ್ಟಿದೆ, ಅವರ ವಿಚಾರವನ್ನು ಅವರು ಇಟ್ಟಿದ್ದಾರೆ, ನಿಮ್ಮ ವಿಚಾರವನ್ನು ನೀವು ಇಟ್ಟಿದ್ದೀರಿ, ಕೆಲವು ವಿಚಾರಗಳಲ್ಲಿ ನಿಮ್ಮ interpretation ನೀವು ಹೇಳಿದ್ದೀರಿ, ಅವರ interpretation ಅವರು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ತಪ್ಪು ರೆಕಾರ್ಡ್‌ನಲ್ಲಿ ಹೋಗಬಾರದು. ಈಗ ಮುಂಜಾಗ್ರತಾ ಕ್ರಮವಾಗಿ ಕಲಂ ೭೧ ಕರ್ನಾಟಕ ಪೊಲೀಸ್ ಕಾಯ್ದೆ ರೀತ್ಯ

ಸಂಜೆ ೭.೩೦ ಗಂಟೆ ಸಮಯದಲ್ಲಿ ದಸ್ತಗಿರಿ ಮಾಡಿ D.A.R. ಕಲ್ಯಾಣ ಮಂಟಪಕ್ಕೆ ಕರೆದುಕೊಂಡು ಬಂದು ರಾತ್ರಿ ೧೦.೦೦ ಗಂಟೆಗೆ ಬಿಡುಗೆ ಮಾಡಲಾಗಿರುತ್ತದೆ. ಆದರೆ ದಸ್ತಗಿರಿ ಮಾಡಿರುವುದನ್ನು ವಿರೋಧಿಸಿ ರಾತ್ರಿ ೧.೦೦ ಗಂಟೆಗೆ ಬಿಡುಗಡೆ ಮಾಡಲಾಗಿರುತ್ತದೆ. ಆದರೆ ದಸ್ತಗಿರಿ ಮಾಡಿರುವುದನ್ನು ವಿರೋಧಿಸಿ ರಾತ್ರಿ ೧.೦೦ ಗಂಟೆಯವರೆಗೆ ಧರಣಿ ಮಾಡಿ ನಂತರ ವಾಪಸ್ಸು ಹೋಗಿದ್ದಾರೆಂದು ತಮಗೆ ವರದಿಯನ್ನು ಕೊಟ್ಟಿದ್ದಾರೆ, ಅಂದರೆ ಬಿಡುಗಡೆಯಾದರೂ ಎಂದು ಎಲ್ಲಿದೆ...

ಶ್ರೀ ಸಿದ್ಧರಾಮಯ್ಯ : ಈಗ ನನ್ನ ಪ್ರಕಾರ ನನಗೆ ಕಾನೂನಿನ ಅರವಿರುವ ಪ್ರಕಾರ it is an illegal detention, arrest ಆಯಿತು, --

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ತಾವು ತಮ್ಮ ತೀರ್ಪು ಕೊಡಿ,

ಶ್ರೀ ಸಿದ್ಧರಾಮಯ್ಯ : ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ್ದಾರೆ. ನಾನು ಕೇಳಿದ್ದೇನೆ, ಅವರು ಆಗುವುದಿಲ್ಲವೆಂದು ಹೇಳಿದ್ದಾರೆ, ಹಕ್ಕುಚ್ಯುತಿ ಆಗುವುದಿಲ್ಲವೆಂದು ಹೇಳಿದ್ದಾರೆ, ನನ್ನ ಪ್ರಕಾರ ಅರೆಸ್ಟ್ ಮಾಡಿದ್ದಾರೆ. ಹಕ್ಕುಚ್ಯುತಿ ಆಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರಿಗೆ ಮತ್ತು ಮಾನ್ಯ ಗೃಹ ಸಚಿವರಿಗೆ ಹೇಳುತ್ತಿರುವಂಥಾದ್ದು ಈ ದಸ್ತಗಿರಿ ಮಾಡಿರುವಂಥದ್ದು preventive detention ಅನ್ನು, ಏಕೆಂದರೆ preventive detention ನಿಮಗೆ ಅರ್ಥೈಸುತ್ತಿದೆ. ಅದಾದರೂ ಹೇಳಿ. Please clarify your statement.

(ಗೊಂದಲ)

ಅಧ್ಯಕ್ಷರು : ಗೃಹಸಚಿವರು ಏನು statement ಮಾಡಿದರು ಅದೇ ನನಗೂ ಬಂದಿರತಕ್ಕಂಥದ್ದು. ನಾನು ನನಗೆ ಕಂಡಂತೆ interpretation ಮಾಡಿ ಹೇಳಲೇ ನಿಮಗೆ.---

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಈ ವಿಚಾರವನ್ನು ಈಗಾಗಲೇ ತಮಗೆ ಹೇಳಿದ್ದೇನೆ, ಸೆಕ್ಷನ್ ೭೦ ರ ಕೆಳಗೆ persons bound to conform to reasonable directions of police. Then Section 71-A Police Officer may restrain or remove any person resisting or refusing or omitting to conform to any direction referred to in section 70 and may either take such person....

ಶ್ರೀ ಸಿದ್ಧರಾಮಯ್ಯ : ಆಯಿತು ಬಿಡಿ, I agree with you, ಅದೆಲ್ಲಾ ಹೇಳಿದ್ದೀರಿ...

ಶ್ರೀ ಎಂ.ಪಿ. ಪ್ರಕಾಶ್ : under this Act Section ೭೧ ರ ಕೆಳಗೆ ತಾವು ಧರಣಿ ಮಾಡಬೇಡಿ ಎಂದು ವಿನಂತಿ ಮಾಡಿಕೊಂಡಿದ್ದಾರೆ, ಆದರೆ ಅವರು ಹೇಳಿರತಕ್ಕಂಥ ಮಾತನ್ನು ತಾವು ಇಲ್ಲ, ನಾನು ಇಲ್ಲಿದ್ದಾಗ ಹೇಳುತ್ತಿರಲಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದಿರಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಅವರು ಸತ್ಯಕ್ಕೆ ದೂರವಾದ ಮಾತನ್ನು ಹೇಳುತ್ತಿದ್ದಾರೆ, ಅದಕ್ಕೋಸ್ಕರ ನಾನು ಒತ್ತಾಯ ಮಾಡುತ್ತಿದ್ದೇನೆ,---

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾವು ಸತ್ಯವನ್ನು ಹೇಳಬೇಕು, ಮುಚ್ಚಿಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾನು ಒತ್ತಾಯ ಮಾಡುತ್ತಿದ್ದೇನೆ, ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಿ. That is our demand.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಸಿದ್ಧರಾಮಯ್ಯನವರು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದಾರೆ, ಅವರೇ ಧಾಟಿಯಲ್ಲಿ ಅವರು ಹೇಳಿದ್ದಾರೆ. ಅನೇಕ ಹಿರಿಯ ಸದಸ್ಯರು ಭಾಗವಹಿಸಿ ಅವರವರ ವಿಚಾರಗಳನ್ನು ಹೇಳಿದ್ದಾರೆ. ಈ ಕಡೆಯಿಂದ ಮಾನ್ಯ ಗೃಹ ಸಚಿವರು ಉತ್ತರ ಹೇಳಿದ್ದಾರೆ. ನಾನು ಎಲ್ಲರ ವಾದವನ್ನು ಕೇಳಿದ್ದೇನೆ. ಈಗ ನನ್ನ ರೂಲಿಂಗ್ ಅನ್ನು ಕಾದಿರಿಸಿದ್ದೇನೆ. ಈಗ ಭೋಜನ ಕೂಟಕ್ಕೆ ಸದನವನ್ನು ಮುಂದೂಡಿ ೪.೩೦ ಗಂಟೆಗೆ ಮತ್ತೆ ಸಭೆ ಸೇರುತ್ತದೆ.

(ಗೊಂದಲ)

(ಸದನವನ್ನು ಮಧ್ಯಾಹ್ನ ೩ ಗಂಟೆ ೩೫ ನಿಮಿಷಕ್ಕೆ ಮುಂದೂಡಿ ಪುನಃ ೪.೩೦ ಗಂಟೆಗೆ ಸೇರಲು ನಿರ್ಧರಿಸಿತು.)

[ಸದನವು ಪುನಃ ಸಂಜೆ ೫ ಗಂಟೆಗೆ ಸಮಾವೇಶಗೊಂಡಿತು]

[ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು]

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ನಾನು ಮಾತನಾಡುತ್ತಿದ್ದೆ, ನಾನು ನನ್ನ ಮಾತನ್ನು ಇನ್ನೂ ಮುಗಿಸಿರಲಿಲ್ಲ, ಆದರೆ ತಾವು immediately House adjourn ಮಾಡಿ ಹೋಗಿಬಿಟ್ಟಿರಿ..

ಅಧ್ಯಕ್ಷರು : ಮಾನ್ಯ ಸಿದ್ಧರಾಮಯ್ಯನವರೇ ನೀವು ಎಲ್ಲವನ್ನೂ ಮಾತನಾಡಿದಿರಿ, ಅವರೂ ಎಲ್ಲದರ ಬಗ್ಗೆಯೂ ಹೇಳಿದರು. ಎಲ್ಲಾ ವಿಚಾರಗಳನ್ನೂ ನಾನು ಕೇಳಿದೆ.

ಶ್ರೀ ಸಿದ್ಧರಾಮಯ್ಯ : ದಯಮಾಡಿಟ್ಟು ಎರಡು ನಿಮಿಷ ನಾನು ಮಾತನಾಡುವುದನ್ನು ನೀವು ಕೇಳಬೇಕು. ಇದನ್ನು Privilege Committee ಗೆ ಒಪ್ಪಿಸಬೇಕು ಎಂದು ನಾವು ನಿಮಗೆ request ಮಾಡುತ್ತಿದ್ದೆವು. ಹಿಂದೆ ಇಂಥದ್ದೆಲ್ಲಾ ಬೇಕಾದಷ್ಟು ನಡೆದಿದೆ, ಆಗೆಲ್ಲಾ ಪ್ರಿವಿಲೇಜ್ ಕಮಿಟಿಗೆ ಒಪ್ಪಿಸಿದ್ದಾರೆ.

ಹಿಂದೆ ಮಾನ್ಯ ಜೀವರಾಜ್‌ರವರಿಗೆ ಸಂಬಂಧಿಸಿದ ಪ್ರಕರಣವನ್ನು ಪ್ರಿವಿಲೇಜ್ ಕಮಿಟಿಗೆ ಒಪ್ಪಿಸಲಾಗಿತ್ತು. ಆಗೆಲ್ಲಾ ಆ ರೀತಿ ತೀರ್ಪು ಕೊಡಿ ಎಂದು ನಾವೆಲ್ಲಾ ಹೇಳಿದ್ದೆವೇ?

ಅಧ್ಯಕ್ಷರು : ನಾನು ಈಗಾಗಲೇ ನನ್ನ ರೂಲಿಂಗ್ ಅನ್ನು reserve ಮಾಡಿದ್ದೇನೆ ಎಂದು ಹೇಳಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಈ ವಿಚಾರದಲ್ಲಿ ರೂಲಿಂಗ್ reserve ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ.

ಅಧ್ಯಕ್ಷರು : ಇದೇನು ಈ ರೀತಿ ಹೇಳುತ್ತಿದ್ದೀರಿ ?...

ಶ್ರೀ ಸಿದ್ಧರಾಮಯ್ಯ : ದಯವಿಟ್ಟು ಒಂದು ನಿಮಿಷ, ನಾನು ಹೇಳುವುದನ್ನು ಕೇಳಿ. I am not disputing. I am just making an appeal. I am making a submission to you. You please consider my submission. ನಾನೇನು ಹೇಳುತ್ತಿದ್ದೇನೆ ಎಂದರೆ, ಈಗ ಸರ್ಕಾರದ ಪರವಾಗಿ ಉತ್ತರ ಕೊಟ್ಟವರು ಏನು ಹೇಳಿದರು ಎಂದರೆ, ' ನಿಮ್ಮನ್ನು ಅರೆಸ್ಟೇ ಮಾಡಿಲ್ಲ, ಅರೆಸ್ಟ್ ಎಂದು ಬರೆದಿರುವ ಪದವೇ ತಪ್ಪು' ಎಂದು ಹೇಳಿ, ಅದನ್ನೇ ಅವರೊಂದು ಹೊಸ definition ಮಾಡಿದರು. ಅದ್ಯಾರೋ ಬೆಂಕಿ ಹಾಕಿದ ೪-೫ ಜನರ ಮೇಲೆ ಕೇಸ್ ಹಾಕಿದ್ದೇವೆ ಎಂದು ಅವರು ಹೇಳಿದರು. ಇವತ್ತು ಮನೆ ಮನೆಗಳಿಗೆ ನುಗ್ಗಿ ನೂರಾರು ಜನರನ್ನು ಅರೆಸ್ಟ್ ಮಾಡಿದ್ದಾರೆ. ಅಷ್ಟೇ ಅಲ್ಲ. ನನಗೆ information ಬಂದಿದೆ, ನನ್ನನ್ನೇ ಮೊದಲನೇ accused ಎಂದು ಮಾಡಿ, Magistrate Court ಗೆ FIR ಕಳುಹಿಸಿದ್ದಾರಂತೆ...

(ಗೊಂದಲ)

ಅಧ್ಯಕ್ಷರು : ಏಕೆ ನೀವೆಲ್ಲಾ ನಿಂತುಕೊಳ್ಳುತ್ತಿದ್ದೀರಿ ? I can't understnd. When he is making a submission, what made you to stand ?

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೇ ರೂಲಿಂಗ್ ಅನ್ನೇ ಪ್ರಶ್ನೆ ಮಾಡುವುದಾದರೆ ಹೇಗೆ ?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಈಗ ಅವರು ನನ್ನ ಮೇಲೆ FIR ಅನ್ನು ಹಾಕುವ ಮಟ್ಟಕ್ಕೆ ಹೋಗಿದ್ದಾರೆ. ಅಂದರೆ ಪೊಲೀಸ್ ನವರು ಎಷ್ಟರಮಟ್ಟಿಗೆ ಹೋಗಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ಸರ್ಕಾರ revenge ತೆಗೆದುಕೊಳ್ಳುತ್ತಿದೆ ಎನ್ನುವುದು ಇದರಿಂದ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತಿದೆ. Spontaneous ಆಗಿ ಯಾರೋ ಬಸ್ಸಿಗೆ ಕಲ್ಲು ಹೊಡಿದರು, ಇನ್ಯಾರೋ ಗಲಾಟೆ ಮಾಡಿದರು ಎಂದ ತಕ್ಷಣವೇ, ನನ್ನ ಮೇಲೆಯೇ FIR ಹಾಕಿ, ಅವರು ನನ್ನನ್ನು ಅರೆಸ್ಟ್ ಮಾಡಿ, ಪೊಲೀಸ್ ಸ್ಟೇಷನ್ ಗೆ ಕರೆದುಕೊಂಡು ಬಂದು, ಧರಣಿ ಮಾಡುತ್ತಿದ್ದ ನನ್ನ ಮೇಲೆ ಕೋರ್ಟ್‌ಗೆ FIR ಹಾಕಿದ್ದಾರೆ ಎಂದ ಮೇಲೆ, ಈ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಇದೆಯೇ?

ಅಧ್ಯಕ್ಷರು : ಮಾನ್ಯ ಸಿದ್ಧರಾಮಯ್ಯನವರೇ ಮಾನ್ಯ ಗೃಹ ಸಚಿವರು ಆ ಮನೆಯಲ್ಲಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಗೃಹ ಮಂತ್ರಿಗಳು ಉತ್ತರ ಕೊಡುವಾಗ ಇದನ್ನು ಹೇಳಲಿಲ್ಲ. ನನ್ನ ಮೇಲೆ FIR ಕಳುಹಿಸಿದ್ದರೆ, ಅದನ್ನು ನಿನ್ನೆಯೇ ಕಳುಹಿಸಿರಬೇಕಲ್ಲವೇ? ನನ್ನನ್ನು ಅರೆಸ್ಟೇ ಮಾಡಿಲ್ಲ ಎಂದು ಹೇಳಿ, ಈಗ ನನ್ನ ಮೇಲೆ FIR ಕಳುಹಿಸಿದ್ದಾರಲ್ಲಾ?

ಅಧ್ಯಕ್ಷರು : ಮಾನ್ಯ ಸಿದ್ಧರಾಮಯ್ಯನವರೇ ತಾವು ಈಗ ಹೊಸ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಇದು ಹೊಸ ವಿಚಾರವಲ್ಲ, ಮಾನ್ಯ ಸಚಿವರು ಉತ್ತರ ಕೊಟ್ಟಾಗ ಈ ಬಗ್ಗೆ ಹೇಳಿದರೇ? ಎಂಬುದನ್ನು ತಾವೇ ಹೇಳಿ. ಅವರು ಉತ್ತರ ಕೊಡುವಾಗ, 'ಸಿದ್ಧರಾಮಯ್ಯನವರ ಮೇಲೆ FIR ಹಾಕಿದ್ದೇವೆ, ನನ್ನನ್ನು

accused No. 1 ಎಂದು ಮಾಡಿದ್ದೇವೆ ಎಂದು ಹೇಳಿದರೇ? ಅವರು ಆ ರೀತಿ ಉತ್ತರ ಕೊಟ್ಟಿರೇ?

ಅಧ್ಯಕ್ಷರು : ನಿಮ್ಮನ್ನು First accused ಎಂದು ಮಾಡಲಾಗಿದೆ ಎಂದು ಈಗ ನೀವು ಹೇಳುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಅದನ್ನು ಅವರು ಹೇಳಬೇಕಾಗಿತ್ತಲ್ಲವೇ?

ಅಧ್ಯಕ್ಷರು : No, No, ಬೆಳಿಗ್ಗೆ ಆ ವಿಚಾರ ಪ್ರಸ್ತಾಪವಾಗಿಲ್ಲ. ಆ ವಿಚಾರವನ್ನು ನೀವು ಈಗ ಪ್ರಸ್ತಾಪ ಮಾಡುತ್ತಿದ್ದೀರಿ. ಅದಕ್ಕಾಗಿ ಅವರನ್ನು ನಾನು ಕರೆಸುತ್ತೇನೆ.

ಶ್ರೀ ಸಿದ್ಧರಾಮಯ್ಯ : ನಾನು ಹೇಳುವುದನ್ನು ಕೇಳಿ. ಇದನ್ನು ದಯಮಾಡಿ ನೀವು Privilege Committee ಗೆ refer ಮಾಡಬೇಕು. ಇದರ ಬಗ್ಗೆ Privilege Committee ತೀರ್ಮಾನ ಮಾಡಲಿ, ಅವರು ಎಲ್ಲರನ್ನೂ enquiry ಮಾಡಲಿ. ನಾನು ಹೇಳುವುದು ಸರಿಯೋ, ಅವರು ಹೇಳುವುದು ಸರಿಯೋ, ಯಾರ್ಯಾರು ಸತ್ಯ ಹೇಳಿದ್ದಾರೆ, ಯಾರು ಸುಳ್ಳು ಹೇಳಿದ್ದಾರೆ ಎನ್ನತ್ಕಂಥದ್ದು ವಿಚಾರಣೆಯಾಗಲಿ ಇದು ಪ್ರಿವಿಲೇಜ್ ಕಮಿಟಿ ಮುಂದೆ ಹೋಗಲಿ. ಅಧಿಕಾರಿಗಳು ಅದರ ಮುಂದೆ ಬರಲಿ, ನಾನೂ ಹೇಳಿಕೆ ಕೊಡುತ್ತೇನೆ, ಬೇರೆಯವರೂ ಹೇಳಿಕೆ ಕೊಡಬೇಕಾಗುತ್ತದೆ, ಅದನ್ನು ನೀವು ಮಾಡಬೇಕಾಗುತ್ತದೆ. ನೀವು ಇದನ್ನು order ಗೆ reserve ಮಾಡಿದ್ದೇನೆ ಎಂದು ಹೇಳಿರುವುದನ್ನು ಪ್ರತಿಭಟಿಸಿ ಧರಣಿ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿದ್ಧರಾಮಯ್ಯನವರೆ, ನಾನು ನಿಮಗೊಂದು ಮಾತು ಹೇಳುತ್ತೇನೆ. You cannot question my decision. I have not given my ruling. ಈ reason ಗಾಗಿ ನೀವು ಧರಣಿ ಮಾಡಿದರೆ ಹೇಗೆ? I have reserved my ruling.

(ಗೊಂದಲ)

ನೀವು ಹೊಸ ಪ್ರಸ್ತಾಪ ಮಾಡಿದ್ದೀರಿ. ಆ ಬಗ್ಗೆ ಉತ್ತರಿಸಲು ನಾನು ಸಚಿವರನ್ನು ಕರೆಸುತ್ತೇನೆ ಎಂದು ಹೇಳಿದ್ದೇನೆ. ನೀವು ಏಕೆ ಈ ರೀತಿಯಾಗಿ ದುಡುಕುತ್ತಿದ್ದೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸರ್ಕಾರದ ಉತ್ತರ ವಿರೋಧಿಸಿ ನಾನು ಧರಣಿ ಮಾಡಲಿಕ್ಕೆ ಹೊರಟಿದ್ದೆ...

(ಗೊಂದಲ)

ಶ್ರಿ ವಾಟಾಳ್ ನಾಗರಾಜ್ : ಮಾನ್ಯ ಸಿದ್ಧರಾಮಯ್ಯನವರೆ. ತಾವು ಧರಣಿ ಮಾಡಬೇಡಿ. ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ತಮಗೆ ಎರಡು ವಿಚಾರಗಳನ್ನು ಗಮನಕ್ಕೆ ತರಬಯಸುತ್ತೇನೆ. ಇಲ್ಲಿ ಚರ್ಚೆಯಾಗುವಾಗ, ಮಾನ್ಯ ಗೃಹ ಮಂತ್ರಿಗಳು ನಾವು ಬಂಧನ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ತಮಗೆ ಬಂದಿರತಕ್ಕಂಥ ಮಾಹಿತಿಯ ಪ್ರಕಾರ....

(ಗೊಂದಲ)

ಅಧ್ಯಕ್ಷರು : ಅವರು ಓದಿದ್ದರಲ್ಲಿಯೂ ಅರೆಸ್ಟ್ ಎಂದು ಇದೆ, ಆದರೆ, ಅವರು ವ್ಯಾಖ್ಯಾನ ಕೊಡುವಾಗ preventive detention ಎನ್ನುವ ತರಹದಲ್ಲಿ ಹೇಳಿದರು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸಾರ್, ಒಂದು ನಿಮಿಷ, ನಾನು ಮುಗಿಸಿ ಬಿಡುತ್ತೇನೆ, ದಸ್ತಗಿರಿಯಾಗಿದೆ ಎಂಬ ಮಾಹಿತಿ ತಮಗೆ ಬಂದಿದೆ. ಈ ಮಧ್ಯೆ,

FIR ಹಾಕತಕ್ಕಂಥ ಅಧಿಕಾರ ಅವರಿಗೆ ಕೊಟ್ಟವರು ಯಾರು ? ಇದನ್ನೆಲ್ಲಾ ನೋಡಿದಾಗ, ಇದೊಂದು plan, ಇದು ಯೋಜಿತವಾದುದು ಎನಿಸುತ್ತದೆ. ಪೂರ್ವ ಯೋಜಿತವಾಗಿ ಸಿದ್ಧರಾಮಯ್ಯನವರನ್ನು ಎಲ್ಲಾ ರೀತಿಯಲ್ಲೂ ಸಿಕ್ಕಿಸಬೇಕು ಎಂಬಂತೆ ಇದು ಇದೆ. ನೀವು ಬಂಧನ ಮಾಡಿದ ಮೇಲೆ ಸಿದ್ಧರಾಮಯ್ಯನವರೇನು ಹೊರಗಡೆ ಗಲಾಟೆ ಮಾಡಲಿಕ್ಕೆ ಹೋಗಿದ್ದಾರೆಯೇ? ಅವರು ಎಲ್ಲಿಗೆ ಹೋಗಿದ್ದರು? ಅವರು ಎಲ್ಲಿ ಗಲಾಟೆ ಮಾಡಲಿಕ್ಕೆ ಹೋಗಿದ್ದಾರೆ? ಯಾರಿಗೆ ಹೇಳಲಿಕ್ಕೆ ಹೋಗಿದ್ದಾರೆ? ಇದೆಲ್ಲಾ ಪಿತೂರಿ, ಆದ್ದರಿಂದ ದಯವಿಟ್ಟು ನೀವು ನಮ್ಮ ರಕ್ಷಣೆಗೆ ಬರಬೇಕು. ಪಕ್ಷಾಥೀತವಾಗಿ ನೀವು ಶಾಸಕರ ರಕ್ಷಣೆಗೆ ಬರಬೇಕಾಗಿದೆ. ಆದ್ದರಿಂದ ತಾವು ಹಕ್ಕುಚ್ಯುತಿಯ ಬಗ್ಗೆ ತೀರ್ಪನ್ನು ಈಗಲೇ ಕೊಡಬೇಕೆಂಬ ಒತ್ತಾಯ ಮಾಡದಿದ್ದರೂ, ನೀವು ಕೊಡುವುದು ಒಳ್ಳೆಯದು ಎನ್ನುವಂತಹ ಮಾತನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಹಿಂದೆ ಮಾನ್ಯ ಜೀವರಾಜ್ ರವರ ಪ್ರಕರಣವನ್ನು ನೀವೇ ಹಕ್ಕುಚ್ಯುತಿ ಸಮಿತಿಗೆ ವಹಿಸಿದ್ದಿರಿ. ಇದನ್ನು ಏಕೆ ಮಾಡಿಲ್ಲ ?

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಜೀವರಾಜ್ ವಿಷಯ ಬೇರೆ, ಇದು ಬೇರೆ, ಅವರನ್ನು ೧೧ ದಿವಸ ಜೈಲಿನಲ್ಲಿ ಹಾಕಿದ್ದರು. ಇದು ಬೇರೆ, ಅದು ಬೇರೆ, ಮಾನ್ಯ ನಾಗರಾಜ್ ರವರೆ, ಆಗ ತಾವೇ ಅವರ ಪರವಾಗಿ ಮಾತನಾಡಿದ್ದೀರಿ. ಈಗ ರೂಲಿಂಗ್ ಕೊಟ್ಟಿದ್ದನ್ನು ಪ್ರಶ್ನೆ ಮಾಡಬಾರದೆಂದು ನೀವೇ ನಿಮ್ಮ ಅನುಭವದಲ್ಲಿ ಹೇಳುತ್ತೀರಿ. ಮಾನ್ಯ ಅಧ್ಯಕ್ಷರು ತಮ್ಮ ತೀರ್ಮಾನವನ್ನು reserve ಮಾಡಿದ್ದಾರೆ. ಅವರು ತಮ್ಮ ತೀರ್ಮಾನವನ್ನೇನು ನಿಮ್ಮ ವಿರುದ್ಧವಾಗಿ ಕೊಟ್ಟಿಲ್ಲ ಅಥವಾ ಪರವಾಗಿ ಕೊಟ್ಟಿಲ್ಲ. ರೂಲಿಂಗ್ ಅನ್ನು ಪ್ರಶ್ನೆ ಮಾಡುವುದು ಸೂಕ್ತವಲ್ಲ. ರೂಲಿಂಗ್ ಅನ್ನು reserve ಮಾಡಿದ ಮೇಲೆ, ಅದು ಬರುವವರೆಗೆ wait ಮಾಡಬೇಕಾಗುತ್ತದೆ, ಸಮಾಧಾನವಾಗಿ ನೀವು ಕದ್ದು ನೋಡಬೇಕಾಗುತ್ತದೆ. ಮಾನ್ಯ ಗೃಹ ಮಂತ್ರಿಗಳು ಆ ಮನೆಯಲ್ಲಿದ್ದಾರೆ. ಅವರ ಮೇಲೆ FIR ಹಾಕಿದ್ದಾರೋ, ಇಲ್ಲವೋ, ಹಾಕಿದ್ದರೆ ಯಾವ ವಿಚಾರದಲ್ಲಿ ಹಾಕಿದ್ದರೆ ಎಂಬ ಬಗ್ಗೆ ಉತ್ತರಿಸಲು ಅವರನ್ನು ಕರೆಸುತ್ತೇವೆ, ಆಗ ಅವರು ಮಾತನಾಡಿ ವಿಚಾರ ತಿಳಿಸುತ್ತಾರೆ. ದಯವಿಟ್ಟು, ಅವರು ಬಂದ ಮೇಲೆ ಈ ವಿಚಾರ ಮಾತನಾಡಲು ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ತಾವು ಕೊಟ್ಟಿರತಕ್ಕಂಥ ತೀರ್ಮಾನವನ್ನು ಪ್ರಶ್ನೆ ಮಾಡಲಿಕ್ಕೆ ನನಗೆ ಹಕ್ಕಿಲ್ಲ, ಅದಕ್ಕಾಗಿ ನಾನು ಎದ್ದು ನಿಂತಿಲ್ಲ. ಆದರೆ ಈ ಮಧ್ಯೆ ಆಗಿರತಕ್ಕಂಥ ಬೆಳವಣಿಗೆಗಳ ಬಗ್ಗೆ ಇನಿಷ್ಟು ಪಕ್ಷ ವಿಧಾನಸಭೆ ನಡೆಯತಕ್ಕಂಥ ಸಂದರ್ಬದಲ್ಲಿ, ನಮ್ಮೆಲ್ಲರನ್ನೂ ಕಾಪಾಡತಕ್ಕಂಥದ್ದು, ರಕ್ಷಣೆ ಮಾಡತಕ್ಕಂಥದ್ದು ನಿಮ್ಮ ಹಕ್ಕು ಅದು ನಿಮ್ಮ ಕರ್ತವ್ಯವೆಂಬುದು ನಿಮಗೆ ಗೊತ್ತಿದೆ. ಈ ಸಂದರ್ಭದಲ್ಲಿ, ಇದರಲ್ಲಿ ರಾಜಕೀಯ ಬೆರೆಸಬೇಕು ಎಂದು ಖಂಡಿತವಾಗಿಯೂ ನಮಗ್ಯಾರಿಗೂ ಇಷ್ಟವಿಲ್ಲ. ಮಾನ್ಯ ಮುಖ್ಯಮಂತ್ರಿಗಳು, ನಾನು ಇದನ್ನೆಲ್ಲಾ ಗಮನಿಸುತ್ತಿದ್ದೇನೆ ಎಂದು ಹೇಳಿದ್ದನ್ನು. I appreciate that fact. ಆದರೆ Government has to take a stand on this issue. Mr. Siddaramaiah is not just an individual. ಅನೇಕ ಸಂದರ್ಭಗಳಲ್ಲಿ ಪ್ರಶ್ನೆ ಏನಾಗುತ್ತದೆ ಎಂದರೆ, ಈಗ ಪ್ರತಿಭಟನೆಯಾಗಿದೆ, ನಮ್ಮ ಮಾನ್ಯ ದೇವೇಗೌಡರು ಮಾತನಾಡತಕ್ಕಂಥ ಸಂದರ್ಭದಲ್ಲಿ ಬಸ್ಸುಗಳಿಗೆ ಬೆಂಕಿ ಹಾಕಲಿಕ್ಕೆ ಸಿದ್ದರಾಮಯ್ಯನವರು ಹೇಳಿದರು, ಮತ್ತೊಂದು ಮಾಡಿ ಎಂದು ಹೇಳಿದರು ಎನ್ನುವುದಕ್ಕೆಲ್ಲಾ ಈ ಸದನದಲ್ಲಿ ಅವಕಾಶಗಳು ಆಗಿದೆ. ಈ ಮಧ್ಯೆದಲ್ಲಿ ಈಗ ಬಂದಿರತಕ್ಕಂಥ ಮಾಹಿತಿ ಪ್ರಕಾರವಾಗಿ, ಅವರ ಮೇಲೆ FIR ಹಾಕಿ, ಮತ್ತೆ arrest ಮಾಡಬೇಕು ಎನ್ನುವುದಕ್ಕೆ ಹಿಂದೆ-ಮುಂದೆ ನೋಡುವುದಿಲ್ಲ. ಏಕೆಂದರೆ, ಮಾನ್ಯ ಅಧ್ಯಕ್ಷರೆ, ನೀವು ನಾನು, ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಎಂ.ಪಿ. ಪ್ರಕಾಶ್ ರವರು ಮತ್ತು ಮಾನ್ಯ ಜಿ.ಟಿ. ದೇವೇಗೌಡರು, ನಾವೆಲ್ಲಾ ಒಂದೇ ಪಕ್ಷದಲ್ಲಿ ಬೆಳೆದವರು, ಒಂದೇ ಪಕ್ಷದಲ್ಲಿ ಕೆಲಸ ಮಾಡಿರುವವರು. ಎಲ್ಲೆಲ್ಲಿ ಏನೇನು ರಾಜಕೀಯ ಶಕ್ತಿಗಳು ಕೆಲಸ ಮಾಡುತ್ತವೆ ಎನ್ನುವಂತಹ ಅರಿವು ನಮಗೆಲ್ಲರಿಗೂ ಸಹಿತ ಇದೆ. ಇದು ನಿಜವಾಗಿ ಹೇಳುತ್ತಿದ್ದೇನೆ. ಇಂತಹ ವಿಚಾರದಲ್ಲಿ ಕರ್ನಾಟಕ ವಿಧಾನ ಸಭೆಯಲ್ಲಿ ಒಂದು ಕೆಟ್ಟ ಪರಂಪರೆಯನ್ನು ನಾವು ಪ್ರಾರಂಭ ಮಾಡಿದಂತಾಗುತ್ತದೆ. ಇವತ್ತು ನಮಗೆ ಇದು ಬಹಳ ಸುಲಭವಾಗಿ ಕಾಣಬಹುದು. ಆರೆ ನಾಳೆ ಏನಾಗುತ್ತದೆ ಎಂದರೆ, ಅಧಿಕಾರಶಾಹಿಗಳ ಕೈ ಮೇಲಾಗುತ್ತದೆ, ಸರ್ಕಾರ ಇದರ ಹಿಂದೆ ಇಲ್ಲ ತಾನೇ? ಒಂದು ಪಕ್ಷ ಸಿದ್ಧರಾಮಯ್ಯನವರೇ ದುಂಡಾವರ್ತಿ ಮಾಡಿಕೊಂಡು, ಆ ಕಾರ್ಯಕ್ರಮವನ್ನು

ಹಾಕಿಕೊಂಡರು ಎಂದೇ ಇಟ್ಟುಕೊಳ್ಳೋಣ. ಸರ್ಕಾರದ ಕೈವಾಡ ಇದರಲ್ಲಿ ಏನೂ ಇಲ್ಲದೆ ಹೋದರೆ, ಅವರು arrest ಮಾಡಿದ್ದು ತಪ್ಪು ಎನ್ನುವುದಾದರೆ, ಸರ್ಕಾರದವರೇಕೆ ಅವರನ್ನು defend ಮಾಡಿಕೊಳ್ಳುತ್ತಿದ್ದೀರಿ? ಆ Dy. S.P. ಯನ್ನು ನೀವೇಕೆ suspension ನಲ್ಲಿ ಇಡಬಾರದು ? ಕನಿಷ್ಟ ಪಕ್ಷ ಇದರ ಬಗ್ಗೆ enquiry ಮಾಡುತ್ತೇವೆ ಎಂದು ಹೇಳತಕ್ಕಂಥ ಸೌಜನ್ಯತೆ ಕೂಡ ಸರ್ಕಾರಕ್ಕೆ ಇಲ್ಲವಲ್ಲಾ? ಅದರಲ್ಲೂ ಎಂ.ಪಿ. ಪ್ರಕಾಶ್ ಗೆ ಆ ಸೌಜನ್ಯ ಇಲ್ಲವಲ್ಲಾ. ನೀತಿ, ಕಾನೂನು ಮತ್ತು ಎಲ್ಲಾ ತರಹದ adjectives, qualifications ಎಂ.ಪಿ. ಪ್ರಕಾಶ್‌ಗೆ ಇದೆ. ಅವರು ಈ ರಾಜ್ಯದಲ್ಲಿ ಸೌಜನ್ಯಭರಿತವಾಗಿರತಕ್ಕಂಥ ರಾಜಕಾರಣಿಗಳು, ಸುಸಂಸ್ಕೃತರು, ಪಂಡಿತರೆಂದೇ ಹೆಸರಾಗಿದ್ದಾರೆ. ಮಾನ್ಯ ಎಂ.ಪಿ. ಪ್ರಕಾಶ್ ಗೆ ಇರದಿರುವ ಬಿರುದು ಯಾವುದು? ನಾವೆಲ್ಲಾ ಒಟ್ಟಿಗೇ ಇದ್ದೆವು. ಅವರು ಈಗ ಸಂಸದೀಯ ಮತ್ತು ಗೃಹ ಮಂತ್ರಿಗಳಾಗಿದ್ದರೆ. ನಮ್ಮ ದೌರ್ಭಾಗ್ಯ ಏನೆಂದರೆ, ಕಳೆದ ಸಲ ವಿಧಾನ ಸಭೆಗೆ ಚುನಾವಣೆಗೆ ಹೋದಾಗ ನಮಗೆಲ್ಲಾ ಓಟು ಕೊಡಿ ಎಂದು ನಾನು, ಸಿದ್ಧರಾಮಯ್ಯ, ಎಂ.ಪಿ. ಪ್ರಕಾಶ್ ಒಟ್ಟಿಗೆ ಪ್ರಚಾರ ಮಾಡಿದ್ದೆವು. ನಾವು ಮೂರು ಜನರು ಬ್ರಹ್ಮ, ವಿಷ್ಣು, ಮಹೇಶ್ವರರಿದ್ದಂತೆ ಇದೆವು. ಬ್ರಹ್ಮ ನಾನು, ವಿಷ್ಣು ಸಿದ್ದರಾಮಯ್ಯ, ಈಶ್ವರ ಎಂ.ಪಿ. ಪ್ರಕಾಶ್ ಆಗಿದ್ದರು. ನಾವೆಲ್ಲಾ ಒಟ್ಟಿಗೆ ಜನರ ಮುಂದೆ ಹೋಗಿದ್ದೆವು. ಅವೆಲ್ಲವನ್ನು ಈಗ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಇವರೇ ಅರೆಸ್ಟ್ ಆಗುವಂತಹ ಸ್ಥಿತಿ ಬಂದಿದೆ, ಮತ್ತೆ ಬೇಡಿ ಯಾವಾಗ ಹಾಕುತ್ತಾರೋ ನನಗೆ ಗೊತ್ತಿಲ್ಲ. ಅಧ್ಯಕ್ಷರೆ, ಅದಕ್ಕೆ ನಾನು ಹೇಳುವ ಸಲಹೆ ಏನೆಂದರೆ, ನೀವು ನಿಮ್ಮ ತೀರ್ಪನ್ನು ಯಾವಾಗ ಬೇಕಾದರು ಕೊಡಿ. ಈಗ ಸದನವನ್ನು ಮುಂದೂಡಿ, ಗೃಹ ಮಂತ್ರಿಗಳನ್ನು ಕರೆಯಿಸಿ, ಅವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಲಿ, ಅವರಿಗೆ ರಾಜಕೀಯವಾಗಿ ಶಕ್ತಿ ಇದ್ದರೆ "ಸಿದ್ಧರಾಮಯ್ಯ , ನೀನು ತಪ್ಪು ಮಾಡಿದ್ದಿಯ, ನೀನು ಜೈಲಿಗೆ ಹೋಗು" ಎಂದು ಹೇಳಲಿ. ಅದಕ್ಕೂ ಶಕ್ತಿ ಇಲ್ಲ, ಈ ಕಡೆ ಹೊಡೆದಂತೆ ಮಾಡುವುದು ಆ ಕಡೆ ಬಡಿದಂತೆ ಮಾಡುವುದು, ಇದು ಯಾವ ಲೆಕ್ಕವೆಂದು ನಗೆ ಅರ್ಥವಾಗುತ್ತಿಲ್ಲ. ಸದನವನ್ನು ಮುಂದೂಡಿ ಗೃಹ ಮಂತ್ರಿಗಳು ಬರಲಿ, ಇಲ್ಲದಿದದ್ದರೆ ಮುಖ್ಯಮಂತ್ರಿಗಳು ಬರಲಿ, ಉತ್ತರ ಕೊಡಲಿ. ಇವರೆಲ್ಲಾ ಚಾಲೆಂಜ್ ಆಗಿ ಹೊರಗಡೆ ಹೋಗಿ ಮಾಡುತ್ತಾರಲ್ಲ, ಖರ್ಗೆಯವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ

ನಿಮಗೆ ಹೇಳಿದರಲ್ಲ, ನೀವು ೮ ಸಾರಿ ಗೆದ್ದಿದ್ದಿರಾ, ನಾನು ೬ ಸಾರಿ ಗೆದ್ದಿದ್ದೇನೆ ಎಂದು, ಮೊನ್ನೆ ಭಾಷಣ ಮಾಡುವಾಗ ನಿಮ್ಮ ಗಮನಕ್ಕೆ ಬಂದಿದೆಯೊ ಏನೋ ನನಗೆ ಗೊತ್ತಿಲ್ಲ. ಏನು ಸಿದ್ಧರಾಮಯ್ಯ, ಖರ್ಗೆ, ಸಿಂಧ್ಯಾರವರೆಗೆ ಗೊತ್ತಿರುವುದರೆಂದು ಹೇಳಿ ಮಾತನಾಡಿದರು. ಇದೆಲ್ಲಾ ಇದೆ, ರಾಜಕೀಯವಾಗಿ ಮಾತನಾಡತಕ್ಕಂತಹ ವಿಚಾರಗಳು, ವಿದಾನಸಭೆ ರಾಜಕೀಯವಾಗುವುದು ಬೇಡ ಅದಕ್ಕೋಸ್ಕರ ನಾನು ಮಾತನಾಡುವುದಕ್ಕೆ ಬಯಸುವುದಿಲ್ಲ. ಅಧ್ಯಕ್ಷರು, ತಾವು ದಯಮಾಡಿ ಗಮನವನ್ನು ಮುಂದೂಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ಕೆಟ್ಟ ಸಂಪ್ರದಾಯವಾಗುತ್ತದೆ. ವಿಧಾನ ಸಭೆ ನಡೆಯುವಾಗ ಒಬ್ಬ MLA arrest ಮಾಡುತ್ತೇವೆಂದು ಹೇಳಿದರೆ? ಸಿದ್ಧರಾಮಯ್ಯನವರಂತಹ ಒಬ್ಬ ನಾಯಕರನ್ನೆ ಈ ರೀತಿಯಾಗಿ ನೋಡುವಾಗ, ಸಾಮಾನ್ಯವಾಗಿ ನಿಮ್ಮ ಪಕ್ಷದ ಕಾರ್ಯಕರ್ತರ ಗತಿಯೇನಾಗುತ್ತದೆ ಎಂಬುದನ್ನು ಈ ಕಡೆ ಇರತಕ್ಕಂತಹ ಶಾಸಕರೂ ಯೋಚನೆ ಮಾಡಬೇಕು. ಅಧಿಕಾರವಿದ್ದಾಗ ಎಲ್ಲಾ ಚೆನ್ನಾಗಿ ಇರುತ್ತದೆ. ಅಧಿಕಾರವಿಲ್ಲದಿರುವಾಗ ಏನೇನಾಗುತ್ತದೆಂಬುದನ್ನು ಯೋಚನೆ ಮಾಡಿ.

ಅಧ್ಯಕ್ಷರು : ಅವರು ಉತ್ತರವನ್ನು ಕೊಟ್ಟಿದ್ದಾರೆ (ಗೊಂದಲ).

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಏನು ಉತ್ತರ ಕೊಟ್ಟಿದ್ದಾರೆ (ಗೊಂದಲ)

ಅಧ್ಯಕ್ಷರು : ಈಗ ಹೊಸ ಬೆಳವಣಿಗೆಗಳ ಬಗ್ಗೆ ಹೇಳಿದರು, ಅದರ ಬಗ್ಗೆ ಗೃಹಸಚಿವರನ್ನು ಕರೆಯಿಸುತ್ತೇನೆ, ಅವರು ಉತ್ತರ ಕೊಡುತ್ತಾರೆ (ಗೊಂದಲ)

ಶ್ರೀ ಎಸ್. ಚಲುವರಾಯ ಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷೆ, ಮಾನ್ಯ ಹಿರಿಯ ನಾಯಕರೆಲ್ಲಾ ಹೇಳುತ್ತಿರುವುದು ಸತ್ಯ. ಈಗ ಸಿಂಧ್ಯಾರವರು ಬಹಳ ವಿವರವಾಗಿ ಹೇಳಿದ್ದಾರೆ. ಇದೆಲ್ಲಾ ಎಲ್ಲಿಂದ ಪ್ರಾರಂಭವಾಯಿತೆಂಬುದನ್ನು ನೋಡಬೇಕಲ್ಲ. ನನ್ನ ಕಳೆದ ಸಾರಿ ಚುನಾವಣೆಯಲ್ಲಿ ಏನು ಇಲ್ಲದೆ, ಎಸ್. ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದರು, ಖರ್ಗೆಯವರು ಗೃಹ ಮಂತ್ರಿಗಳಾಗಿದ್ದಾಗ, ೬೦ ಜನರನ್ನು ೧ ತಿಂಗಳು ಒಳಗೆ ಹಾಕಿದ್ದರು. (ಗೊಂದಲ) ಸರ್ಕಾರದ

ಉತ್ತರದಿಂದ ಅವರಿಗೆ ಸಮಾಧಾನವಿಲ್ಲದಿದ್ದರೆ, ಅವರಿಗೆ ಪ್ರತಿಭಟನೆ, ಧರಣಿ ಕುಳಿತುಕೊಳ್ಳುವುದಕ್ಕೆ, ವಾಕ್ ಔಟ್ ಮಾಡುವುದಕ್ಕು ಹಕ್ಕಿದೆ, ಅದು ಪ್ರಶ್ನೆಯಲ್ಲ. ತಾವು ರೂಲಿಂಗ್ ಕೊಟ್ಟಿದ್ದಿರಿ, ಅವರ್ಯಾರು ಪ್ರಸ್ತಾಪ ಮಾಡುತ್ತಿಲ್ಲ. ಇದು ಎಲ್ಲಿಂದ ಪ್ರಾರಂಭವಾಗಿದೆ, ಇದನ್ನು ಬಿಡಬೇಕೆಂದು ಹೇಳುವವರಲ್ಲಿ ನಾನು ಕೂಡ ಮೊದಲಿಗನು, ಅವರಲ್ಲ. ಇದನ್ನು ಬಿಡಬೇಕೆಂದು ಅಲ್ಲಿ ಕುಳಿತುಕೊಂಡು ಹೇಳುವುದಲ್ಲ, ಇಲ್ಲಿ ಕುಳಿತುಕೊಂಡಾಗಲೂ ಹೇಳಬೇಕು. ಕರ್ನಾಟಕ ರಾಜಕಾರಣದಲ್ಲಿ ದ್ವೇಷ, ಅಸೂಯೆಯನ್ನು ಬೆಳೆಸಿಕೊಂಡು ಬಂದಿರುವರ್ಯಾರು, ಎಲ್ಲಿಮದ ಆರಂಭವಾಗಿದೆ ಎಂಬುದನ್ನು ಬೇರು ಸಹಿತ ತೆಗೆಯುವುದಾದರೆ, ಇನ್ನು ಒಂದು ದಿವಸ ಚರ್ಚೆಯಾಗಲಿ, ಆದರೆ ಅದು ಯಾವುದೂ ಶಾಶ್ವತವಲ್ಲ, ಯಾರಿಗೂ ಒಳ್ಳೆಯದಲ್ಲ. ಈ ದ್ವೇಷದಿಂದ ನಾವು ದೊಡ್ಡ ಸಾಧನೆ ಮಾಡುತ್ತೇವೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಕನಸು. ಗೃಹ ಮಂತ್ರಿಗಳು, ಯಾವುದೋ ವಿಚಾರದಲ್ಲಿ ಮೇಲ್ಮನೆಗೆ ಹೋಗಿದ್ದಾರೆ, ಅವರು ಅಲ್ಲಿಂದ ಬಂದ ನಂತರ ತಾವು ಇಚ್ಚೆ ಪಟ್ಟರೆ ಏನು ಕ್ಲಾರಿಫಿಕೇಷನ್ ಬೇಕೋ adjournment motion ಮುಂದೆ ಇಟ್ಟುಕೊಳ್ಳತಕ್ಕಂತಹದ್ದೊ, ಅಥವಾ ಬೇರೆ ಏನಾದರು ಕೇಳತಕ್ಕಂತಹದ್ದನ್ನು ಕೇಳಲಿ. ಆದರೆ ಅವರು ಈಗ ಇಲ್ಲದೇ ಇದ್ದಾಗ ಈ FIR ಹಾಕಿದ್ದಾರೆ. ಈ FIR ಬಗ್ಗೆ ಗೃಹಮಂತ್ರಿಗಳಿಗೆ ಮಾಹಿತಿ ಬಂದಿದ್ದರೆ, ಅವರು ಬಂದಾಗ ಏತಕ್ಕೆ FIR ಹಾಕಿದ್ದಾರೆ, ಏನಿದೆ ಎಂಬುದನ್ನು ಹೇಳುತ್ತಾರೆ. ಆದುದರಿಂದ ಈ ವಿಷಯವನ್ನು ನಿಲ್ಲಿಸಿ ದಯವಿಟ್ಟು ಮುಂದಿನ ಕಾರ್ಯಕಲಾಪವನ್ನು ತೆಗೆದುಕೊಂಡರೆ ಒಳ್ಳೆಯದು ನನ್ನ ರಿಕ್ವೆಸ್ಟ್.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಪ್ರಿವಿಲೇಜ್‌ಗೆ, ಅವರು ನೋಟೀಸ್ ಕೊಟ್ಟಿದದು, ತಮ್ಮ ಮನವಿಯನ್ನು ತಮ್ಮ ಮುಂದೆ ಸಲ್ಲಿಸಿದ್ದು, ಸರ್ಕಾರದ ಪರವಾಗಿ ಉತ್ತರ ಕೊಟ್ಟಿದ್ದು, ತಾವು ತಮ್ಮ ತೀರ್ಪನ್ನು ಕಾಯ್ದಿರಿಸಿ ಇಟ್ಟಿದ್ದೀರಿ. ಆದರೆ ಈ ಮಧ್ಯದಲ್ಲಿ ಇಡೀ ವಿಷಯ ಮತ್ತೊಂದು ಸ್ವರೂಪವನ್ನು ಪಡೆದುಕೊಂಡಿದೆ. ಅಧಿಕೃತವಾಗಿ ಮಾನ್ಯ ಗೃಹ ಮಂತ್ರಿಗಳು ಮಾತನಾಡುವಾಗ, ಸಿದ್ಧರಾಮಯ್ಯನವರು ಬಂಧನಕ್ಕೆ ಒಳಗಾಗಿಲ್ಲವೆನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆ ಹೇಳಿಕೆ ಈ ಸದನದ ವಸ್ತುವಾಗಿದೆ. ಸಿದ್ಧರಾಮಯಯನವರು

ಇಲ್ಲಿ ಕುಳಿತಿದ್ದಾರೆ. ಸದನದಲ್ಲಿ ಹಾಜರಿದ್ದಾರೆ. ಯಾವ ಪತ್ರವನ್ನು ತಮ್ಮ ಘನ ಸನ್ನಿಧಿಗೆ ಪೋಲಿಸ್ ಇಲಾಖೆಯವರು ಕಳುಹಿಸಿ ಕೊಟ್ಟಿದ್ದಾರೆ, ಅದರ ನಕಲು ಇಲ್ಲಿದೆ. ಯಾವುದೇ ಶಾಸಕ ಈ ದೇಶದ ಕಾನೂನಿಗಿಂತ ದೊಡ್ಡವನಲ್ಲ. ಆದರೆ ಶಾಸಕರನ್ನು ದಸ್ತಗಿರಿ ಮಾಡಿದಾಗ, ತಮ್ಮ ಗಮನಕ್ಕೆ ಏತಕ್ಕೆತರುತ್ತಾರೆ,. ಅವರು ಸದನದ ಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಇರುವ ತೊಂದರೆ ಮತ್ತೊಂದು ಏನಾದರು ಇದ್ದರೆ ಅಥವಾ ಅವರ ವಿಷಯವಾಗಿ ನಿಮಗೇನಾದರು ಮಾಹಿತಿ ಬೇಕಾಗಿದ್ದರೆ ನೀವು ಈ ಸದನದ ಮುಖ್ಯಸ್ಥರು ನಿಮ್ಮ ಗಮನಕ್ಕೆ ತರಬೇಕೆಂತಲೇ, ಹೊರತು ಬಂಧನ ಮಾಡುವುದಕ್ಕೆ ನಿಮ್ಮ ಅನುಮತಿ ಅಗ್ಯವಿಲ್ಲ. ತಮ್ಮ ಗಮನಕ್ಕೆ ತರುತ್ತಾರೆ ಅಷ್ಟೆ. ತಮ್ಮ ಗಮನಕ್ಕೆ ತಂದ ಮೇಲೆ, ತಮ್ಮ ಕಾರ್ಯಲಯವೇನು ಮಾಡುತ್ತದೆಂದರೆ, ಇಂತಹ ಸನ್ಮಾನ್ಯ ಶಾಸಕರನ್ನು ಇಂತಹ ಪ್ರಕರಣದಲ್ಲಿ, ಇಂತಹ ತಾರೀಖು, ಇಷ್ಟು ಗಂಟೆಗೆ, ಇಂತಹ ಪೊಲೀಸ್ ಸ್ಟೇಷನ್ ನವರು ಬಂಧನ ಮಾಡಿ ಬಿಡುಗಡೆ ಮಾಡಿರುತ್ತಾರೆಂದು ತಾವು ಆ ವಿಷಯವನ್ನು ನಮಗೆಲ್ಲರಿಗೂ by way of bulletin ಸರ್ಕ್ಯೂಲೇಟ್ ಮಾಡಬೇಕು. This message is conveyed to the Office of the Hon. Speker. ನಮಗ್ಯಾರಿಗೂ ತಮ್ಮ ಕಾರ್ಯಾಲಯದಿಂದ about the arrest and release ಇದುವರೆವಿಗೆ ಬುಲೆಟಿನ್ ಬಂದಿಲ್ಲ. ಮಾನ್ಯ ಗೃಹಮಂತ್ರಿಗಳು ಅತ್ಯಂತ ಸ್ಪಷ್ಟವಾಗಿ ಬಂಧನವಾಗಿರುವುದನ್ನು ನಿರಾಕರಿಸಿದ್ದಾರೆ. ಬಂಧನದಲ್ಲಿ police custody ಎಂದು ಕರೆಯುತ್ತೇವೆ. Preventive custody ಎಂದು ಕರೆಯುತ್ತೇವೆ, judicial custody ಎಂದು ಕರೆಯುತ್ತೇವೆ. ಯಾವುದೋ ಒಂದು ಪ್ರದೇಶದಲ್ಲಿ ಸೀಮಿತವಾಗಿ law and order ಕಾಪಾಡುವುದಕ್ಕೋಸ್ಕರ ಒಬ್ಬ ಮನುಷ್ಯನನ್ನು ವಶಕ್ಕೆ ತೆಗೆದುಕೊಂಡು, ಆ ಸಂದರ್ಭ ಕಳೆದು ಹೋದ ನಂತರ, ಪರಿಸ್ಥಿತಿ ಯಥಾಸ್ಥಿತಿಗೆ ಬಂದಾಗ ಅವರನ್ನು ಗೌರವಯುತವಾಗಿ ಕಳುಹಿಸಿಕೊಡತಕ್ಕಂತಹದ್ದು. ಇದಕ್ಕೆ ಪ್ರಿವೆಂಟಿವ್ ಕಸ್ಟಡಿ ಎಂದು ಹೇಳುತ್ತೇವೆ. ಯಾವುದಾದರೂ ಅಪರಾಧದ ವಿಚಾರದಲ್ಲಿ ಅವರಿಂದ ಹೇಳಿಕೆ ಪಡೆದುಕೊಳ್ಳಬೇಕಾದರೆ, ಅವರನ್ನು ವಿಚಾರಣೆ ಮಾಡಬೇಕಾಗಿದ್ದರೆ, concerned magistrate ಹತ್ತಿರ ಹೋಗಿ ಅನುಮತಿ ತೆಗೆದುಕೊಂಡು ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಬೇಕು. ಪೊಲೀಸ್ ಕಸ್ಟಡಿಯಲ್ಲಿ ಅವರ ಎನ್ ಕ್ವೈರಿ ಎಲ್ಲಾ ಕಂಪ್ಲೀಟ್ ಆಗಿ ಅವರ ಅಗತ್ಯ ಪುನಃ ಇದ್ದರೆ ಜಡ್ಜ್ ಗೆ ಒಪ್ಪಿಸಿ ಜ್ಯುಡಿಷಿಯಲ್ ಕಸ್ಟಡಿಗೆ

ಕಳುಹಿಸಬೇಕು. ನಮಗೆ ಬೇಕಾಗಿರುವುದು, ಸನ್ಮಾನ್ಯ ಸಿದ್ಧರಾಮಯ್ಯನವರು ಮಾಡಿದಂತಹ ಅಪರಾಧ ಯಾವುದು? ಅವರು ಪ್ರಿವೆಂಟಿವ್ ಕಸ್ಟಡಿಯಲ್ಲಿದ್ದರಾ, ಪೊಲೀಸ್ ಕಸ್ಟಡಿಯಲ್ಲಿದ್ದರಾ, ಜ್ಯುಡಿಷಿಯಲ್ ಕಸ್ಟಡಿಯಲ್ಲಿದ್ದರಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮೆಜಾರಿಟಿ ಇಲ್ಲವೆಂದು ತಾವು ಹೇಳಿದಿರಿ, ಮತ್ತೆ ಚರ್ಚೆಗೆ ಅವಕಾಶ ಕೊಡುತ್ತೀರಾ ಹೇಗೆ? ನಾನು ಸಭಾಧ್ಯಕ್ಷರನ್ನು ರಿಕ್ವೆಸ್ಟ್ ಮಾಡುತ್ತಿದ್ದೇನೆ, ಬಿಜಿನೆಸ್ ಯಾವುದೂ ನಡೆಯುತ್ತಿಲ್ಲ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಮ್ಮ ಸಭೆಯ ಟೈಟಲ್ ಏನೆಂದರೆ, ಕರ್ನಾಟಕ ವಿಧಾನ ಸಭೆ, ಶಾಸನ ಸಭೆ, ಶಾಸನವನ್ನು ರಚಿಸತಕ್ಕಂತಹ ಒಂದು ಅವಕಾಶವಿರತಕ್ಕಂತಹ ಈ ಸಭೆ. ಶಾಸನವನ್ನು ನಿರೂಪಿಸತಕ್ಕಂತಹ ಪವಿತ್ರವಾದಮತಹ ಹಕ್ಕನ್ನು ಪಡೆದಿರತಕ್ಕಂತಹ ಈ ಸಭೆ, ಶಾಸನಾತ್ಮಕವಾದ ವಿಚಾರಗಳಲ್ಲಿ ನಾವು ಎಡವಬಹುದಾ? ನಾನು ತಮ್ಮನ್ನು ಕೇಳುತ್ತಿದ್ದೇನೆ, ರಾಜ್ಯದ ಆಡಳಿತವನ್ನು ಹಿಡಿದಿರತಕ್ಕಂತಹ ಗೃಹ ಮಂತ್ರಿಗಳು ಬಂಧವನ್ನು ನಿರಾಕರಿಸಿದ್ದಾರೆ. ಅವರ ಇಲಾಖೆಯವರು ಬಂಧನದ ವಿಷಯವನ್ನು ನಮಗೆ ತಿಳಿಸುತ್ತಾರೆ. ನಿಮ್ಮ ಕಾರ್ಯಾಲಯ ಅವರ ಬಂಧನದ ವಿಷಯವನ್ನು ನಮಗೆ ತಿಳಿಸಬೆಕು, ತಿಳಿಸಿಲ್ಲ ಲೋಪವಾಗಿದೆ. ಇದೇನಿದು ? ನಾವು ಎಲ್ಲಿಗೆ ಹೋಗುತ್ತಿದ್ದೇವೆ?

ಅಧ್ಯಕ್ಷರು : ಬೆಳಿಗ್ಗೆ ಸಿದ್ಧರಾಮಯ್ಯನವರು ಎದಾಗ ನಾನು ಏನು ಹೇಳಿದೆ, ನೀವು ಪ್ರಿವಿಲೇಜ್ ನೋಟಿಸ್ ಕೊಟ್ಟಿದ್ದೀರಿ. ಆ ಸಂದರ್ಭದಲ್ಲಿ ಈ ಪ್ರಕಟಣೆಯನ್ನು ಓದಿ ಹೇಳೋಣ ಅಂತ ಇದ್ದೆ ನಾನು ಬೆಳಿಗ್ಗೆ ಹೇಳಿದ್ದೇನೆ, ನೀವೇ ಓದಿದ್ದೀರಿ, ನೀವು ಕಳುಹಿಸಿರತಕ್ಕಂತಹ ಕಾಪಿಯನ್ನು ಕಳುಹಿಸಿದ್ದಾರೆ ಅದನ್ನು ಓದುತ್ತಿದ್ದೇನೆಂದು ಒಪ್ಪಿಕೊಂಡಿದ್ದೇನೆ. ಅದನ್ನೆ ದೊಡ್ಡದಾಗಿ ಹೇಳಿದರೆ ಹೇಗೆ ? ಬೆಳಿಗ್ಗೆ ಎಲ್ಲಾ ಅಡಿ ಮತ್ತೆ ಅದೇ ಕತೆ ಮುಂದುವರೆದಿದೆ.

(ಗೊಂದಲ)

ಶ್ರೀ ಬಸವರಾಜರಾಯ ರೆಡ್ಡಿ : ಅಧ್ಯಕ್ಷರೇ ನಿಯಮಾವಳಿಗಳ ಪ್ರಕಾರ ನಿಮ್ಮ ಕಚೇರಿಯಲ್ಲಿ ಲ್ಯಾಪ್ಸ್ ಆಗಿದೆ ಎಂದು ಹೇಳುತ್ತಿರುವುದು.

ಅಧ್ಯಕ್ಷರು : ಬುಲೆಟಿನ್ ವಿಷಯವೇನಾಗಿದೆ ಎಂದರೆ. ಅಧಿವೇಶನ ನಡೆಯುತ್ತಿದ್ದಾಗ ಬುಲೇಟಿನ್ ಕಳುಹಿಸುತ್ತೇವೆ, ಇಲ್ಲಿ ಪ್ರಕಟಣೆ ಇದ್ದರೆ ಹೇಳುತ್ತೇವೆ, ಯಾವ ಕಾರಣಕ್ಕೆ ನಾನು..

ಶ್ರೀ ಬಸವರಾಜರಾಯರೆಡ್ಡಿ : ಅಧಿವೇಶನ ನಡೆಯುವ ಸಂದರ್ಭದಲ್ಲಿ ಯಾರಾದರೂ ಸದಸ್ಯರು ಬಂಧನ ಮಾಡಿದರೆ ಸನ್ಮಾನ್ಯ ಅಧ್ಯಕ್ಷರು ಅದನ್ನು ಸದನದಲ್ಲಿ ಓದಿ ಹೇಳಬೇಕೆಂದು ನಿಯಮ ಇದೆ. ನೀವು ಓದಿ ಹೇಳಲಿಲ್ಲ.

ಅಧ್ಯಕ್ಷರು : ಅದನ್ನೇ ನಾನು ಬೆಳಿಗ್ಗೆ ಅವರು ಪ್ರಸ್ತಾಪ ಮಾಡಿದಾಗ ಹೇಳಿದೆ.

ಶ್ರೀ ಬಸವರಾಜರಾಯರೆಡ್ಡಿ : ಓದಿ ಹೇಳಿ. ಸನ್ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ. ಅದನ್ನೇ ನಾನು ಹೇಳಿದೆ. ಸದನಕ್ಕೆ ಅಧಿಕೃತವಾದ ಮಾಹಿತಿ ಕೊಡಿ ಅಷ್ಟೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗಲಾದರೂ ಓದಿ ಹೇಳಿ.

ಅಧ್ಯಕ್ಷರು : ರಾಯರೆಡ್ಡಿಯವರೇ ನಾನು ಬೆಳಿಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತೆ ಅದಕ್ಕೇ ಹಿಂತಿರುಗಿ ಹೋದರೆ ಏನು ಮಾಡುವುದು? ಆ ಪತ್ರವನ್ನು ಓದುತ್ತೇವೆ.

"ದಿನಾಂಕ ೩೧.೩.೦೭ ರಂದು ಜಯಪುರ ಗ್ರಾಮದಲ್ಲಿ ಶ್ರೀ ಸಿದ್ಧರಾಮಯ್ಯ ಮಾಜಿ ಉಪಮುಖ್ಯಮಂತ್ರಿಗಳು ಸರ್ಕಾರಿ ಆಸ್ಪತ್ರೆಯ ಗುದ್ದಲಿ ಪೂಜೆ ಸಲ್ಲಿಸಲು ಆಗಮಿಸಿದಾಗ ನಡೆದ ಘಟನೆ ಬಗ್ಗೆ. ದಿನಾಂಕ ೩೧.೩.೦೭ ರಂದು ಸಂಜೆ

ಸುಮಾರು ೩.೩೦ ಗಂಟೆ ಸಮಯದಲ್ಲಿ ಶ್ರೀ ಸಿದ್ಧರಾಮಯ್ಯ ಶಾಸಕರು ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳು ಜಯಪುರ ಗ್ರಾಮದ ಸರ್ವೆ ೧೪೮ರಲ್ಲಿ ಜನರಲ್ ಆಸ್ಪತ್ರೆ ಗುದ್ದಲಿ ಪೂಜೆ ನೆರವೇರಿಸಬೇಕೆಂದು ಅವರ ಬೆಂಬಲಿಗರಾದ ಕಾಂಗ್ರೆಸ್ ಕಾರ್ಯಕರ್ತರ ಜೊತೆ ಬಂದಾಗ ಸರ್ಕಾರದ ನಿಯಮಾವಳಿ ಪ್ರಕಾರ ಗುದ್ದಲಿ ಪೂಜೆ ನೆರವೇರಿಸುತ್ತಿಲ್ಲವೆಂದು, ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು, ಜಿಲ್ಲಾ ಪಂಚಾಯತ್ ಸದಸ್ಯರು, ಆರೋಗ್ಯ ಸಚಿವರು, ಮತ್ತು ಜಿಲ್ಲಾ ಮಂತ್ರಿಗಳಿಗೆ ಆಹ್ವಾನಿಸಿದೆ, ಮತ್ತು ಈ ಕಾರ್ಯಕ್ರಮದ ಸಂಬಂಧ ಯಾವುದೇ ಕರ ಪತ್ರ ಹಾಗೂ ಆಹ್ವಾನ ಪತ್ರಿಕೆ ಮುದ್ರಿಸದೆ ಏಕಾ ಏಕಿ ಮಾಜಿ ಉಪ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ, ಶ್ರೀ ಸೋಮಶೇಖರ್ ಶಾಸಕರು ಕೃಷ್ಣರಾಜ ಕ್ಷೇತ್ರ, ಮತ್ತು ಅವರ ಬೆಂಬಲಿಗರಾದ ಜಿಲ್ಲಾಪಂಚಾಯಿತಿ ಅಧ್ಯಕ್ಷ ಶ್ರೀ ಮರೀಗೌಡರವರನ್ನು ಜೊತೆಯಲ್ಲಿ ಕರೆದುಕೊಂಡು ಬಂದಿರುವುದು ಸರಿಯಲ್ಲವೆಂದು ಜೆಡಿ (ಎಸ್) ಪಕ್ಷ ಕಾರ್ಯಕರ್ತರು ಗುದ್ದಲಿ ಪೂಜೆ ವಿಚಾರ ತಿಳಿದು ವಿರೋಧ ವ್ಯಕ್ತಪಡಿಸುತ್ತಿದ್ದರು. ಆಗ ಮಾನ್ಯ ತಹಶೀಲ್ದಾರ್ ಮಾನ್ಯ ಉಪ ವಿಭಾಗಾಧಿಕಾರಿಗಳು ಜೆಡಿ (ಎಸ್) ಕಾರ್ಯಕರ್ತರನ್ನು ಸಮಾಧಾನಪಡಿಸುತ್ತಿದ್ದರು. ಆ ವೇಳೆಗೆ ಕಾಂಗ್ರೆಸ್ ಕಾರ್ಯಕರ್ತರು ಶ್ರೀ ಸಿದ್ಧರಾಮಯ್ಯ ಮತ್ತು ಶ್ರೀ ಸೋಮಶೇಖರ್ ಶಾಸಕರು, ಇವರುಗಳ ನೇತೃತ್ವದಲ್ಲಿ ಮೈಸೂರು H.D. ಕೋಟೆಯ ಮುಖ್ಯ ರಸ್ತೆಯಲ್ಲಿ ಕುಳಿತು ಸಾರ್ವಜನಿಕರಿಗೆ ತೊಂದರೆಯಾಗುವಂತೆ ರಸ್ತೆ ಕಡೆ ಮಾಡುತ್ತಿದ್ದಾಗ ಮುಂಜಾಗ್ರತಾ ಕ್ರಮವಾಗಿ ಕಲಂ ೭೧ ಕರ್ನಾಟಕ ಪೊಲೀಸ್ ಕಾಯಿದೆಯ ರೀತ್ಯ ಸಂಜೆ ೭.೩೦ ಗಂಟೆ ಸಮಯದಲ್ಲಿ ದಸ್ತಗಿರಿ ಮಾಡಿ, DAR ಕಲ್ಯಾಣ ಮಂಟಪಕ್ಕೆ ಕರೆದುಕೊಂಡು ಬಂದು ರಾತ್ರಿ ೧೦.೦೦ ಗಂಟೆಗೆ ಬಿಡುಗಡೆ ಮಾಡಲಾಗಿರುತ್ತದೆ. ಆದರೆ ದಸ್ತಗಿರಿ ಮಾಡಿರುವುದನ್ನು ವಿರೋಧಿಸಿ, ರಾತ್ರಿ ೧.೦೦ ಗಂಟೆಯವರೆಗೆ ಧರಣಿ ಮಾಡಿ ಆ ನಂತರ ವಾಪಸ್ ಹೋಗಿರುತ್ತಾರೆ. ಈ ಘಟನೆ ನಡೆಯಲು ಪ್ರಮುಖವಾಗಿ ಆರೋಗ್ಯ ಇಲಾಖೆಯ ಇಂಜಿನಿಯರಿಂಗ್ ವಿಭಾಗದವರು ಕಾರಣರಾಗಿರುತ್ತಾರೆ. ಈ ಸಂಬಂಧ ಪೊಲೀಸ್ ಇಲಾಖೆಗೆ ಯಾವುದೇ ಇಲಾಖೆಯ ಅಧಿಕಾರಿಗಳು ಈ ಕಾರ್ಯಕ್ರಮದ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಹಾಗೂ ಬರವಣಿಗೆಯಲ್ಲಿ ಪೊಲೀಸ್ ಬಂದೋಬಸ್ತ್ ಕರ್ತವ್ಯಕ್ಕೆ ವರದಿ ಸಲ್ಲಿಸಿರುವುದಿಲ್ಲ. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಗುದ್ದಲಿ ಪೂಜೆ ನಡೆಸುವುದು ಸರಿಯಲ್ಲವೆಂದು ಜೆಡಿ (ಎಸ್) ಕಾರ್ಯಕರ್ತರು

ವಿರೋಧ ವ್ಯಕ್ತಪಡಿಸಿದ್ದನ್ನು ವಿರೋಧಿಸಿ ಶ್ರೀ ಸಿದ್ದರಾಮಯ್ಯ ಮಾಜಿ ಉಪ ಮುಖ್ಯಮಂತ್ರಿಗಳು, ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರಾದ ಶ್ರೀ ಮರೀಗೌಡ, ಹಾಗೂ ಇತರೆ ಕಾಂಗ್ರೆಸ್ ಕಾರ್ಯಕರ್ತರು ಧರಣಿಯಲ್ಲಿ ಕುಳಿತಿದ್ದಾಗ ಅವರುಗಳನ್ನು ದಸ್ತಗಿರಿ ಮಾಡಿದ್ದು, ಈ ಕಾರಣವನ್ನು ಮುಂದಿಟ್ಟುಕೊಂಡು ಶ್ರೀ ಸಿದ್ಧರಾಮಯ್ಯ ಅವರ ಬೆಂಬಲಿಗರು ಗುಂಪು ಕಟ್ಟಿಕೊಂಡು ಬಸ್ಸುಗಳಿಗೆ ಬೆಂಕಿ ಹಚ್ಚಿ, ಪೊಲೀಸ್ ವಾಹನಗಳಿಗೆ ಜಖಂಗೊಳಿಸಿ, ಲಕ್ಷಾಂತರ ರೂಪಾಯಿಗಳಷ್ಟು ನಷ್ಟಗೊಳಿಸಿರುತ್ತಾರೆ. ಹಾಗೂ ಕೆಲವು ಪೊಲೀಸ್ ಸಿಬ್ಬಂದಿಗಳಿಗೆ ಕಲ್ಲಿನಿಂದ ಹೊಡೆದು ಗಾಯಗೊಳಿಸಿರುತ್ತಾರೆ. ಈ ಸಂಬಂಧ ವಿವರವಾದ ವರದಿಯನ್ನು ತಯಾರಿಸಿ ಅನಂತರ ಸಲ್ಲಿಸಲಾಗುವುದು. ಈ ಸಂಬಂಧ ಮೈಸೂರು ಜಿಲ್ಲೆಯಾದ್ಯಂತ ಪೊಲೀಸ್ ಪಿಕೆಟಿಂಗ್ ವ್ಯವಸ್ಥೆಯನ್ನು ಮಾಡಲಾಗಿದ್ದು, ಪೊಲೀಸ್ ಬಂದೋಬಸ್ತ್, ಮುಂದುವರೆಸಲಾಗಿದೆ."

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಾಳೆ ಇದನ್ನು protract ಮಾಡಬಹುದು, ಎಳೆಯಬಹುದು, ಇವೆಲ್ಲಾ ಮಾಡಿದರು, ಗಾಯಗಳಾಗಿವೆ. 143 unlawful assembly cognizable offence, violence, unlawful assembly 143,147, ಎಲ್ಲಾ IPC unlawful assembly ಗೆ ಬರುತ್ತದೆ. There are cognizable offences. Cognizable offences ಆದರೆ ಮೂರು ಗಂಟೆ ಅವರಿಗೆ ಕಸ್ಟಡಿಯಲ್ಲಿ ಇಟ್ಟುಕೊಂಡಿದ್ದಾರೆ. Hon'ble Home Minister says he has not been arrested at all. ಆಯಿತು ಎಂದರೆ ಈ ಸದನಕ್ಕೆ ಯಾರು ಏನು ಬೇಕಾದರೂ ಹೇಳಿ ಹೊರಟು ಹೋಗಿ ಬಿಡಬಹುದಾ?

ಅಧ್ಯಕ್ಷರು : ಆಯಿತು ಈಗ ರಮೇಶ್ ಕುಮಾರ್ ರವರೇ, ದಯಮಾಡಿ ಎಲ್ಲ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಒಂದೇ ವಿಷಯ ತೆಗೆದುಕೊಂಡು ಇಡೀ ದಿನ ಮಾತನಾಡುವುದರಲ್ಲಿ ಏನು ಅರ್ಥ ಇದೆ? ಎಲ್ಲಾ ಸದಸ್ಯರುಗಳು ಒಂದು ವಿಚಾರವನ್ನು ಅರ್ಥಮಾಡಿಕೊಳ್ಳಬೇಕು. ಯಾರೇ ಸದಸ್ಯರು ಬಂದಾಗ ಆದಷ್ಟು ಹಿರಿಯ ಸದಸ್ಯರು, ಮತ್ತು ಅನುಭವಿ ಸದಸ್ಯರು ಎಲ್ಲರಿಗೂ ಅವಕಾಶ ಮಾಡಿಕೊಟ್ಟು, ಅವರವರ ಭಾವನೆಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಈ ಕಡೆಯೂ ಅವಕಾಶ ಮಾಡಿಕೊಟ್ಟಿದ್ದೇನೆ. ಎಲ್ಲ ಚರ್ಚೆ ಮಾಡಿ ಆದ ಮೇಲೆ privilege notice ಬಗ್ಗೆ ನಾನು ರೂಲಿಂಗ್‌ನ್ನು ಕಾಯ್ದಿರಿಸಿದ್ದೇನೆಂದು ಹೇಳಿದ್ದೇನೆ.

ಈಗ ಹೊಸ ವಿಚಾರವನ್ನು ಎತ್ತಿದ್ದೀರಿ, ಗೃಹ ಸಚಿವರು ಆ ಮನೆಯಲ್ಲಿದ್ದಾರೆ, ಅವರನ್ನು ಕರೆಸುತ್ತೇನೆ. ಅವರ ಬಗ್ಗೆ ಅವರು ಏನು ಹೇಳೂತ್ತಾರೆಂದು ಕೇಳೋಣವೆಂದರೆ, ಮತ್ತೆ, ಅದೇ ಅದೇ ಹೇಳಿದರೆ ಏನು ಮಾಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಅವಕಾಶಕ್ಕಿಂತಲೂ ನಮ್ಮ ಹಕ್ಕಿನ ಪ್ರಶ್ನೆ. ಇದು ಹೊಸ ಪ್ರಶ್ನೆ ಅಲ್ಲ. ಅದರಿಂದಲೇ ಉದ್ಭವಿಸಿರುವಂಥದ್ದು. ಮತ್ತು ಇದು ನಮ್ಮ ಹಕ್ಕಿನ ಪ್ರಶ್ನೆ. ನಾವು ಅಸ್ಥಿತ್ವದಲ್ಲಿದ್ದರೆ ಈ ಸದನ. ನಮ್ಮ ಹಕ್ಕು ಮತ್ತು ನಮ್ಮ ರಕ್ಷಣೆಯೇ ಇಲ್ಲವೆಂದರೆ, ಎಲ್ಲಿ ಮಾತನಾಡತಕ್ಕಂಥದ್ದು, ಅದಕ್ಕಾಗಿ ಅಧ್ಯಕ್ಷರೇ ಮುಂಜಾನೆ ಹೇಳುವಾಗ ಅವರು ಸವಿಸ್ತಾರವಾಗಿ staement ಮಾಡುವಾಗ ಹೇಳಬಹುದಾಗಿತ್ತು. ಏನೆಂದರೆ, ತಾವು FIR ಹಾಕಿದ್ದೇವೆ, ಇವರು ಇಂತಿಂಥದ್ದನ್ನು ಮಾಡಿದ್ದಾರೆ, ಅದಕ್ಕಾಗಿ FIR ಹಾಕಿದ್ದೇವೆಂದು ಹೇಳಿಬಿಟ್ಟಿದ್ದರೆ, ಅದು ಒಂದು ತರಹ ಇತ್ತು. ಅವರು ಏನು ಓದಿದರು, ಪೊಲೀಸ್ ನೇರವಾಗಿ SP ಗೆ ಕಳುಹಿಸಿದಂತಹ report ಓದಿ, ಅವರನ್ನು ಅರೆಸ್ಟೂ ಮಾಡಿಲ್ಲ. "ಸೆಕ್ಷನ್ ೭೧ ಪೊಲೀಸ್ Act ಪ್ರಕಾರ, ಕೇವಲ detention ಮಾಡಿ ಬಿಟ್ಟು ಬಿಟ್ಟಿದ್ದೇವೆ. " ಎಂದು ಹೇಳುತ್ತಾರೆ. ಸದನ ನಡೆಯುತ್ತಿದೆ ಎಂದು ಗೊತ್ತು. ಸದನದಲ್ಲಿ ಈ ವಿಷಯ ಪ್ರಸ್ತಾಪವಾಗುತ್ತದೆ ಎಂದು ಗೊತ್ತಿದೆ. ಸದನದಲ್ಲಿ ಬರಬಹುದು ಎಂದು ಹೇಳಿ SP ಆಗಲಿ, DC ಆಗಲಿ, ಅಥವಾ ಸಂಬಂಧಪಟ್ಟಂತಹ Home Secretary ಆಗಲಿ, ಅವರು ಈ ಮಾಹಿತಿಯನ್ನು ಒದಗಿಸಿ ಕೊಡಬಹುದಾಗಿತ್ತು. ಇದು ಒಂದು. ಇಲ್ಲ " ನಾನು ಉತ್ತರ ಹೇಳಬೇಕಾಗಿದೆ, as on today, ಏನು ಮಾಹಿತಿ ಇದೆ ನನಗೆ ಕೊಡಿ, ನಾನು ಸದನದಲ್ಲಿ ಹೇಳಬೇಕು". ಎಂದು ಹೇಳಬಹುದಿತ್ತು. ಆ ಮಾಹಿತಿಯನ್ನು ಮುಚ್ಚಿಟ್ಟು, ನಮಗೆ ಬರೀ detention ಗೋಸ್ಕರ, ನಿಮ್ಮ security ಗೋಸ್ಕರ, ನಿಮಗೆ ಕಲ್ಯಾಣ ಮಂಟಪಕ್ಕೆ ಕರೆದುಕೊಂಡು ಹೋಗಿ ಇಟ್ಟಿದ್ದೇವೆಂದು ಏಳಿ. ಅದನ್ನು ಹೇಳಿ ನಮ್ಮ ಹಕ್ಕಿಗೆ ಚ್ಯುತಿ ಬರತಕ್ಕಂತಹ ರೀತಿಯಲ್ಲಿ , ನಮ್ಮ ಹಕ್ಕುಗಳನ್ನು ಮೊಟಕುಗೊಳಿಸುವಂತಹ ರೀತಿಯಲ್ಲಿ ಮಾಡಿದರೆ, ಇದು ಸಹಿಸಿಕೊಂಡು ಹೋಗಬೇಕಾ? ಇದು ಸಣ್ಣದು ಹೇಗಾಗುತ್ತದೆ, ಇದು ನಮ್ಮ ಅಸ್ಥಿತ್ವದ ಪ್ರಶ್ನೆ ಇದೆ.

ಅಧ್ಯಕ್ಷರು : ಸುಮಾರು ೨೫ ವರ್ಷಗಳಿಂದ ನೀವು ಮಂತ್ರಿಗಳಾಗಿದ್ದೀರಿ ಎಂದು ಬೆಳಿಗ್ಗೆ ನೀವೇ ಹೇಳಿದಿರಿ. Privilege notice ಕೊಟ್ಟಿದ್ದಾರೆ. ಅದರ ಬಗ್ಗೆ ಚರ್ಚೆಯಾಯಿತು ಎಲ್ಲರಿಗೂ ಅವಕಾಶ ಮಾಡಿ ಕೊಟ್ಟಿದ್ದೇನೆ. ಆಗ ಅದಕ್ಕೆ ಉತ್ತರವಾಗಿ, ಗೃಹ ಸಚಿವರು ಹೇಳಿದ್ದಾರೆ, ಈ ವಿಷಯ ಪ್ರಸ್ತಾಪವಾಗಲಿಲ್ಲ. ಆ ಕಾರಣದಿಂದ ಈಗ ಅವರು ಗೃಹ ಸಚಿವರು ಇಲ್ಲ ಅವರನ್ನು ಕರೆಸುತ್ತೇನೆ. ಅವರು ಏನು ಹೇಳುತ್ತಾರೆ ತಿಳಿದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : It is his duty to get latest information and give to the House.

ಅಧ್ಯಕ್ಷರು : ನೋಡೋಣ, ಏನಾದರೂ information ಬಂದಿದೆಯೋ ಇಲ್ಲವೋ ಅವರು ಬಂದು ಹೇಳುವವರೆಗೆ ನಾವು ಯಾವುದೇ ತೀರ್ಮಾನಕ್ಕೆ ಬರುವುದಕ್ಕಾಗುವುದಿಲ್ಲ. Let him come to the House.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಅವರು ಹೋಗಿ ತಕ್ಷಣ ಅರೆಸ್ಟ್ ಆಗಬೇಕಾ? ರಾತ್ರಿ ಇಲ್ಲಿಯೇ ಬಂದು ಸುಮ್ಮನೆ ಮಲಗುವುದು ಉತ್ತಮ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ ತಾವು ಒಂದು ಪತ್ರ ಓದಿ ಸದನಕ್ಕೆ ಹೇಲಿದಿರಲ್ಲಾ? ನಾವು ನಿಮಗೆ ಕೇಳಿದ್ದು ನಿಮಗೆ ಬೆಳಿಗ್ಗೆ ಬಂದಂತಹ ಪತ್ರ ಓದಿ ಎಂದು ಹೇಳಿ. ನೀವು ಓದಿದ್ದು ಬೇರೆ ಪತ್ರ. ಈ ಪತ್ರ ನಿಮಗೆ ೩೧.೩.೦೭ ಬಂದಿರತಕ್ಕಂಥದ್ದು. ಇಲ್ಲಿ ಬಂದಿರತಕ್ಕಂಥದ್ದು, ೩೧.೩.೦೭ ರಂದು ಜಯಪುರ ಗ್ರಾಮದಲ್ಲಿ ಸಿದ್ದರಾಮಯ್ಯ ಮಾಜಿ ಉಪ ಮುಖ್ಯ ಮಂತ್ರಿಗಳು, ಸರ್ಕಾರಿ ಆಸ್ಪತ್ರೆ ಗುದ್ದಲಿ ಪೂಜೆ ಸಲ್ಲಿಸಲು ಆಗಮಿಸಿದಾಗ ನಡೆದ ಘಟನೆ. ೩೧.೩.೦೭ ರಂದು ಸಂಜೆ ಸುಮಾರು ೩.೩೦ ರ ಸಮಯದಲ್ಲಿ ಶ್ರೀ ಸಿದ್ಧರಾಮಯ್ಯ ಶಾಸಕರು ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳು...

ಅಧ್ಯಕ್ಷರು : ನನಗೆ ಮೊದಲು ಬಂದ ಪತ್ರವನ್ನು ಓದಿದ್ದೇನೆ. subsequent ಆಗಿ..

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ತಾವು ಮೊದಲು ಬಂದ ಪತ್ರವನ್ನು ಓದಿ ಹೇಳಿದ್ದು. ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಮೊದಲು ಬಂದ ಪತ್ರವನ್ನು ನಾನು ಓದಿ ಹೇಳಿಬಿಡುತ್ತೇನೆ. ಒಂದೇ ಒಂದು ನಿಮಿಷ.

ಅಧ್ಯಕ್ಷರು : I can understand. ನಿಮ್ಮ approach and attitude ನನಗೆ ಅರ್ಥವಾಗುತ್ತಿಲ್ಲ. ನನಗೆ ಮೊದಲು ಯಾವ ಪತ್ರ ಬಂದಿತು ಅದನ್ನು ಓದಿದ್ದೇನೆ. You mislead everything.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಓದಿದ್ದು subsequent ಆಗಿ ಬಂದಂತಹ ಪತ್ರ.

ಅಧ್ಯಕ್ಷರು : ಮೊದಲನೇ ಪತ್ರವೂ ಇದೆ, ಎರಡನೇ ಪತ್ರವೂ ಇದೆ. ದಯಮಾಡಿ ಕೇಳಿ ಈ ವಿಚಾರ ಇದೆಯಲ್ಲಾ, ೭.೩೦ ಗಂಟೆ ಸಮಯದಲ್ಲಿ ದಸ್ತಗಿರಿ ಮಾಡಿ, ಕಲಂ ೭೧ ಕರ್ನಾಟಕ ಪೊಲೀಸ್ ಕಾಯಿದೆ ರೀತ್ಯ, DAR ಕಲ್ಯಾಣ ಮಂಟಪಕ್ಕೆ ಕರೆದುಕೊಂಡು ಹೋಗಿ ರಾತ್ರಿ ೧೦.೦೦ ಗಂಟೆಗೆ ಬಿಡುಗಡೆ ಮಾಡಲಾಗಿರುತ್ತದೆ. ಆ ನಂತರ ದಸ್ತಗಿರಿ ಮಾಡಿರುವುದನ್ನು ವಿರೋಧಿಸಿ ರಾತ್ರಿ ೧.೦೦ ಗಂಟೆಯವರೆಗೆ ಮಾನ್ಯ ಸದಸ್ಯರು ಧರಣಿ ಮಾಡಿ ನಂತರ ವಾಪಸ್ ಹೋಗಿರುತ್ತಾರೆ. ಎರಡರಲ್ಲಿಯೂ ಒಂದೇ ಇರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲಾ ಸಾರ್, ತಾವು ದಯವಿಟ್ಟು ಕ್ಷಮಿಸಿ. ಈ ಪತ್ರ ಬೇರೆ. ದಿನಾಂಕ ೩೧.೦೩.೨೦೦೭ ರಂದು ಸುಮಾರು ಸಂಜೆ ೩.೩೦ ಗಂಟೆ ಸಮಯದಲ್ಲಿ ಶ್ರೀ ಸಿದ್ಧರಾಮಯ್ಯ, ಶಾಸಕರು ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳು ಜಯಪುರ ಗ್ರಾಮ ಸರ್ವೇ ನಂಬರ್ ೧೮೮ರಲ್ಲಿ ಜನರಲ್ ಆಸ್ಪತ್ರೆ ಗುದ್ದಲಿ ಪೂಜೆ ನೆರವೇರಿಸಬೇಕೆಂದು ಅವರ ಬೆಂಬಲಿಗರಾದ ಕಾಂಗ್ರೆಸ್ ಕಾರ್ಯಕರ್ತರ ಜೊತೆ ಬಂದಾಗ ಸರ್ಕಾರ ನಿಯಮಾವಳಿ ಪ್ರಕಾರ ಗುದ್ದಲಿ ಪೂಜೆ ನೆರವೇರಿಸುತ್ತಿಲ್ಲವೆಂದು ಹಾಗೂ ಗ್ರಾಮ ಪಂಚಾಯತಿ ಸದಸ್ಯರು ಮತ್ತು ಜಿಲ್ಲಾ ಪಂಚಾಯತಿ ಸದಸ್ಯರು ಆರೋಗ್ಯ ಮಂತ್ರಿ, ಜಿಲ್ಲಾ ಮಂತ್ರಿಗಳವರಿಗೆ ಆಹ್ವಾನಿಸದೆ ಮತ್ತು ಈ ಕಾರ್ಯಕ್ರಮಕ್ಕೆ

ಸಂಬಂಧಿಸಿದಂತೆ ಯಾವುದೇ ಕರಪತ್ರ ಹಾಗೂ ಆಹ್ವಾನ ಪತ್ರಗಳನ್ನು ಮುದ್ರಿಸದೇ ಏಕಾಏಕಿ ಮಾಡಲು ಮಾಜಿ ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯ, ಸೋಮಶೇಖರ್ ಶಾಸಕರು ಕೃಷ್ಣರಾಜ ಕ್ಷೇತ್ರ ಮತ್ತು ಅವರ ಬೆಂಬಲಿಗರಾದ ಜಿಲ್ಲಾ ಪಂಚಾಯತಿ ಅಧ್ಯಕ್ಷ ಶ್ರೀ ಮರಿಗೌಡರವರನ್ನು ಜೊತೆಯಲ್ಲಿ ಕರೆದುಕೊಂಡು ಬಂದಿರುವುದು ಸರಿಯಲ್ಲವೆಂದು ಜೆ.ಡಿ (ಎಸ್) ಪಕ್ಷದ ಕಾರ್ಯಕರ್ತರು ಗುದ್ದಲಿ ಪೂಜೆ ವಿಚಾರ ತೆಗೆದು ವಿರೋಧ ವ್ಯಕ್ತಪಡಿಸಿದರು. ಹಾಗೂ ಮಾನ್ಯ ತಹಸೀಲ್ದಾರ್, ಮಾನ್ಯ ಉಪ ವಿಭಾಗಾಧಿಕಾರಿಗಳು ಜೆ.ಡಿ. (ಎಸ್) ಕಾರ್ಯಕರ್ತರನ್ನು ಸಮಾಧಾನಪಡಿಸುತ್ತಿದ್ದರು. ಆದರೂ ಕಾಂಗ್ರೆಸ್ ಕಾರ್ಯಕರ್ತರು, ಸಿದ್ಧರಾಮಯ್ಯ ಮತ್ತು ಸೋಮಶೇಖರ್, ಶಾಸಕರುಗಳು, ಇವರುಗಳ ನೇತೃತ್ವದಲ್ಲಿ ಮೈಸೂರು – ಹೆಚ್.ಡಿ. ಕೋಟೆ ಮುಖ್ಯ ರಸ್ತೆಯಲ್ಲಿ ಕುಳಿತು ಸಾರ್ವಜನಿಕರಿಗೆ ತೊಂದರೆಯಾಗುವಂತೆ ರಸ್ತೆ ತಡೆ ಮಾಡುತ್ತಿದ್ದಾಗ ಮುಂಜಾಗ್ರತಾ ಕ್ರಮವಾಗಿ ಕಲಂ ೭೧ ಕರ್ನಾಟಕ ಪೊಲೀಸ್ ಕಾಯ್ದೆ ರೀತ್ಯಾ ಸಂಜೆ ೭.೩೦ ಗಂಟೆ ಸಮಯದಲ್ಲಿ ದಸ್ತಗಿರಿ ಮಾಡಿ ಡಿ.ಎ.ಆರ್.ಕಲ್ಯಾಣ ಮಂಟಪಕ್ಕೆ ಕರೆದುಕೊಂಡು ಬಂದು ರಾತ್ರಿ ೧೦.೦೦ ಗಂಟೆಗೆ ಬಿಡುಗಡೆ ಮಾಡಲಾಗಿರುತ್ತದೆ. ಆದರೆ ದಸ್ತಗಿರಿ ಮಾಡಿದುದನ್ನು ವಿರೋಧಿಸಿ ರಾತ್ರಿ ೧.೦೦ ಗಂಟೆಯವರೆಗೂ ಧರಣಿ ಮಾಡಿ ನಂತರ ವಾಪಸ್ಸು ಹೋದರು. ಇದು ಮೊದಲು ಬಂದಿರತಕ್ಕಂಥ ಪತ್ರ. ಆದರೆ ಅಧ್ಯಕ್ಷರೇ ನೀವು ಓದಿದ್ದು ನಂತರ ಬಂದಂಥ ಪತ್ರ. ಅದರಲ್ಲಿ ಯಾವ ಯಾವ ಸೆಕ್ಷನ್, ಬಸ್ ಡ್ಯಾಮೇಜ್ ಆಗಿರತಕ್ಕಂಥದ್ದು, ಬೆಂಕಿ ಹಾಕಿರುವುದು, ಇವೆಲ್ಲಾ ನೀವು ಈಗ ಓದಿರತಕ್ಕಂಥ ಪತ್ರದಲ್ಲಿ ಬಂದಿರತಕ್ಕಂಥದ್ದು. ಆದರೆ ನಾವು ಕೇಳಿದ್ದು ಈ ಪತ್ರವನ್ನು ಓದಿ ಸದನಕ್ಕೆ ತಿಳಿಸಿ ಎಂದು. ಆದರೆ ನೀವು ಓದಿದ್ದು ಅದರ ನಂತರ ಬಂದ ಪತ್ರ.

ಅಧ್ಯಕ್ಷರು : ನನಗೆ ಒಂದು ಮೊದಲನೆಯ ಪತ್ರ ಬಂದಿದೆಯಲ್ಲ. ನೀವು ಓದಿರುವುದು ಅದೇ ಅಲ್ಲವೇ, ಈಗ ಕಲಂ ೭೧ ರ ರೀತ್ಯಾ ಸಂಜೆ ೭.೩೦ ರ ಸಮಯದಲ್ಲಿ ಅರೆಸ್ಟ್ ಮಾಡಿ ಡಿ.ಎ.ಆರ್. ಕಲ್ಯಾಣ ಮಂಟಪಕ್ಕೆ ಕರೆರದುಕೊಂಡು ಹೋದರು. ರಾತ್ರಿ ೧೦.೦೦ ಗಂಟೆಗೆ ಬಿಡುಗಡೆ ಮಾಡಲಾಗಿರುತ್ತೆ. ಆಮೇಲೆ ದಸ್ತಗಿರಿ ಮಾಡಿದ್ದಕ್ಕೆ ರಾತ್ರಿ ೧.೦೦ ಗಂಟೆ ಧರಣಿ ಮಾಡಿ ನಂತರ ವಾಪಸ್ಸು ಹೋಗಿರುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಷ್ಟೇ ಆ ಮೊದಲ ಪತ್ರದಲ್ಲಿ ಇರುವುದು.

ಅಧ್ಯಕ್ಷರು : ಅದನ್ನೇ ನಾನು ಓದಿದೆನಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಓದಿದ್ದರಲ್ಲಿ ಕೇಸ್ ಹಾಕಿರುವುದ, ಕಲಂ, ಬಸ್ ನ್ನು ಸುಟ್ಟು ಹಾಕಿರುವುದು, ಇವೆಲ್ಲಾ ಇದೆ,. ಅದು ಮೊದಲ ಪತ್ರಕ್ಕೆ ಸಂಬಂಧಪಟ್ಟದ್ದಲ್ಲ.

ಅಧ್ಯಕ್ಷರು : ಇಲ್ಲ, ಇಲ್ಲ,

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು, ಬಸ್ ಗೆ ಬೆಂಕಿ ಹಾಕಿದ ವಿಚಾರ ನೀವು ಎರಡನೆಯ ಸಲ ಓದಿದ್ದರಲ್ಲಿ ಇದೆ.

ಶ್ರೀ ವಾಟಾಳ್ ನಾಗರಾಜ್ : ಎರಡನೆಯ ಪತ್ರದಲ್ಲಿ ಬೆಂಕಿ ಬಿದ್ದದ್ದು, ಕೇಸ್ ಹಾಕಿದ್ದು, ಇವೆಲ್ಲಾ ಇದೆ. ಇವೆಲ್ಲಾ ಸೃಷ್ಟಿ ಮಾಡಿರುವುದು.

ಅಧ್ಯಕ್ಷರು : ಕೇಳಿ, ಕೇಳಿ, ಎರಡನೆಯ ಪತ್ರದಲ್ಲಿಯೂ ನೋಡಿ ಇದು ೧.೦೦ ಗಂಟೆಯವರೆವಿಗೂ ಎಂದು ಇದೆಯಲ್ಲಾ, ಅದಾದ ಮೇಲೆ ಶ್ರೀ ಸಿದ್ಧರಾಮಯ್ಯ ಹಾಗೂ ಶ್ರೀ ಸೋಮಶೇಖರ್ ಹಾಗೂ ಇತರೆ ಕಾಂಗ್ರೆಸ್ ಮುಖಂಡರನ್ನು ದಸ್ತಗಿರಿ ಮಾಡಿರುವ ವಿಷಯವನ್ನು ತಿಳಿದು ಇದನ್ನು ವಿರೋಧಿಸಿ ಅಕ್ಕಪಕ್ಕದ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತರುಗಳು ಅವರವರ ಗ್ರಾಮಗಳಲ್ಲಿ ಪ್ರತಿಭಟನೆ, ಧರಣಿ, ರಸ್ತೆ ತಡೆ ನಡೆಸಿ ಒಂದು ಕೆಎಸ್‌ಆರ್‌ಪಿ ವಾಹನ, ಒಂದು ಅಗ್ನಿಶಾಮಕ ವಾಹನ ಒಂದು ಪೊಲೀಸ್ ಜೀಪ್ ಮೇಲೆ ಕಲ್ಲು ತೂರಾಟ ಮಾಡಿ ಜಖಂಗೊಳಿಸಿರುತ್ತಾರೆ. ಹಾಗೂ ಐದು ಕೆಎಸ್ ಅರ್ ಟಿಸಿ ಬಸ್ ಗಳಿಗೆ ಜಯಪುರ ಠಾಣಾ ಸರಹದ್ದಿನಲ್ಲಿ ಎರಡು ಕೆ ಎಸ್ ಆರ್ ಟಿಸಿ ಬಸ್ ಗಳಿಗೆ ಮತ್ತು ಮೈಸೂರು ಠಾಣಾ ಸರಹದ್ದಿನಲ್ಲಿ ಮೂರು ಬಸ್ ಗಳಿಗೆ ಬೆಂಕಿ ಹಾಕಿ ನಷ್ಟ ಉಂಟುಮಾಡಿರುತ್ತಾರೆ. ಈ ಘಟನೆಯಿಂದ ಮೂರು ಪೊಲೀಸ್ ಸಿಬ್ಬಂದಿ ಒಬ್ಬರು ಅಗ್ನಿ ಶಾಮಕಾಧಿಕಾರಿಯವರು ಗಾಯಗೊಂಡಿರುತ್ತಾರೆ. ಈ ಸಂಬಂಧ ಒಟ್ಟು ಆರು ಪ್ರಕರಣಗಳು ದಾಖಲಾಗಿದ್ದು

ಜಯಪುರ ಠಾಣೆಯಲ್ಲಿ ಎರಡು ಪ್ರಕರಣಗಳು ಹಾಗೂ ಮೈಸೂರು ಗ್ರಾಮಾಂತರ ಠಾಣೆಯಲ್ಲಿ ನಾಲ್ಕು ಪ್ರಕರಣಗಳು ದಾಖಲು ಮಾಡಿ ಮುಂದಿನ ಕ್ರಮ ಕೈಗೊಂಡು ತನಿಖೆ ಮುಂದುವರೆಸಲಾಗಿದೆ. ಮೇಲ್ಕಂಡ ಪ್ರಕರಣಗಳಲ್ಲಿ ಒಟ್ಟು ಹದಿನೆಂಟು ಜನ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದ್ದು ಉಳಿದ ಆರೋಪಿಗಳ ಪತ್ತೆ ಕಾರ್ಯ ಮುಂದುವರೆದಿದೆ. ಮುಂದಿನ ಬೆಳವಣಿಗೆಯ ಬಗ್ಗೆ ನಿಗಾ ಇಡಲಾಗಿದ್ದು ಮೈಸೂರು ಜಿಲ್ಲೆಯಾದ್ಯಂತ ಪೋಲೀಸ್ ತುಕ್ಕಡಿ ಮತ್ತು ಪ್ಯಾಟ್ರೋಲಿಂಗ್ ಕರ್ತವ್ಯಕ್ಕೆ ಅಧಿಕಾರಿ ಮತ್ತು ಸಿಬ್ಬಂಧಿಗಳನ್ನು ನಿಯೋಜಿಸಿ ಸೂಕ್ತ ಪೋಲೀಸ್ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಲಾಗಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ ಈಗ ಎರಡನೆಯ ಪತ್ರ ಬಂದಿರುವುದು ಮಧ್ಯಾಹ್ನದ ಮೇಲೆ. ಮೊದಲನೆಯದು ನಿನ್ನೆಯೇ ಬಂದಿದೆ. ಎರಡನೆಯದು ಇವತ್ತು ಬಂದಿದೆ. ಇದನ್ನು ನೋಡಿದರೆ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ, ನನ್ನನ್ನು ರಾಜಕೀಯವಾಗಿ ಮುಗಿಸಬೇಕೆಂದು ಒಂದು ಸಂಚು ನಡೆಯುತ್ತಿದೆ ಎನ್ನತಕ್ಕಂಥದ್ದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಮ್ಮ ಗೃಹ ಸಚಿವರು ಸರ್ಕಾರದ ಪರವಾಗಿ ಉತ್ತರ ಕೊಡುವಾಗ ಇದನ್ಯಾವುದನ್ನೂ ಹೇಳಲೇ ಇಲ್ಲ. ೧೮ ಜನರ ಮೇಲೆ ಮಾತ್ರ ಒಂದು ಲಿಸ್ಟ್ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಸಿದ್ಧರಾಮಯ್ಯನವರೇ ಬಸ್ ಗಳಿಗೆ ಬೆಂಕಿ ಹಾಕಿದ ಪ್ರಕರಣದ ಬಗ್ಗೆ ಹೇಳಿದರು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಗೃಹ ಸಚಿವರು ಸತ್ಯವನ್ನು ಮುಚ್ಚಿ ಹಾಕಿದ್ದಾರೆ. He has misled the House. The report what you have received is different one, the reply given by the Home Minister is a different one.

ಅಧ್ಯಕ್ಷರು : ನೋ, ನೋ, ನೋ,. ಡಿಫರೆಂಟ್ ಆಗಿ ಒಂದೊಂದು ಹೇಳುವುದಕ್ಕೆ

ಸಾಧ್ಯವಾಗುವುದಿಲ್ಲ. ಅವರು ಅಲ್ಲಿ ನಡೆದ ಕೆಲವು ಪ್ರಕರಣಗಳ ಬಗ್ಗೆ ಹೇಳಿದರು. ಆದರೆ ನಿಮ್ಮನ್ನೂ ಸೇರಿಸಿ ಎಫ್.ಐ.ಆರ್. ಹಾಕಿದ್ದಾರೆ ಎನ್ನುವುದರ ಬಗ್ಗೆ ಪ್ರಸ್ತಾಪವಾಗಲಿಲ್ಲ. ಅವರು ಬರಲಿ, ಅದರ ಬಗ್ಗೆ ಕೇಳೋಣ ಸ್ವಾಮಿ.

ಶ್ರೀ ಸಿದ್ಧರಾಮಯ್ಯ : ಏಕೆ ಅವರು ಹೇಳಲಿಲ್ಲ? Why he has suppressed it? He has deliberately suppressed it.

ಅಧ್ಯಕ್ಷರು : No, no. no. Suppress ಮಾಡಿದ್ದಾರಾ? ಏನು ಇನ್‌ಫರ್ಮೇಶನ್ ಇದೆ? ಅದೆಲ್ಲಾ ಯಾವಾಗ ಬಂದಿದೆ, ಇವೆಲ್ಲಾ ಕೇಳೋಣ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ ಅವರು ಉತ್ತರವನ್ನು ನಿಮ್ಮ ಎದುರಿಗೆ ಕೊಟ್ಟರಲ್ಲಾ ಸಾರ್.

ಅಧ್ಯಕ್ಷರು : ಕೊಟ್ಟರು ಸ್ವಾಮಿ, ಆಗ ಬೆಂಕಿ ಹಾಕಿದ್ದು ಅದನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : There is a dear political conspiracy against me. I protest.

ಅಧ್ಯಕ್ಷರು : Don't come to the conclusion.

ಶ್ರೀ ಸಿದ್ದರಾಮಯ್ಯ : ಅದನ್ನು ನಾನು ವಿರೋಧ ಮಾಡುತ್ತೇನೆ. ಅವರ ಉತ್ತರವನ್ನು ನಾನು ಒಪ್ಪುವುದಿಲ್ಲ. ಅವರು ಬೇಕೆಂತಲೇ ಪೊಲೀಸ್ ಅಧಿಕಾರಿಗಳನ್ನು ಸ್ವೇಚ್ಛೆಯಾಗಿ ನನ್ನ ಮೇಲೆ ಬಿಟ್ಟಿದ್ದಾರೆ. ಅಧಿಕಾರಗಳನ್ನು ನನ್ನ ಮೇಲೆ ಬಿಟ್ಟು ಅರೆಸ್ಟ್ ಮಾಡಿಸುವುದಕ್ಕೆ ಹೊರಟಿದ್ದಾರೆ. ಇದಕ್ಕೆಲ್ಲಾ ನಾನು ಹೆದರುವವನಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ರಾಜಕೀಯವಾಗಿ ನನ್ನನ್ನು ತುಳಿಯಲು ಈ ರೀತಿಯಾಗಿ

ಅಧಿಕಾರಿಗಳನ್ನು ಬಿಟ್ಟು ಈ ರೀತಿ ಮಾಡುವುದಾದರೆ ಈ ಸರ್ಕಾರದ ವಿರುದ್ಧ ಹೋರಾಟವನ್ನು ಮಾಡುತ್ತೇವೆ. ಆದರೆ ಈ ರೀತಿ ಸರ್ಕಾರದ ಪರವಾಗಿ ಉತ್ತರ ಕೊಡುವಾಗ, he should not suppress the fact. This means, misleading the House.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನೀವು ಪತ್ರವನ್ನು ಓದುವಾಗ ಬಸ್‌ಗೆ ಬೆಂಕಿ ಹಾಕಿರತಕ್ಕಂಥದ್ದು, ಲೂಟಿಯಾಗಿರತಕ್ಕಂಥದ್ದು, ಇದೆಲ್ಲ ವಿಚಾರವನ್ನು ತಮಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಸಾಮಾನ್ಯವಾಗಿ ಇದುವರೆಗೂ ಯಾರು ಬಂಧನವಾದರೂ ಅಥವಾ ಬಿಡುಗಡೆಯಾದರೂ ನಾಲ್ಕು ಲೈನ್ ಕಳುಹಿಸುತ್ತಾರೆ. ನಾನು ೧೯೬೭ ರಿಂದಲೂ ಈ ಸದನದಲ್ಲಿ ಇದ್ದೇನೆ. ಇವೆಲ್ಲವನ್ನೂ ನಿಮಗೆ ಕಳುಹಿಸಬೇಕಾದರೆ ಅದನ್ನು ಗೃಹ ಮಂತ್ರಿಗಳಿಗೆ ಕಳುಹಿಸಬೇಕೇ ಹೊರತು ನಿಮಗೆ ಕಳುಹಿಸತಕ್ಕಂಥದ್ದಲ್ಲ. ಇದು ಒಂದು ಕಡೆ. ಇನ್ನು ಎರಡನೆಯದಾಗಿ ಈಗ ನೀವು ಎರಡನೆಯ ಪತ್ರವನ್ನು ಓದಿದಿರಲ್ಲಾ, ಆ ಎರಡನೆಯ ಪತ್ರವನ್ನು ತಾವು ಓದಿರತಕ್ಕಂಥದ್ದರಲ್ಲಿ ಸುಮಾರು ಆರೇಳು ಸೆಕ್ಷನ್‌ಗಳನ್ನ ಹಾಕಬೇಕು. ಒಂದು, ಎರಡಲ್ಲ, ಆರೇಳು ಸೆಕ್ಷನ್ ಗಳು, ಆದರೆ ಇಲ್ಲಿ ಹಾಕಿರುವುದೇನು ? ಕಲಂ ೭೧ರ ಪ್ರಕಾರ, ಕಕಲಂ ೭೧ರ ಪ್ರಕಾರ ಎಂದು ಹೇಳಿದ್ದಾರೆ. ಮಿಕ್ಕದ್ದು ಇಲ್ಲ, ಇದೊಂದೇ ಒಂದು. ಕಲಂ ೭೧ರ ಪ್ರಕಾರ ಮುಂಜಾಗ್ರತಾ ಕ್ರಮವಾಗಿ ಬಂದಿಸಿದ್ದೇವೆ. ಮುಗಿದುಹೋಯಿತು ಇನ್ನು ಉಳಿದಿರುವುದು ಆ ಮಿಕ್ಕಿದ್ದೆಲ್ಲವೂ ಪ್ರೂವ್ ಆಗಿಬಿಟ್ಟರೆ, ಅವೆಲ್ಲವೂ ನಿಜವಾದರೆ ಸಿದ್ದರಾಮಯ್ಯನವರು ಇನ್ನು ಹತ್ತು ವರ್ಷ ಹೊರಗೆ ಬರುವುದಕ್ಕೇ ಆಗುವುದಿಲ್ಲ. ನೀವು ಓದಿದ್ದೀರಲ್ಲಾ, ಬೆಂಕಿ ಹಾಕಿದ್ದು. ಲೂಟಿ ಮಾಡಿದ್ದು, ರಸ್ತೆಗೆ ಬಂದ್ದು, ಇವೆಲ್ಲವನ್ನೂ ಅವನ್ಯಾರೋ ಡಿ.ವೈ.ಎಸ್. ಪಿ ಇದ್ದಾನಲ್ಲ, ಸಣ್ಣ ಮನುಷ್ಯ, ಆ ಅಯೋಗ್ಯ ಇವೆಲ್ಲವನ್ನೂ ಇವರ ಮೇಲೆ ಹಾಕಿ ಇವರನ್ನು ಫಿಕ್ಸ್ ಮಾಡಿದರೆ ಹತ್ತು ವರ್ಷ ಇವರು ಹೊರಗೆ ಬರುವ ಹಾಗಿಲ್ಲ. ಗೃಹ ಮಂತ್ರಿಗಳು ರಾಜೀನಾಮೆ ಕೊಡಬೇಕಾಗುತ್ತದೆ ಈ ಸದನದಲ್ಲಿ.

ಅಧ್ಯಕ್ಷರು : ಮಾನ್ಯ ಗೃಹ ಮಂತ್ರಿಗಳನ್ನು ಕರೆಸೋಣ. ಅವರು ಏನು ಹೇಳುತ್ತಾರೆಂದು ಕೇಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿರುವಂತೆ ಮುಂಜಾನೆ ತಾವು ಈ ಸದನ ಪ್ರಾರಂಭವಾದಾಗ ಏನು ಅವರಿಂದ ಪತ್ರ ಬಂದಿತ್ತು ಆ ಪತ್ರವನ್ನು ತಾವು ಆಗಲೇ ಓದಿಬಿಟ್ಟಿದ್ದರೆ ಅದು ಒಂದೇ ದಾಖಲೆ. ಆದರೆ ಈಗೇನಾಯಿತು ಒಂದು ಪತ್ರವನ್ನು ತಮಗೆ ಮೊದಲು ಕಳುಹಿಸಿದ ಮೇಲೆ ಆ ಪೊಲೀಸ್ ಆಕ್ಟ್ ಪ್ರಕಾರ ಸೆಕ್ಷನ್ ೭೧ ಎನ್ನುವುದನ್ನು ಬಿಟ್ಟರೆ...

ಅಧ್ಯಕ್ಷರು : ಈಗಲೂ ಅಷ್ಟೇ ಅಲ್ಲವೆ ಸ್ವಾಮಿ, ಅಲ್ಲಿ ಈ ರೀತಿ ಮಾಡಿದರು, ನಾವು ರಾತ್ರಿ ೧೦.೦೦ ಗಂಟೆ ಮೇಲೆ ಅವರನ್ನು ಬಿಡುಗಡೆ ಮಾಡಿದೆವು. ಅವರು ಪ್ರತಿಭಟನೆ ಮಾಡಿ ೧.೦೦ ಗಂಟೆಯವರೆಗೆ ಧರಣಿ ಮಾಡಿ ವಾಪಸ್ಸು ಹೋಗಿದ್ದಾರೆ. ಆಮೇಲೆ ನಡೆದಿರತಕ್ಕಂಥ ಘಟನೆಗಳು ಅಗ್ನಿಶಾಮಕ ದಳ, ಕೆಎಸ್ ಆರ್ ಟಿಸಿ ಬಸ್ ಗಳು, ಇವಕ್ಕೆಲ್ಲಾ ಹಾನಿ ಮಾಡಿದ್ದಾರೆ. ಅದಕ್ಕಾಗಿ ನಾವು ಇಷ್ಟು ಜನರನ್ನು ಅರೆಸ್ಟ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆಮೇಲೆ ನಡೆದಿರುವಂತಹ ಘಟನೆಗಳು ಅಗ್ನಿಶಾಮಕ ದಳಗಳು, KSRTC ಬಸ್ ಗಳು, ಅವೆಲ್ಲಾ ಸುಟ್ಟಿದ್ದಾರೆ. ಅದಕ್ಕೆ ನಾವು ಇಷ್ಟು ಜನರನ್ನು arrest ಮಾಡಿದ್ದೇವೆ...

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಅದು ಹಾಗೆ ಮಾಡಲು ಬರುವುದಿಲ್ಲ, ಸ್ವಲ್ಪ ನಾನು ಹೇಳುವುದನ್ನು ಕೇಳಿ. ಅದು ಬರುವುದಿಲ್ಲ, ಏಕೆಂದರೆ ನಿಮ್ಮ ಹತ್ತಿರ ಕಳುಹಿಸಿದಂಥ ಪತ್ರದಲ್ಲಿ ಕೇವಲ Police Act ಕೆಳಗೆ, ಅವರು offence ಮಾಡಿದ್ದಾರೆನ್ನುವಂಥಾದ್ದನ್ನು ಕಳುಹಿಸಿದರು. ಅದು ಆದಮೇಲೆ ಅವರನ್ನು arrest ಮಾಡಿಕೊಂಡು, ಅವರೇ ಅಲ್ಲಿ ಇಟ್ಟರು. ಅವರು ಇಟ್ಟ ಮೇಲೆ continuous ಆಗಿ ಧರಣಿ ನಡೆದು, ನಿನ್ನೆ ದಿವಸ ನಾವು ಹೋಗಿ ಅವರನ್ನು ಎಬ್ಬಿಸಿದ್ದೇವೆ. ಅದು ಆದಮೇಲೆ ಇವರು ಯಾವಾಗ ಹೋಗಿ ಪ್ರಚೋದನೆ ಮಾಡಿದರು? ಬೆಂಕಿ ಹಚ್ಚೆಂದು ಯಾವಾಗ ಹೇಳಿದರು? CrPC ಪ್ರಕಾರ, ಅವರು offence ಯಾವಾಗ ಮಾಡಿದರು? ಇವೆಲ್ಲವೂ ಕೂಡ ಈ ಸದನದಲ್ಲಿ ಈಗ ಪತ್ರಿಕೆಗಳನ್ನು ನೋಡಿ ನೋಡಿ ಹೇಳಿದ್ದರಲ್ಲಾ, ಹೇಳಿದ ಮೇಲೆ ನಾವು ಇದನ್ನು ಕುಮ್ಮಕ್ಕು ಎಂದರೆ ಮತ್ತೆ ಅವರಿಗೆ ಸಿಟ್ಟು ಬರುತ್ತದೆ. ಇದು ಪ್ರಚೋದನೆಯಿಂದಲೇ ಆಗಿದ್ದು. ಮತ್ತು ಇಂಥಿಂಥಾದ್ದು ಸೇರಿಸಿಬಿಡಿ, ಇದು additional ಆಗಿ ಎಂದು ನಿಮಗೆ ಎರಡನೇ

letter ಕಳುಹಿಸಿದ್ದು. ಒಂದು ವೇಳೆ ಇದನ್ನು ೩೧ನೇ ತಾರೀಖಿನಂದು ಅವರು ಮಾಡಿದ್ದರೆ, ೧ನೇ ತಾರೀಖು ಮಾಡಿದ್ದರೆ, ಏನು ಆ ಪತ್ರವನ್ನು ಕಳುಹಿಸದ್ದರು, ಆ ಪತ್ರದ ಜೊತೆಯಲ್ಲೇ ಮುಂಜಾನೆ ಬರಬಹುದಾಗಿತ್ತು. ಏಕೆ ಬಂದಿಲ್ಲ? ಏಕೆ ಬಂದಿಲ್ಲವೆಂದರೆ...

ಅಧ್ಯಕ್ಷರು : ಆ ಪತ್ರವನ್ನು ಕೊಡಿ, ತಾವು ದಯಮಾಡಿ ಕೇಳಿ. ಅದು ಬೆಳಿಗ್ಗೆ ಬಂದಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ ಪತ್ರ ಬಂದಿದ್ದರೆ, ಏಕೆ ಮುಚ್ಚಿಟ್ಟರಿ? You have misled the House.

ಅಧ್ಯಕ್ಷರು : No, I have not misled the House.

(ಗೊಂದಲ)

ಮಾನ್ಯ ಸದಸ್ಯರು : Home Minister ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ಒಂದು ಪತ್ರ ೩೧ನೇ ತಾರೀಖಿಗೆ ಬಂದಿದೆ, ಇನ್ನೊಂದು ಪತ್ರ ೧ನೇ ತಾರೀಖಿಗೆ ಬಂದಿದೆ. ಈಗ ೨ನೇ ತಾರೀಖಿನಿಂದು ನಮ್ಮ ಆಫೀಸ್ ನಲ್ಲಿ ರಿಸೀವ್ ಮಾಡಿದ್ದಾರೆ. ಒಂದು ಪತ್ರವನ್ನು ೩೧ನೇ ತಾರೀಖಿನಂದು ರಾತ್ರಿ ನನ್ನ ರೂಮ್ ಗೆ ಕಳುಹಿಸಿದ್ದು.. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ ಈಗ ಗೃಹ ಮಂತ್ರಿಯವರನ್ನು ಸದನಕ್ಕೆ ಕರೆಸೋಣ. ಮಾನ್ಯ ಗೃಹ ಮಂತ್ರಿಯವರು ಮೇಲ್ಮನೆಯಲ್ಲಿ ಇದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಕೇಳಿ. ಈಗ ಒಂದು ಅರ್ಧ ಗಂಟೆ ಕರೆಯಬೇಕಾಗಿತ್ತು. ಈಗ ಅವರು ಇಲ್ಲ, ಇವರು ಇಲ್ಲ, ಬೆಳಿಗ್ಗೆ ಕರೆಯೋಣ.

(ಗೊಂದಲ)

ಅಧ್ಯಕ್ಷರು : ಈಗ ಗೃಹ ಸಚಿವರು ಮೇಲ್ಮನೆಯಲ್ಲಿ ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, Home Minister ಅವರು ಬರಲಿ.

ಅಧ್ಯಕ್ಷರು : ಮಾನ್ಯ ಗೃಹ ಸಚಿವರು ಮೇಲ್ಮನೆಯಲ್ಲಿ ಇದ್ದಾರೆ, ಅವರನ್ನು ಸದನಕ್ಕೆ ಕರೆಸೋಣ, ಅವರು ಏನು ವಿಚಾರವನ್ನು ಹೇಳುತ್ತಾರೆ, ಏನು information ಬಂದಿದೆಯೆಂಬುದನ್ನು latest ಆಗಿ ತಿಳಿದುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಬೆಳಿಗ್ಗೆ ೧೧.೦೦ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ ೫ ಗಂಟೆ ೪೪ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ : ೦೩ ನೇ ಏಪ್ರಿಲ್ ೨೦೦೭ರ ಮಂಗಳವಾರದಂದು ಬೆಳಿಗ್ಗೆ ೧೧.೦೦ ಗಂಟೆಗೆ ಸೇರಲು ನಿಶ್ಚಯಿಸಿತು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೦೭ (೨೨೭೨)

ಸದಸ್ಯರ ಹೆಸರು : ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಉತ್ತರಿಸುವವರು : ಶ್ರೀ ರಾಮಚಂದ್ರ ಗೌಡ (ಯೋಜನಾ ಸಚಿವರು)

ಪ್ರಶ್ನೆ